
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಆಗಸ್ಟ್ 22, 2012 ಪುಟ 20 ರೂ. 14/-

ಕೊಡಗು ಭೂಗಳ್ಳರ ನಾಡಲ್ಲ



ರಿಯಲ್ ಎಸ್ಟೇಟ್ ಗೃಹಮಂತ್ರಿ

ಂಜುಳಾ ಎಂಬ ಕಳಂಕ

ಶ್ರೀರಾಮುಲು ಎಂಬ ಪ್ರಹಸನ



ಮಂಗಳೂರು ಎಚ್ಚೆತ್ತ 'ದೊಡ್ಡವರು'



ದಾವಣಗೆರೆ ಉತ್ತರ? ದಕ್ಷಿಣ?



ಫಿಜಾ ಎಂಬ ಉಲ್ಕೆ



ಹೆಚ್ಚುತ್ತಿರುವ ಕಗ್ಗತ್ತಲನ್ನು ನಂದುತ್ತಿರುವ ಮೀಸಲಾತಿ ಓಡಿಸಬಲ್ಲದೇ?

ಒಂದು ದೇಶ ಎಷ್ಟು ಪ್ರಗತಿ ಹೊಂದಿದೆ ಎಂದು ಅರ್ಥಮಾಡಿಕೊಳ್ಳಬೇಕೆಂದರೆ ಆ ದೇಶದ ಮಹಿಳೆಯರ ಪರಿಸ್ಥಿತಿಯನ್ನು ನೋಡಿದರೆ ಸಾಕಾಗುತ್ತದೆ ಎಂದು ಹೇಳಲಾಗುತ್ತದೆ. ಭಾರತದಲ್ಲಿ ಮಾತ್ರ ಅಷ್ಟು ಸಾಲುವುದಿಲ್ಲ, ಅದರ ಜೊತೆಗೆ ಮತ್ತು ಅಷ್ಟೇ ಪ್ರಮುಖವಾಗಿ ಈ ದೇಶದ ದಲಿತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡರೆ ಮಾತ್ರ ಈ ದೇಶ ಎಷ್ಟು ಪ್ರಗತಿ ಸಾಧಿಸಿದೆ ಮತ್ತು ಎಷ್ಟು ಪ್ರಜಾತಾಂತ್ರಿಕವಾಗಿದೆ ಎಂಬುದೂ ಗೊತ್ತಾಗುತ್ತದೆ. ಅದೇರೀತಿ ಈ ನಾಡಿನಲ್ಲಿ ಅತ್ಯಂತ ಆಧುನಿಕರೆಂದು, ಪ್ರಗತಿಪರರೆಂದೂ ಕೊಚ್ಚಿಕೊಳ್ಳುವವರು ಎಷ್ಟರಮಟ್ಟಿಗೆ ಪ್ರಗತಿಪರರು ಮತ್ತು ಆಧುನಿಕರು ಎಂಬುದೂ ಸಹ ಜಾತಿವ್ಯವಸ್ಥೆಯ ಬಗ್ಗೆ ಅದರಲ್ಲೂ ಮೀಸಲಾತಿಯ ಬಗ್ಗೆ ಅವರ ನಿಲುವೇನೆಂಬುದರಲ್ಲಿ ಸ್ಪಷ್ಟವಾಗಿಬಿಡುತ್ತದೆ.

1927ರಲ್ಲಿ ಚೌದಾರ್ ಕೆರೆ. 2007ರಲ್ಲಿ ಬಿಜಾಪುರದ ಕಡಕೋಳದ ಕೆರೆ! ಈ ನಡುವಿನ 80 ವರ್ಷ ದಲಿತರ ಸಾಮಾಜಿಕ ಬದುಕಿನಲ್ಲಿ ಯಾವ ಗಮನಾರ್ಹ ಬದಲಾವಣೆಯನ್ನು ತಂದಿದೆ? ಈ ಅವಧಿಯಲ್ಲಿ ಗ್ರಾಮಗಳ ಮೇಲ್‌ರಚನೆ ಬದಲಾಗಿರಬಹುದು. ಊರಿನ ರಸ್ತೆಗಳು "ಅಭಿವೃದ್ಧಿ"ಯಾಗಿರಬಹುದು. ಆದರೆ ಕೇರಿಗಳು? ಕೇರಿಯೊಳಗಿನ ಬದುಕುಗಳು? ದಲಿತರನ್ನು ಬಹಿಷ್ಕರಿಸುವ ಮತ್ತು ದಮನ ಮಾಡುವ ತತ್‌ಕ್ಷಣದ ಶಕ್ತಿಗಳು ಬದಲಾಗಿರಬಹುದು. ಆದರೆ "ಬಹಿಷ್ಕೃತ ಭಾರತ"ದ ಬದುಕು ಬದಲಾಗಿದೆಯೇ?

ಕೇಂದ್ರ ಸರ್ಕಾರದ ನ್ಯಾಷನಲ್ ಕ್ರೈಮ್ ರೆಕಾರ್ಡ್ ಬ್ಯೂರೋ (NCRB) ಪ್ರಕಾರವೇ ಪ್ರತಿದಿನ ಮೂರು ದಲಿತ ಮಹಿಳೆಯರ ಮೇಲೆ ಅತ್ಯಾಚಾರವಾಗುತ್ತದೆ. ಇಬ್ಬರು ದಲಿತರನ್ನು ಕೊಲ್ಲಲಾಗುತ್ತದೆ. ದಲಿತರ ಎರಡು ಮನೆಗಳಿಗೆ ಬೆಂಕಿ ಹಚ್ಚಲಾಗುತ್ತದೆ. ಈ "ಸೂಪರ್ ಪವರ್"ನ ಬೆಳಕು ಇದೇ ಭಾರತದ ವಾಸ್ತವವಾದ ಬೆಲ್ಚಿ, ಪಿಪ್ರಾ, ಕೀಲ್ವೇನ್ಮಣಿ, ಕರಂಚೇಡು, ಚುಂಡೂರು, ಬೆಂಡಿಗೇರಿ-ತತ್ತೂರು, ಜಝ್ಝುರಾ, ಕಂಬಾಲಪಲ್ಲಿ, ಖೈರ್ಲಾಂಜಿಗಳನ್ನು ಕಣ್ಣಿಗೂ ಕಾಣದಂತೆ ಮಾಡುತ್ತಿದೆ. ಏಕೆಂದರೆ ಸ್ವಾತಂತ್ರ್ಯಾನಂತರದ ಕಳೆದ 63 ವರ್ಷಗಳಲ್ಲಿ ಶೈನಿಂಗ್ ಇಂಡಿಯಾದ ಬೆಳಕು ಕಂಬಾಲಪಲ್ಲಿಗಳ ಕತ್ತಲನ್ನು ಕಳೆಯುವ ಬದಲು ಹೆಚ್ಚಿಸುತ್ತಿದೆ. ಇದು ಕತ್ತಲಿನ ವಿರುದ್ಧ "ಬೆಳಕಿನ", "ಅಭಿವೃದ್ಧಿಯ" ಸಂಚೆಂದರೂ ತಪ್ಪಾಗಲಾರದು.

ಭಾರತೀಯ ಸಮಾಜ ಐತಿಹಾಸಿಕವಾಗಿ ವಿಕಸನಗೊಂಡಿದ್ದೇ ಮನುಸ್ಮೃತಿಯ ಆಧಾರದ ಮೇಲೆ. ದಲಿತರನ್ನು, ಶೂದ್ರರನ್ನು ಮತ್ತು ಮಹಿಳೆಯರನ್ನು ಬ್ರಾಹ್ಮಣ, ಕ್ಷತ್ರಿಯ ವರ್ಣಗಳ ದಾಸರನ್ನಾಗಿ ಮಾಡಿದ (ಅ)ಧಾರ್ಮಿಕ, ಸಾಮಾಜಿಕ ಸೂತ್ರಗಳ ಆಧಾರದಲ್ಲಿ, ಆದ್ದರಿಂದಲೇ ಪ್ರಪಂಚದ ಬೇರೆ ಯಾವ ದೇಶಗಳಲ್ಲೂ ಇಲ್ಲದಂಥ ಶಾಶ್ವತ ಸಾಮಾಜಿಕ ಶ್ರೇಣೀಕರಣದ ಜಾತಿಪದ್ಧತಿ ಇಲ್ಲಿ ಹುಟ್ಟಿಕೊಂಡಿತು. ಅದರ ಮೌಲ್ಯವೇ ಅಸಮಾನತೆ, ದಮನ, ದಾಸ್ಯ, ಶೋಷಣೆ. ಆದರೆ ಸಹಸ್ರಾರು ವರ್ಷಗಳಿಂದ ಇದರ ವಿರುದ್ಧ ಸತತ ಸಂಘರ್ಷವೂ ನಡೆದುಕೊಂಡು ಬಂದಿದೆ. ಬುದ್ಧ ಬಸವರು ಈ ಸಂಘರ್ಷದಲ್ಲಿ ಎದ್ದು ಕಾಣುವ ದೊಡ್ಡ ಹೆಸರುಗಳು. ಆದರೆ ಅವರು ನಡೆಸಿದ ಸಂಘರ್ಷ ಇಡೀ ಸಮಾಜದಲ್ಲಿ ಶಾಶ್ವತ ಬದಲಾವಣೆಗಳನ್ನು ತರದೆ ಒಂದೋ ದುರ್ಬಲಗೊಂಡವು ಅಥವಾ ಅದೇ ಜಾತಿ ಚೌಕಟ್ಟಿನಲ್ಲಿ ತಾವೇ ಸ್ಥಾವರವೂ ಆಗಿಬಿಟ್ಟವು.

ಆದರೆ ಅಂಬೇಡ್ಕರ್‌ರವರು ಈ ಜಾತಿವ್ಯವಸ್ಥೆಯ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ನೆಲೆಗಳ ವಿರುದ್ಧ ಸಂಘರ್ಷ ನಡೆಸುವ ಹೊತ್ತಿಗೆ ಆಧುನಿಕ ಪ್ರಜಾತಂತ್ರದ ಕಾಲಮಾನ ಉದಯವಾಗಿತ್ತು, ವಿಶ್ವದೆಲ್ಲೆಡೆ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾನತೆಗಳು ಒಪ್ಪಿತ ನಾಗರಿಕ ಮೌಲ್ಯವಾಗುತ್ತಿದ್ದ ಸಂದರ್ಭದಲ್ಲಿ ಅಂಬೇಡ್ಕರ್‌ರವರು ಜಾತಿವ್ಯವಸ್ಥೆಯ ವಿನಾಶಕ್ಕಾಗಿ ನಡೆಸಿದ ಚಳವಳಿಯನ್ನು ಭಾರತದ ಜಾತಿಗ್ರಸ್ತ ಸಾಂಪ್ರದಾಯಿಕ ಶಕ್ತಿಗಳು ಮೊದಲಿನಷ್ಟು ಬಹಿರಂಗವಾಗಿ ನಿರಾಕರಿಸಲು ಸಾಧ್ಯವಿರಲಿಲ್ಲ. ಹೀಗಾಗಿ ಅವರು ಹೊಸ ತಂತ್ರವನ್ನೇ ಅನುಸರಿಸಿದರು.

ಐತಿಹಾಸಿಕ ಅನಿವಾರ್ಯದ ಕಾರಣಕ್ಕಾಗಿ ಜಾತಿವಿನಾಶದ ಕಾರ್ಯಕ್ರಮದ ಜೊತೆ ಆದಷ್ಟೂ ಕನಿಷ್ಠ ರಾಜಿ ಮಾಡಿಕೊಂಡು ಜಾತಿವ್ಯವಸ್ಥೆಯನ್ನು ಉಳಿಸಿಕೊಳ್ಳುವುದು ಅವರ ಪ್ರತಿತಂತ್ರವಾಗಿತ್ತು. ಹೀಗಾಗಿ ಜಾತಿವಿನಾಶಕ್ಕಾಗಿ ಅಂಬೇಡ್ಕರ್ ಹಗಲಿರುಳೂ ಹೋರಾಡಿದರೂ ಸಂವಿಧಾನದಲ್ಲಿ ಕೇವಲ ಅಸ್ಪೃಶ್ಯತೆಯನ್ನು ಮಾತ್ರ ನಿಷೇಧಿಸಲಾಯಿತು. ಅಂಬೇಡ್ಕರ್‌ರವರು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಾಗಿ ಹೋರಾಡಿದರೆ ರಾಜಕೀಯ ಸಮಾನತೆಯನ್ನು ಮಾತ್ರ ಕಾನೂನುಬದ್ಧವಾಗಿ ಖಾತರಿಗೊಳಿಸಿ ಉಳಿದ ಸಮಾನತೆಗಳನ್ನು ಆಶಯಾತ್ಮಕ ಹೇಳಿಕೆಗಳನ್ನಾಗಿ ಮಾಡಿ ನಿರ್ದೇಶನಾ ತತ್ವಗಳಡಿ ಸೇರಿಸಿಬಿಡಲಾಯಿತು. ಅದರ ಭಾಗವಾಗಿಯೇ ದಲಿತರಿಗೆ ರಾಜಕೀಯ, ಶೈಕ್ಷಣಿಕ ಮತ್ತು ಔದ್ಯೋಗಿಕ ಮೀಸಲಾತಿಯನ್ನು ಸಂವಿಧಾನದಲ್ಲಿ ಶರತ್ತುಬದ್ಧವಾಗಿ ಸೇರಿಸಲಾಯಿತು. ನಂತರ ಇತರ ಹಿಂದುಳಿದ ವರ್ಗಗಳಿಗೂ ಶೈಕ್ಷಣಿಕ ಮತ್ತು ಔದ್ಯೋಗಿಕ ಮೀಸಲಾತಿಯ ವಿಸ್ತರಣೆಯನ್ನೂ ಮಾಡಲಾಯಿತು.

ಹೀಗೆ ವಂಚಿತರಿಗೆ ಇದ್ದಿದ್ದರಲ್ಲಿ ಅವಕಾಶ ಕಲ್ಪಿಸಿಕೊಡಲು ರೂಪಗೊಂಡ ಮೀಸಲಾತಿ ನೀತಿ ಒಂದು ತೀವ್ರ ಕ್ರಾಂತಿಕಾರಿ ಸ್ವರೂಪದ ಕ್ರಮವೇನಲ್ಲ, ಆದರೂ ಅದು ಒಂದು ಅತ್ಯಂತ ಅಪ್ರಜಾತಾಂತ್ರಿಕವಾದ ಮತ್ತು ಅಸಮಾನತೆಯನ್ನೇ ಉಸಿರಾಡುತ್ತಿದ್ದ ಸಮಾಜವನ್ನು ನಿಧಾನವಾಗಿ ಪ್ರಜಾತಾಂತ್ರಿಕಗೊಳಿಸುವ ಒಂದು ಅತ್ಯಂತ ಉಪಯುಕ್ತ ಕ್ರಮವಾಗಿತ್ತು. ಆದರೆ ಸಮಾನತೆ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಭ್ರಾತೃತ್ವದಂತಹ ಮೌಲ್ಯಗಳಿಗೆ ಪರಕೀಯವಾಗಿದ್ದ ಭಾರತೀಯ ಸಾಂಪ್ರದಾಯಿಕ ಸಮಾಜ ಈ ಮಂದಗಾಮಿ ಕ್ರಮಗಳನ್ನು ಸಹ ಉದ್ದಕ್ಕೂ ಹಲವು ರೀತಿಗಳಲ್ಲಿ ವಿರೋಧಿಸುತ್ತಲೇ ಬಂದಿದೆ. ಹಲವಾರು ಕಡೆಗಳಲ್ಲಿ ಮೀಸಲಾತಿ ವಿರುದ್ಧ ದಂಗೆಗಳನ್ನು ಸಂಘಟಿಸಿ ದಲಿತರ ಕಗ್ಗೊಲೆಗಳನ್ನೂ ನಡೆಸಿದೆ. ಇದಕ್ಕೆ ಮೀಸಲಾತಿ ಎಂಬುದು ತಮ್ಮ ಅವಕಾಶಗಳನ್ನು ಕಿತ್ತುಕೊಳ್ಳುತ್ತದೆ ಎಂಬ ತಪ್ಪು ತಿಳಿವಳಿಕೆಯ ಜೊತೆಜೊತೆಗೆ ಅದು ತಾವು ಕೀಳು ಎಂದು ಇದುವರೆಗೆ ಭಾವಿಸಿದ್ದ ಜನರನ್ನು ತಮ್ಮ ಸರಿಸಮಾನರನ್ನಾಗಿ ಮಾಡಿಬಿಡುತ್ತದೆ ಎಂಬ ಮೃಗೀಯ ಹಾಗೂ ಮೇಲ್ಜಾತಿ ದುರಭಿಮಾನಿ ಆಕ್ರೋಶವೂ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ.

ಆದ್ದರಿಂದಲೇ ಅವರು ಮೀಸಲಾತಿಯನ್ನು ವಿರೋಧಿಸಲು ಮುಂದಿಡುವ ಅತ್ಯಂತ ದೊಡ್ಡ ಕುತರ್ಕವೆಂದರೆ ಮೀಸಲಾತಿಯು ಅನರ್ಹರಿಗೆ, ಪ್ರತಿಭೆ ಇಲ್ಲದವರಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತದೆ ಎಂಬುದು. ಇದು ಎಷ್ಟು ವಿಷಪೂರಿತವಾದ ತರ್ಕವೆಂದರೆ ಮೀಸಲಾತಿಯನ್ನು ಬೆಂಬಲಿಸುವ ಹಲವು ಪ್ರಗತಿಪರರು ಸಹ ತಮಗೆ ಗೊತ್ತಿಲ್ಲದಂತೆ ಈ ತರ್ಕವನ್ನು ಒಪ್ಪಿಕೊಂಡುಬಿಟ್ಟಿರುತ್ತಾರೆ. ಆದರೆ ಮೀಸಲಾತಿಯ ಹಿಂದಿನ ತರ್ಕ ಅನರ್ಹ ಅಭ್ಯರ್ಥಿಗಳಿಗೆ ಅವಕಾಶವನ್ನು ಕಲ್ಪಿಸಿಕೊಡುವುದಲ್ಲ, ಬದಲಿಗೆ ಅರ್ಹರಾದ ಅಭ್ಯರ್ಥಿಗಳನ್ನು ಜಾತಿ ಪೂರ್ವಗ್ರಹಗಳಿಂದಾಗಿ ಅವಕಾಶ ನಿರಾಕರಿಸುವ ಸಮಾಜದ ಅನರ್ಹತೆಯನ್ನು ತಿದ್ದುಪಡಿ ಮಾಡಲು ಮೀಸಲಾತಿಯನ್ನು ಜಾರಿಗೆ ತರಲಾಗಿದೆ. ಐತಿಹಾಸಿಕವಾದ ಮತ್ತು ವರ್ತಮಾನದ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿಯೇ ದಲಿತರು ಸೌಲಭ್ಯ ವಂಚಿತರಾಗಿದ್ದಾರೆ. ಸ್ವಾತಂತ್ರ್ಯ ಬಂದ ಮೇಲೂ ನಮ್ಮ ಸಮಾಜದಲ್ಲಿ ಜಾತಿ ಶ್ರೇಣೀಕರಣ ಮುಂದುವರೆದಿದ್ದು ಸಮಾಜವೇ ತಾನಾಗಿ ಮುಂದೆ ಬಂದು ಸೌಲಭ್ಯ ವಂಚಿತರಿಗೆ ಸೌಲಭ್ಯವನ್ನು ಕೊಡಮಾಡುವುದಿಲ್ಲ, ಹೀಗಾಗಿ ಪ್ರಭುತ್ವ ಸಮಾಜದ ಈ ವಿಕೃತಿಯನ್ನು ಸರಿ ಮಾಡಲು ಶಾಸನಾತ್ಮಕವಾಗಿ ಮಧ್ಯಪ್ರವೇಶ ಮಾಡಬೇಕಾಗುತ್ತದೆ. ಮೀಸಲಾತಿ ಅದರಲ್ಲಿ ಒಂದು ಸಣ್ಣ ಉಪಕ್ರಮ ಅಷ್ಟೆ.

ಇನ್ನು ಪ್ರತಿಭೆ ಇದ್ದರೆ ಸಾಕು ನಾವು ಜಾತಿಯನ್ನು ಪರಿಗಣಿಸುವುದೇ ಇಲ್ಲವೆಂಬ ಭಾರತದ - ಪ್ರಮುಖವಾಗಿ ಮೇಲ್ಜಾತಿಯ ಜನರೇ ಇರುವ ಖಾಸಗಿ ಉದ್ಯಮಪತಿಗಳ - ವಾದವೂ ಎಷ್ಟು ಸುಳ್ಳೆಂಬುದನ್ನು ವಿಶ್ವವಿದ್ಯಾಲಯ ಧನ ಆಯೋಗ(ಯುಜಿಸಿ)ದ ಅಧ್ಯಕ್ಷರಾಗಿದ್ದ ಪ್ರೊ. ಸುಖದೇವ್ ಥೋರಟ್ ಅವರು ಸಾಬೀತುಪಡಿಸಿದ್ದಾರೆ. 2005ರಲ್ಲಿ ಅವರು ದೇಶದ 500 ಉದ್ಯಮಪತಿಗಳಿಗೆ ಸಮಾನ ವಿದ್ಯಾರ್ಹತೆ ಹೊಂದಿದ್ದ ಒಬ್ಬೊಬ್ಬ ದಲಿತ, ಹಿಂದುಳಿದ ಜಾತಿ, ಮುಸ್ಲಿಮ್ ಮತ್ತು ಬ್ರಾಹ್ಮಣ ಅಭ್ಯರ್ಥಿಗಳ ಹುಸಿ ಅರ್ಜಿಯನ್ನು ಕಳಿಸಿದ್ದರು. ಪ್ರತಿಭೆಯೇ ಮುಖ್ಯವಾಗಿದ್ದರೆ ಜಾತಿಭೇದವಿಲ್ಲದೆ ಎಲ್ಲರಿಗೂ ಸಂದರ್ಶನದ ಕರೆ ಬರಬೇಕಿತ್ತು, ಆದರೆ ಆದದ್ದೇನು? ಬ್ರಾಹ್ಮಣ ಹೆಸರಿನ ಅಭ್ಯರ್ಥಿಗಳಿಗೆ ಎಲ್ಲಾ ಉದ್ದಿಮೆಪತಿಗಳಿಂದಲೂ ಕರೆಬಂದಿದ್ದರೆ ದಲಿತರಿಗೆ ಶೇ.30ರಷ್ಟು ಕರೆಗಳು ಮತ್ತು ಮುಸ್ಲಿಮ್ ಅಭ್ಯರ್ಥಿಗಳಿಗೆ ಕೇವಲ ಶೇ.10ರಷ್ಟು ಕರೆಗಳು ಬಂದಿದ್ದವು. ಇದು ಪ್ರತಿಭೆ ಮತ್ತು ಅರ್ಹತೆ ಇದ್ದರೂ ಜಾತಿಪೂರ್ವಗ್ರಹವು ಹೇಗೆ ದಲಿತರನ್ನು ಮತ್ತು ಇತರ ಹಿಂದುಳಿದವರನ್ನು ಅವಕಾಶವಂಚಿತರನ್ನಾಗಿ ಮಾಡುತ್ತದೆ ಎಂಬುದಕ್ಕೆ ಒಂದು ಅಕೆಡೆಮಿಕ್ ಸಾಕ್ಷ್ಯ. ಹೀಗಾಗಿ ಇಲ್ಲಿ ಕೆಲಸ ಮಾಡುವುದು ಅನರ್ಹರಿಗೆ ಅವಕಾಶ ಸಿಕ್ಕಿಬಿಡುತ್ತದೆ ಎಂಬುದಕ್ಕಿಂತ ತಮಗಿಂತ

ನೋ ಕಾಮೆಂಟ್ಸ್

"ಸುಪ್ರೀಂ ಕೋರ್ಟು ಮತ್ತು ಪರಿಸರವಾದಿಗಳ ತೀವ್ರ ಆಕ್ರೋಶದ ನಂತರ ಗಣಿಗಾರಿಕೆಗೆ ಬ್ರೇಕ್ ಹಾಕಿ ವಶಪಡಿಸಿಕೊಂಡಿದ್ದ ಅಕ್ರಮ ಅದಿರಿನ ಹರಾಜಿನಿಂದ ಸರ್ಕಾರದ ಬೊಕ್ಕಸಕ್ಕೆ ಬಂಪರ್ ಹಣ ಹರಿದುಬಂದಿದೆ. ಇದು ಗಣಿ ಮಾಲೀಕರ ಪಾಲಾಗಿದ್ದರೆ ರಾಯಲ್ಟಿಯ ರೂಪದಲ್ಲಿ ಟನ್ನಿಗೆ 25-30 ರೂ. ಲೆಕ್ಕದಲ್ಲಿ 200 ಕೋಟಿಗಿಂತ ಹೆಚ್ಚಿನ ಮೊತ್ತ ಬರುತ್ತಿರಲಿಲ್ಲ. ಆದರೆ ಈ ಹರಾಜಿನ ಮೂಲಕ ಈಗ ಸರ್ಕಾರದ ಬೊಕ್ಕಸಕ್ಕೆ 7,000 ಕೋಟಿ ರೂ. ಹರಿದು ಬಂದಿದೆ."

-ಪತ್ರಿಕಾ ವರದಿ

"ನಿಮ್ಮಂಥ (ಅಡ್ವಾನಿಯ ಕುರಿತು) ಒಬ್ಬ ಸರ್ವೋಚ್ಚ ನಾಯಕ ಪದೇಪದೇ ನನ್ನ ವಿರುದ್ಧ ನಕಾರಾತ್ಮಕ ನಿಲುವು ತೆಗೆದುಕೊಳ್ಳುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇದೆ. ಇದರಿಂದ ನನಗೆ ತುಂಬಾ ಬೇಸರವಾಗಿದೆ. ನಿಮ್ಮ ಈ ವರ್ತನೆ ಹಿಂದಿರುವ ಸಾರಾಂಶವೇನು?"

-ಯಡಿಯೂರಪ್ಪ

"ರಾಜ್ಯವನ್ನು ನಿರಂತರ ಕಾಡುತ್ತಿರುವ ವಿದ್ಯುತ್ ಬರದ ಶಾಶ್ವತ ನಿವಾರಣೆಗಾಗಿ ಉತ್ಪಾದನೆಗೆ ಆದ್ಯತೆ ನೀಡುವುದಾಗಿ ಹೇಳಿದ್ದ ರಾಜ್ಯ ಸರ್ಕಾರ ವ್ಯತಿರಿಕ್ತ ಹಾದಿ ತುಳಿದಿದೆ. ಕಳೆದ ನಾಲ್ಕು ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆಗಿಂತ ಸುಲಭವಾದ ಮಾರ್ಗವಾದ ಖರೀದಿಗೇ ಅಧಿಕ ವೆಚ್ಚ ಮಾಡಿದೆ. 2008-12ರ ಅವಧಿಯಲ್ಲಿ 10,000 ಕೋಟಿಗೂ ಹೆಚ್ಚು ಹಣವನ್ನು ವಿದ್ಯುತ್ ಖರೀದಿಗೇ ವೆಚ್ಚ ಮಾಡಿದೆ."

-ವರದಿ

ಚಾರ್ವಾಕ




• ಶಿವಸುಂದರ

ಕೀಳುಜಾತಿಯವರು ತಮಗೆ ಸರಿಸಮನಾಗಿ ಬಿಡುತ್ತಾರೆಂಬ ಮೇಲ್ಜಾತಿ ಅಸ[illegible] ದುರಭಿಮಾನ.

ಆರ್ಥಿಕತೆಯಲ್ಲಿ ಬಂದಿರುವ 'ಮುಕ್ತಮಾರುಕಟ್ಟೆ ನೀತಿಗಳು' [illegible] ಸಮಾಜದಲ್ಲಿ ಹಿಂದೆಂದೂ ಇಲ್ಲದ ರೀತಿಯಲ್ಲಿ ಮಾನ್ಯತೆ ಮತ್ತು ಪ್ರಾಬಲ್ಯ[illegible] ಪಡೆದುಕೊಂಡಿರುವ ಸಮಾನತೆ ವಿರೋಧಿ, ಜೀವ ವಿರೋಧಿ 'ಹಿಂದೂತ್ವವಾ[illegible] ಇವೆರಡೂ ಸಹ ದಲಿತರ ಬದುಕನ್ನು ಮತ್ತಷ್ಟು ದಾರುಣಗೊಳಿಸುತ್ತಿವೆ. ಈ[illegible] ದಲಿತ ಮತ್ತು ಪ್ರಜಾತಾಂತ್ರಿಕ ಶಕ್ತಿಗಳು ಹೋರಾಟದಿಂದ ಪಡೆದುಕೊ[illegible] ಎಲ್ಲಾ ಹಕ್ಕುಗಳನ್ನು ಹೊರಗಿನಿಂದ ಮತ್ತು ಒಳಗಿನಿಂದ ಭ್ರಷ್ಟಗೊಳಿಸು[illegible] ಹೀಗಾಗಿ ಮೀಸಲಾತಿ ಮತ್ತು ದಲಿತ ವಿಮೋಚನೆಯ ಬಗ್ಗೆ ಚರ್ಚೆ ಮಾಡು[illegible] ದಲಿತ ಪ್ರಶ್ನೆ ಪ್ರಧಾನವಾಗಿ ಎರಡು ವಿಮೋಚನೆಯ[illegible] ಗುರಿಯಾಗಿರಿಸಿಕೊಂಡಿರುತ್ತದೆ. ಹಸಿವಿನಿಂದ ವಿಮೋಚನೆ ಮತ್ತು ಸಾಮಾ[illegible] ಅಪಮಾನದಿಂದ ವಿಮೋಚನೆ. ಇವೆರಡು ಸಾಧ್ಯವಾಗುವುದು ಆರ್ಥಿಕತೆ[illegible] ಮತ್ತು ಸಮಾಜದಲ್ಲಿ ಸಮಾನತೆ ನೆಲೆಯೂರಿದಾಗ ಮಾತ್ರ. ಆರ್ಥಿಕತೆ[illegible] ಸಮಾನತೆಯನ್ನು ನಿರಾಕರಿಸುವ ಶಕ್ತಿ ಬಂಡವಾಳವಾದ ಮತ್ತು ಸಮಾಜ[illegible] ಸಮಾನತೆಯನ್ನು ನಿರಾಕರಿಸುವ ಶಕ್ತಿ ಬ್ರಾಹ್ಮಣವಾದ. ಹೀಗಾಗಿ[illegible] ಅಂಬೇಡ್ಕರ್‌ರವರು "ದಲಿತರಿಗೆ ಇಬ್ಬರು ಶತ್ರುಗಳು. ಬಂಡವಾಳವಾದ ವ[illegible] ಬ್ರಾಹ್ಮಣವಾದ" ಎಂದು ಸರಿಯಾಗಿ ಬೊಟ್ಟುಮಾಡಿ ತೋರಿಸಿದ್ದರು. [illegible] ಎರಡೂ ಶತ್ರುಗಳನ್ನು ಎದುರಿಸಲು ಸಂವಿಧಾನದಲ್ಲಿ ಮೀಸಲಾತಿಯ[illegible] ಒಳಗೊಂಡಂತೆ ಹಲವಾರು ಕ್ರಮಗಳನ್ನು ಪ್ರತಿಪಾದಿಸಿದ್ದರು.

ಆದರೆ 1991ರ ನಂತರ ಜಾರಿಗೆ ಬಂದಂತೆ ಉದಾರೀಕರಣ, ಖಾಸಗೀಕ[illegible] ಮತ್ತು ಜಾಗತೀಕರಣದ ನೀತಿಗಳು ಮುಕ್ತ ಮಾರುಕಟ್ಟೆಯ ಹೆಸರಲ್ಲಿ ಆರ್[illegible] ನೀತಿಗಳನ್ನು ಸಂಪೂರ್ಣವಾಗಿ ಉದ್ಯಮಪತಿಗಳ ಪರವಾಗಿ ಬದಲಾಯಿ[illegible] ಇದಲ್ಲದೆ ಸರ್ಕಾರ ಎಲ್ಲಾ ಬಗೆಯ "ವೆಲ್‌ಫೇರ್" ಚಟುವಟಿಕೆಗಳಿಂದ[illegible]



ಅಂದರೆ ಶಿಕ್ಷಣ, ಆರೋಗ್ಯ, ಮೂಲಭೂತ ಸೌಕರ್ಯ ಇನ್ನಿತ್ಯಾದಿ ವಲಯಗ[illegible] - ಹಿಂದೆ ಸರಿಯುತ್ತಿದೆ. ಅಲ್ಲೆಲ್ಲಾ ಲಾಭಕೋರ ಮಾರುಕಟ್ಟೆ ಶಕ್ತಿ[illegible] ಆವರಿಸಿಕೊಳ್ಳುತ್ತಿವೆ. ಈ ಹೊಸ ಆರ್ಥಿಕತೆಯು ಯಾವುದೇ ಸಾಮಾ[illegible] ಜವಾಬ್ದಾರಿಯಿಂದ ಸಂಪೂರ್ಣವಾಗಿ ಮುಕ್ತವಾಗಿರುವುದರಿಂದ ಅಲ್ಲಿ ಯಾ[illegible] ಸಾಮಾಜಿಕ ನ್ಯಾಯದ ಕ್ರಮಗಳನ್ನು ಅರಸುವುದೇ ತಪ್ಪಾಗುತ್ತದೆ. ಆದ್ದರಿಂ[illegible] ಅವು ಆಧುನಿಕ ಅಗ್ರಹಾರಗಳಾಗಿ0ರೋ ಹೊಸ ವರ್ಣಾಶ್ರಮ[illegible] ಹುಟ್ಟುಹಾಕುತ್ತಿವೆ.

ಅದೇರೀತಿ "ವೆಲ್‌ಫೇರ್" ಸ್ಟೇಟ್‌ನ ಪರಿಕಲ್ಪನೆಯ ಜೊತೆಜೊತೆಗೆ ಸಾಮ[illegible] ಕ್ಷೇತ್ರದಲ್ಲಿ ಬಹುಮತದ ಸಮ್ಮತಿ ಪಡೆದುಕೊಂಡಿದ್ದ ಮೌಲ್ಯ ಸಾಮಾ[illegible] ನ್ಯಾಯ. ಆದರೆ 1991ರ ನಂತರದಲ್ಲಿ ಈ ದೇಶದ ಸಾಂಸ್ಕೃತಿಕ [illegible] ಸಾಮಾಜಿಕ ಕ್ಷೇತ್ರದಲ್ಲಿ ಸಹ ಮಹತ್ತರ ಬದಲಾವಣೆ ಆಗಿದೆ. ಈ [illegible] ಯಾವುದನ್ನು ಅನ್ಯಾಯವೆಂದು ಪರಿಗಣಿಸಲಾಗುತ್ತಿತ್ತೋ ಅವೆಲ್ಲವನ್ನು ನ್ಯಾಯ[illegible] ಬಿತ್ತರಿಸುವ ಹಿಂದೂತ್ವವಾದ ಈಗ ಇತರ ಯಾವುದೇ ಪ್ರಗತಿಪರವಾದಗಳಿಗಿಂ[illegible] ಪ್ರಬಲವಾಗಿದೆ. ಈ ಹಿಂದೂತ್ವವಾದದ ಸಾರಾಂಶವೇ ಬ್ರಾಹ್ಮಣವಾ[illegible] ಅಂಬೇಡ್ಕರ್‌ರವರು ವಿವರಿಸಿದ ಹಾಗೆ ಬ್ರಾಹ್ಮಣವಾದ ಶೋಷಣೆಯನ್ನು [illegible] ದಮನವನ್ನು ಸಹಜವೆಂದು ಒಪ್ಪಿಸುವ ಮತ್ತು ಅದರ ವಿರುದ್ಧ ಬಂಡಾಯ[illegible] ಅಮಾನ್ಯಗೊಳಿಸುವ ವಾದವಾಗಿದೆ. ಆದ್ದರಿಂದಲೇ ದಲಿತರ ಮೇಲಾ[illegible] ಇತರ ಶೋಷಿತ ವರ್ಗಗಳ ಮೇಲಾಗಲೀ ದಮನ ನಡೆಯುತ್ತಿದ್ದರೂ[illegible] ಹಿಂದೆ ಕಂಡುಬರುತ್ತಿದ್ದ ಪ್ರತಿರೋಧ ಈಗ ಸಂಘಟಿತವಾಗಿ ತೋರಿಬರು[illegible] ಒಂದು ನ್ಯಾಯಪ್ರಜ್ಞೆ ಇಲ್ಲದ ವಾತಾವರಣದಲ್ಲಿ ಯಾವುದೇ ದುರ್ಬಲ [illegible] ದಮನಿತ ಸಮುದಾಯಗಳು ತಮ್ಮ ಹಕ್ಕುಗಳಿಗಾಗಿ ಹೋರಾಡುವುದು [illegible] ಸುಲಭವಲ್ಲ.

ಸೋನಿ ಸೋರಿ ಎಂಬ ಮಹಿಳೆಯ ಆರ್ತನಾದ

...ಸೆ ವಾರ ಮೀಸಲಾತಿಯ ಬಗ್ಗೆ ಶಿವಸುಂದರ್ ...'ಚಾರ್ವಾಕ' ಅಂಕಣದಲ್ಲಿ ಬರೆದಿದ್ದಾರೆ. ಅದನ್ನು ...ದ್ದಾಗ ಕೆಲ ತಿಂಗಳ ಹಿಂದೆ ನಡೆದ ಒಂದು ... ನೆನಪಾಯಿತು.

...ಮತ್ತು ಕೆಪಿಎಸ್‌ಸಿ ಪರೀಕ್ಷೆಗಳು ನಡೆದು ...ನ್ಯಂತ ಸಾವಿರಾರು ಜನ ಅದನ್ನು ...ಕೊಂಡಿದ್ದರು. ನಮ್ಮ 'ಗೈಡ್' ಪತ್ರಿಕೆಯಲ್ಲಿ ಆ ...ಯಲ್ಲಿ ಕೇಳಲಾಗಿದ್ದ ಪ್ರಶ್ನೆಗಳಿಗೆ ಸರಿ ...ಗಳನ್ನು ಪ್ರಕಟಿಸಲು ಪಾರ್ವತೀಶ್ ಅವರಿಗೆ ...ಕೊಡಲು ಹಲವು ಯುವಕರು ಬಂದಿದ್ದರು. ...ಲ್ಲಿ ಕೆಪಿಎಸ್‌ಸಿ ಪರೀಕ್ಷೆಗಳನ್ನು ಒಂದೆರಡು ಬಾರಿ ...ದ್ದವರು.

...ಲ್ಲರೂ ಸೇರಿ ಸರಿ ಉತ್ತರಗಳನ್ನು ಕಂಡುಹಿಡಿದ ... ಸುಮ್ಮನೆ ಹರಟುತ್ತಾ ಕೂತೆವು. ಅವತ್ತು ನಮ್ಮ ...ಗೆ ಬಂದಿದ್ದ ಯುವಕರಲ್ಲಿ ಒಬ್ಬ ಮೇಲುಜಾತಿಗೆ ...ವನು. ಹೀಗೆ ಮಾತನಾಡುತ್ತಿದ್ದಾಗ ಆ ಯುವಕ ...ದ ಬಾರಿ ಈ ಪರೀಕ್ಷೆಯಲ್ಲಿ ನನಗಿಂತ 20 ...ರ್ಸ್ ಕಡಿಮೆ ಪಡೆದಿದ್ದ ಒಬ್ಬಳಿಗೆ ಉನ್ನತ ಹುದ್ದೆ ... ಆದರೆ ನನಗೆ ಯಾವ ಸ್ಥಾನವೂ ...ಲ್ಲವಾದ್ದರಿಂದ ನಾನು ಮತ್ತೆ ಈ ಪರೀಕ್ಷೆ ...ಬುವಂತಾಯಿತು" ಎಂದು ಲೊಚಗುಟ್ಟಿದ.

...ಯಾಕೆ?" ಎಂದು ನಾನು ಕೇಳಿದಾಗ ಆ ...ಕ "ಆಕೆ ಗ್ರಾಮೀಣ ಶಾಲೆಗಳಲ್ಲಿ ಓದಿದವಳು ... ಮಹಿಳೆ ಆಗಿದ್ದರಿಂದ ಆಕೆಗೆ ಈ ಎರಡೂ ...ರಿಗಳಲ್ಲಿ ವೈಟೇಜ್ ಸಿಕ್ಕಿತು. ಆದರೆ ನನಗೆ ...ಕ ಯಾವ ಮೀಸಲಾತಿಯೂ ಇಲ್ಲ. ಇಂತಹ ...ಜ್ ಕೊಡುವ ನಮ್ಮ ರಾಜ್ಯದಲ್ಲಿ ಹುಟ್ಟಿದ ... ನಾವು ಇನ್ನು ಏನೇನನ್ನು ಸುಮ್ಮನೆ ...ತವಿಸಬೇಕೋ" ಎಂದ.

...ದನ್ನು ಕೇಳಿ ಪಾರ್ವತೀಶ್ ಮತ್ತು ನನಗೆ ಅಚ್ಚರಿ ...ತು. ಶ್ರೀಮಂತ ಮತ್ತು ಮೇಲುಜಾತಿಯ ...ಬದಲ್ಲಿ ಹುಟ್ಟಿದ ಈ ಯುವಕ ಸಾಫ್ಟ್‌ವೇರ್ ...ಯರ್. ಆದರೆ ಟೆಕ್ಕಿ ಕೆಲಸ ಬಿಟ್ಟು ಐಎಎಸ್ ...ರಿ ಆಗಬೇಕೆಂದು ಪ್ರಯತ್ನಿಸುತ್ತಿರುವವನು. ... ಸಾಧ್ಯವಾಗದಿದ್ದರೆ ಕೆಎಎಸ್ ಆದರೂ ಸರಿಯೇ ... ಕೆಪಿಎಸ್‌ಸಿ ಪರೀಕ್ಷೆಗಳನ್ನೂ ಬರೆದಿರುವವನು. ...ರಿನ ಉನ್ನತ ಶಾಲೆ ಮತ್ತು ಕಾಲೇಜುಗಳಲ್ಲಿ ಓದಿರುವ, ಇಲ್ಲಿನ ಲೈಬ್ರರಿ, ಇಂಟರ್‌ನೆಟ್ ಇತ್ಯಾದಿಗಳ ಲಾಭ ಪಡೆದಿರುವ, ಯಾತಕ್ಕೂ ಕೊರತೆಯನ್ನೇ ಎದುರಿಸದಿರುವ ಈ ಯುವಕನಿಗೆ ತನಗಿಂತ ಕೇವಲ 20 ಮಾರ್ಕ್ಸ್ ಕಡಿಮೆ ಪಡೆದಿದ್ದ ಆ ಯುವತಿಯೇ ಪ್ರತಿಭಾವಂತೆ ಎಂಬ ವಾಸ್ತವ ಅರ್ಥವಾಗಿರಲೇ ಇಲ್ಲ.

ಇವತ್ತಿಗೂ ನಮ್ಮ ಎಷ್ಟೋ ಕುಟುಂಬಗಳಿಗೆ ತಮ್ಮ ಹೆಣ್ಣುಮಕ್ಕಳಿಗೆ ವಿದ್ಯೆ ಕೊಡಿಸಬೇಕೆಂಬ ಆಶಯವೇ ಇಲ್ಲ. ಉದಾಹರಣೆಗೆ ಇತ್ತೀಚೆಗೆ ನಮ್ಮ ಆಫೀಸಿಗೆ ಅಜ್ಜಂಪುರ ಹತ್ತಿರದ ಒಂದು ಚಿಕ್ಕ ಹಳ್ಳಿಯ ಹುಡುಗಿಯೊಬ್ಬಳು ಬಂದಿದ್ದಳು. ತನ್ನ ಹಳ್ಳಿಯಲ್ಲಿರುವ ಸರ್ಕಾರಿ ಶಾಲೆಯಲ್ಲೇ ಓದಿದ್ದ ಆ ಹುಡುಗಿ ಹತ್ತನೆ ತರಗತಿಯಲ್ಲಿ ಶೇ. 74 ಮಾರ್ಕ್ಸ್ ಪಡೆದಿದ್ದಳು. ಆದರೆ ಆಕೆಯನ್ನು ಹೆತ್ತವರು ಬಡವರು. ಮಳೆಯನ್ನೇ ಆಧರಿಸಿರುವ ತಮ್ಮ ನಾಲ್ಕೈದು ಗುಂಟೆ ಜಮೀನು ಮತ್ತು ಇತರರ ಹೊಲಗಳಲ್ಲಿ ಕೂಲಿ ಮಾಡಿ ಜೀವನ ಸಾಗಿಸುತ್ತಿರುವವರು. ಸಹಜವಾಗಿಯೇ ಅವರಿಗೆ ತಮ್ಮ ಮಗಳನ್ನು ಕಾಲೇಜಿಗೆ ಸೇರಿಸಬೇಕೆಂಬ ಆಶೆಯಾಗಲಿ, ಆರ್ಥಿಕ ಶಕ್ತಿ ಆಗಲಿ ಇಲ್ಲ. ಆದ್ದರಿಂದ ಅವರು ಆಕೆಗೆ ಮದುವೆ ಮಾಡಿ 'ಕೈತೊಳೆದುಕೊಳ್ಳಲು' ಯೋಚಿಸುತ್ತಿದ್ದರು.



ಆದರೆ ಆಕೆಗೆ ಇನ್ನೂ ಹೆಚ್ಚು ಓದುವ, ತನ್ನ ಕಾಲಮೇಲೆ ನಿಲ್ಲುವ ಆಶೆ. ಆ ಕನಸನ್ನು ನನಸಾಗಿಸಲು ಆಕೆ ಮನೆಯಿಂದ ಓಡಿಬಂದಿದ್ದಳು. ಯಾವುದಾದರೂ ಕಾಲೇಜನ್ನು ಸೇರಲು ಆರ್ಥಿಕ ನೆರವು ನೀಡುವವರಿಗಾಗಿ ಹುಡುಕಾಡುತ್ತಿದ್ದಳು. ನಮ್ಮ ಸ್ನೇಹಿತರ ನೆಟ್‌ವರ್ಕ್ ನೆರವಿನಿಂದ ಆಕೆ ಕಾಲೇಜನ್ನು ಸೇರಿದಳು ಎಂಬುದು ನೆಮ್ಮದಿಯ ವಿಷಯ.

ಹಳ್ಳಿಯೊಂದರ ಶಾಲೆಯಲ್ಲಿ ಓದಿದ್ದರೂ ಶೇ. 74 ಮಾರ್ಕ್ಸ್ ಪಡೆದಿದ್ದ ಆ ಹುಡುಗಿ ನನ್ನ ಪ್ರಕಾರ ಪ್ರತಿಭಾವಂತೆ. ಈ ಹುಡುಗಿಗೂ ಕೆಪಿಎಸ್‌ಸಿಯಲ್ಲಿ ಆ ಮೇಲುಜಾತಿಯ ಹುಡುಗನಿಗಿಂತ 20 ಮಾರ್ಕ್ಸ್ ಕಡಿಮೆ ಪಡೆದಿದ್ದ ಹುಡುಗಿಗೂ ಯಾವ ವ್ಯತ್ಯಾಸವೂ ಇಲ್ಲ. ಅವರಿಬ್ಬರೂ ಹಲವಾರು ಸವಾಲುಗಳ ನಡುವೆಯೂ ಚೆನ್ನಾಗಿ ಓದಿದ್ದ ಸಾಧಕಿಯರು. ಇಂತಹ ಪ್ರತಿಭಾವಂತ ಹುಡುಗಿಯರಿಗೆ ಗ್ರಾಮೀಣ ಮತ್ತು ಮಹಿಳೆ ಎಂಬ ಎರಡೆರಡು ಕೋಟಾಗಳ ಅಡಿ ವೈಟೇಜ್ ಕೊಡುವುದು ಅತ್ಯಗತ್ಯ ಮಾತ್ರವಲ್ಲ ನ್ಯಾಯ ಕೂಡ. ಆದರೆ ಇಷ್ಟನ್ನೂ ಅರ್ಥಮಾಡಿಕೊಳ್ಳದ ಮೇಲುಜಾತಿಯ, ಪಟ್ಟಣದ ಯುವಕರು ಇಂತಹ ನ್ಯಾಯಸಮ್ಮತ ಮೀಸಲಾತಿಯಿಂದಾಗಿ ತಮಗೆ ಅನ್ಯಾಯ ಆಗುತ್ತಿದೆ ಎಂದು ಹಲುಬುವುದು ಅಚ್ಚರಿ ಮೂಡಿಸುತ್ತದೆ.

ಶಿವಸುಂದರ್ ತಮ್ಮ ಅಂಕಣದಲ್ಲಿ ದಲಿತರು ಮತ್ತು ಹಿಂದುಳಿದ ವರ್ಗದವರ ಬಗ್ಗೆ ಬರೆದಿರುವುದರಿಂದ ನಾನು ಇಲ್ಲಿ ಗ್ರಾಮೀಣ ಪ್ರದೇಶದ ಯುವತಿಯರ ಬಗ್ಗೆ ಮಾತ್ರ ಬರೆದಿದ್ದೇನೆ. ಹೆಚ್ಚಿನ ಸವಲತ್ತುಗಳಿಲ್ಲದ ಹಳ್ಳಿಗಾಡುಗಳಲ್ಲಿ, ಕಷ್ಟಕಾರ್ಪಣ್ಯಗಳ ನಡುವೆಯೂ, ಅಸಮಾನತೆಯ ವಿರುದ್ಧವೂ ಅರಳುವ ಇಂತಹ ಮಹಿಳಾ ಪ್ರತಿಭೆಗಳಿಗೆ ಎಲ್ಲ ರೀತಿಯಲ್ಲೂ ನೆರವಾಗುವುದು ನಮ್ಮ ಸಮಾಜದ ಕರ್ತವ್ಯ.

* * * *



ಕಂಡಹಾಗೆ

editorlankesh@gmail.com ● ಗೌರಿ ಲಂಕೇಶ್

ಸೋನಿ ಸೋರಿ ಎಂಬ ಅಮಾಯಕ ಆದಿವಾಸಿ ಮಹಿಳೆಗೆ ನಕ್ಸಲ್ ಬೆಂಬಲಿಗಳು ಎಂಬ ಹಣೆಪಟ್ಟಿಕಟ್ಟಿ, ಅಕ್ರಮವಾಗಿ ಆಕೆಯನ್ನು ಜೈಲಿನಲ್ಲಿಟ್ಟು ಛತ್ತೀಸಗಢದ ಪೊಲೀಸರು ಆಕೆಗೆ ಅಮಾನವೀಯ ರೀತಿಯಲ್ಲಿ ಹಿಂಸೆ ಕೊಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಸೋನಿಯ ಗುಪ್ತಾಂಗಗಳಲ್ಲಿ ಕಲ್ಲು ತೂರುವ ಮಟ್ಟಕ್ಕೂ ಛತ್ತೀಸಗಢದ ಪೊಲೀಸರು ಮೃಗಗಳಾಗಿದ್ದರು. ಇದೆಲ್ಲ ಹೊರಬಿದ್ದ ನಂತರ ಸುಪ್ರೀಂ ಕೋರ್ಟ್ ಸೋನಿ ಸೋರಿಗೆ ದೆಹಲಿಯ ಪ್ರತಿಷ್ಠಿತ ಏಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವಂತೆ ಛತ್ತೀಸಗಢ ಸರ್ಕಾರಕ್ಕೆ ಆದೇಶಿಸಿತ್ತು. ಅದರಂತೆ ಸೋನಿಗೆ ದೆಹಲಿಯಲ್ಲಿ ಚಿಕಿತ್ಸೆ ಕೊಡಿಸಿದ ನಂತರ ಆಕೆಯನ್ನು ಮತ್ತೆ ಛತ್ತೀಸಗಢಕ್ಕೆ ಕರೆದುಕೊಂಡು ಹೋಗಿ ರಾಯಪುರ್ ಜೈಲಿನಲ್ಲಿಡಲಾಗಿದೆ.



ಸೋನಿಯ ಕೇಸಿನಲ್ಲಿ ಸ್ವತಃ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿದ್ದರಿಂದ ಛತ್ತೀಸಗಢ ಪೊಲೀಸರು ಇನ್ನು ಮೇಲಾದರೂ ಆಕೆಗೆ ಹಿಂಸೆ ಕೊಡುವುದನ್ನಾದರೂ ನಿಲ್ಲಿಸುತ್ತಾರೆ ಎಂದು ಭಾವಿಸಲಾಗಿತ್ತು. ಆದರೆ ಆ ರಾಜ್ಯದ ಪೊಲೀಸರು ಎಂತಹ ಕ್ರೂರಿಗಳು ಎಂದರೆ ಸೋನಿ ಕಳೆದ ಜುಲೈ ತಿಂಗಳ 27ರಂದು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಗೆ ಒಂದು ಪತ್ರವನ್ನು ಬರೆದು "ನೀವು ನನಗೆ ಮರಣದಂಡನೆ ಕೊಟ್ಟಿದ್ದರೆ ಅದು ಇದಕ್ಕಿಂತಲೂ ಸಹ್ಯವಾಗಿರುತ್ತಿತ್ತು" ಎಂದು ತನ್ನ ಅಸಹಾಯಕತೆಯನ್ನು ತೋಡಿಕೊಂಡಿದ್ದಾಳೆ.

ತನಗಾಗುತ್ತಿರುವ ಅನ್ಯಾಯದ ಬಗ್ಗೆ ಅಮಾಯಕ ಸೋನಿ ಬರೆದಿರುವ ಆ ಪತ್ರ ನಮ್ಮ ಪ್ರಜಾಪ್ರಭುತ್ವದ ಬಗ್ಗೆ, ವ್ಯವಸ್ಥೆಯ ಬಗ್ಗೆ, ಪೊಲೀಸರ ಕ್ರೌರ್ಯದ ಬಗ್ಗೆ ನಮ್ಮೆಲ್ಲರ ಕಣ್ಣು ತೆರೆಸುವಂತಿದೆ. ಆ ಪತ್ರದ ಅನುವಾದ ಇಲ್ಲಿದೆ:

ಸನ್ಮಾನ್ಯರೆ,

ನೀವು ಕೊಟ್ಟ ತೀರ್ಪಿನಿಂದಾಗಿ ನಾನು ಇವತ್ತು ಜೀವಂತವಾಗಿದ್ದೇನೆ. ಸರಿಯಾದ ಸಮಯದಲ್ಲಿ ನೀವು ಮಧ್ಯ ಪ್ರವೇಶಿಸಿ ನನಗೆ ವೈದ್ಯಕೀಯ ಚಿಕಿತ್ಸೆ ಕೊಡಿಸಬೇಕೆಂದು ಆದೇಶ ನೀಡಿದ್ದಿರಿ. ನಾನು ದೆಹಲಿಯ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಸಂತೋಷವಾಗಿದ್ದೆ. ಆದರೆ ನಿಮ್ಮಿಂದ ನೆರವು ಪಡೆದಿದ್ದರಿಂದ ನಾನೀಗ ದಂಡ ಕಟ್ಟಬೇಕಾಗಿ ಬಂದಿದೆ. ನನಗೆ ಇಲ್ಲಿ ಈಗ ಚಿತ್ರಹಿಂಸೆ ನೀಡಲಾಗುತ್ತಿದೆ. ನಾನು ಮಾನಸಿಕವಾಗಿ ಬಳಲುತ್ತಿದ್ದೇನೆ. ದಯಮಾಡಿ ನನ್ನ ಬಗ್ಗೆ ಕರುಣೆ ತೋರಿ ನನ್ನ ನೆರವಿಗೆ ಬನ್ನಿ.

1. ನನ್ನನ್ನು ನಗ್ನಗೊಳಿಸಿ ನೆಲದ ಮೇಲೆ ಕೂರಿಸಲಾಗುತ್ತಿದೆ.

2. ನನಗೆ ಆಹಾರವನ್ನು ನೀಡದೆ ನಾನು ಹಸಿವಿನಿಂದ ಬಳಲುವಂತೆ ಮಾಡಲಾಗುತ್ತಿದೆ.

3. ತಪಾಸಣೆಯ ಹೆಸರಿನಲ್ಲಿ ನನ್ನ ದೇಹದ ಪ್ರತಿಭಾಗವನ್ನು ಅಸಹ್ಯವಾಗಿ ಮುಟ್ಟುತ್ತಾರೆ.

4. ನಾನು ದೇಶದ್ರೋಹಿ ಎಂದೂ, ನಕ್ಸಲ್ ಎಂದೂ ಆರೋಪಿಸಿ ನನಗೆ ಚಿತ್ರಹಿಂಸೆ ನೀಡಲಾಗುತ್ತಿದೆ.

ನನ್ನ ಬಟ್ಟೆ, ಸೋಪು ಮತ್ತು ಬಟ್ಟೆ ಒಗೆಯುವ ಸಾಬೂನನ್ನೂ ವಶಪಡಿಸಿಕೊಂಡಿದ್ದಾರೆ.

ಸನ್ಮಾನ್ಯರೆ, ಇನ್ನೆಷ್ಟು ದಿನ ಛತ್ತೀಸಗಢದ ಸರ್ಕಾರ ಮತ್ತು ಪೊಲೀಸರು ನನ್ನನ್ನು ವಿವಸ್ತ್ರವಾಗಿಡಲು ಇಚ್ಛಿಸುತ್ತಿದ್ದಾರೆ? ನಾನು ಭಾರತೀಯ ಆದಿವಾಸಿ ಮಹಿಳೆ! ನನಗೂ ಮರ್ಯಾದೆ ಎಂಬುದು ಇದೆ! ಅದನ್ನು ಉಲ್ಲಂಘಿಸಿದಾಗ ನನಗೂ ನಾಚಿಕೆ ಆಗುತ್ತದೆ. ನಾನು ಯಾವ ಅಪರಾಧವನ್ನೆಸಗಿದೆ ಎಂದು ನನಗೆ ಈ ರೀತಿಯ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡಲಾಗುತ್ತಿದೆ?

ನೀವು ನನಗೆ ವೈದ್ಯಕೀಯ ಚಿಕಿತ್ಸೆ ಕೊಡಿಸುವಂತೆ ತೀರ್ಪು ನೀಡುವ ಬದಲಾಗಿ ನನಗೆ ಮರಣದಂಡನೆ ನೀಡಿದ್ದರೆ ಅದು ಇದಕ್ಕಿಂತ ಸಹ್ಯವಾಗಿರುತ್ತಿತ್ತು. ನಾನು ಇನ್ನೆಷ್ಟು ದಿನ ಇಂತಹ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಸಹಿಸಿಕೊಂಡಿರಬೇಕು? ನನ್ನ ಮೇಲಾಗುತ್ತಿರುವ ಕೃತ್ಯಗಳ ಬಗ್ಗೆ, ಇಲ್ಲಿನ ಸತ್ಯಗಳ ಬಗ್ಗೆ ನಾನು ನಿಮಗೆ ಯಾವುದೇ ಮಾಹಿತಿಯನ್ನು ಕಳುಹಿಸದಂತೆ ಜೈಲು ಅಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ. ನಾನು ಇಲ್ಲೇ, ಈ ಜೈಲಿನಲ್ಲೇ ಚಿತ್ರಹಿಂಸೆಯಿಂದಾಗಿ ಮರಣ ಹೊಂದಬೇಕೆಂಬುದು ಛತ್ತೀಸಗಢ ಸರ್ಕಾರದ ಇಚ್ಛೆ ಆಗಿರುವಂತಿದೆ. ನ್ಯಾಯಕ್ಕಾಗಿನ ನನ್ನ ದನಿ ಈ ರಾಜ್ಯದ ಹೊರಗೆ ಕೇಳಿಸದಂತೆ, ಆ ಮೂಲಕ ನಕ್ಸಲ್ ಸಮಸ್ಯೆ ಉಲ್ಬಣಗೊಳ್ಳುವಂತೆ ಮಾಡಲಾಗುತ್ತಿದೆ. ಸನ್ಮಾನ್ಯರೆ, ನಾನು ನನ್ನ ಹಕ್ಕುಗಳಿಗಾಗಿ ದನಿ ಎತ್ತಿದ್ದು ತಪ್ಪೇ? ನನಗೆ ನೀಡಲಾಗುತ್ತಿರುವ ಚಿತ್ರಹಿಂಸೆಯ ವಿರುದ್ಧ ದನಿ ಎತ್ತಿದ್ದು ತಪ್ಪೇ? ನನಗೆ ಜೀವಿಸುವ ಹಕ್ಕೇ ಇಲ್ಲವೇ? ನಾನು ಹೆತ್ತಮಕ್ಕಳಿಗೆ ಪ್ರೀತಿ ತೋರುವ ಹಕ್ಕೂ ನನಗಿಲ್ಲವೇ? ನಾನು ಇವತ್ತು ತುಂಬಾ ಗಂಭೀರಸ್ಥಿತಿಯಲ್ಲಿದ್ದೇನೆ. ವಾಸ್ತವವಾಗಿ, ಇಂತಹ ಶೋಷಣೆಯೇ ನಕ್ಸಲ್ ಸಮಸ್ಯೆ ಹೆಚ್ಚುವುದಕ್ಕೆ ಮೂಲಕಾರಣವಾಗಿದೆ.

ಸನ್ಮಾನ್ಯರೆ, ದಯವಿಟ್ಟು ನನ್ನ ಮೇಲೆ ಕರುಣೆ ತೋರಿ ನನ್ನ ಸಮಸ್ಯೆಗಳನ್ನು ನಿವಾರಿಸಿ. ಇದು ನನ್ನ ಪ್ರಾಮಾಣಿಕ ಪ್ರಾರ್ಥನೆ. ನೀವು ನನಗೆ ನೆರವಾಗದಿದ್ದರೆ ನಾನು ರಾಯಪುರ ಜೈಲಿನಲ್ಲೇ ಖಂಡಿತವಾಗಿಯೂ ಹೆಣವಾಗುತ್ತೇನೆ. ನನಗೆ ತಪ್ಪು ಔಷಧಿಯನ್ನು ಕೊಟ್ಟಿರುವುದರಿಂದ ನನ್ನ ಚರ್ಮ ಸುಟ್ಟುಹೋಗಿದೆಯಲ್ಲದೆ ನಾನು ಅಪಾರವಾದ ನೋವನ್ನು ಅನುಭವಿಸುತ್ತಿದ್ದೇನೆ.

ಸನ್ಮಾನ್ಯರೆ, ನನ್ನ ಮೇಲೆ ಕರುಣೆ ತೋರಿ.

ಪ್ರಮಾಣಗಳೊಂದಿಗೆ,


ಇಂತಿ ಅರ್ಜಿದಾರಳಾದ,
ಸೋನಿ ಸೋರಿ



ಬಿಜೆಪಿ ಹಾರಾಟ ಬೊಕ್ಕಸ ಧೂಳೀಪಟ!

ರಾಜ್ಯವನ್ನು ಉದ್ಧಾರ ಮಾಡುತ್ತೇವೆಂದು ಪೋಸುಕೊಟ್ಟು ಗದ್ದುಗೆ ಹಿಡಿದ ಈ ಬಿಜೆಪಿಗಳು ರಾಜ್ಯದ ಜನತೆಗೆ ಎಂಥಾ ದೋಖಾ ಕೊಟ್ಟಿದ್ದಾರೆಂಬುದು ಈಗ ನಿಚ್ಚಳವಾಗಿದೆ. ದಿನೇದಿನೇ ಇವರ ಹೊಸ ಹೊಸ ಅವಾಂತರಗಳು ಬಯಲಾಗುತ್ತಿದ್ದು ಬಿಜೆಪಿ ಎಂದರೇನೇ ವಾಕರಿಕೆ ಹುಟ್ಟುವಂಥ ಸ್ಥಿತಿ ನಿರ್ಮಾಣವಾಗಿದೆ.

ಜಾತಿವಾದ, ಕೋಮುವಾದ, ಭ್ರಷ್ಟಾಚಾರ, ಅನಾಚಾರ, ದುರಾಡಳಿತಗಳಲ್ಲಿ 60 ವರ್ಷಗಳ ಎಲ್ಲಾ ದಾಖಲೆಗಳನ್ನು ಮೀರಿ ಬೆಳೆದಿರುವ ಇವರು ಸರ್ಕಾರಿ ಸವಲತ್ತುಗಳ ದುರುಪಯೋಗದಲ್ಲಿ ಸಾರ್ವಕಾಲಿಕ ದಾಖಲೆ ನಿರ್ಮಿಸಿದ್ದಾರೆ. ಯಡಿಯೂರಪ್ಪ ಅಧಿಕಾರದಲ್ಲಿದ್ದ 1150 ದಿನಗಳಲ್ಲಿ ಆತ ಹೆಲಿಕಾಪ್ಟರ್‌ಗಾಗಿ ಮಾಡಿದ ವೆಚ್ಚ ಬರೋಬ್ಬರಿ 4226 ಲಕ್ಷಗಳು ಅರ್ಥಾತ್ 42 ಕೋಟಿ 26 ಲಕ್ಷಗಳು! ಅಂದರೆ ಸರಾಸರಿ ದಿನವೊಂದಕ್ಕೆ 4 ಲಕ್ಷ ರೂಪಾಯಿ ತೆರಿಗೆದಾರರ ಹಣವನ್ನು ಹೆಲಿಕಾಪ್ಟರ್ ಹಾರಾಟಕ್ಕೆ ವ್ಯಯಿಸಿದ್ದಾನೆ.





ಅಧಿಕಾರದ ಮದ ನೆತ್ತಿಗೇರಿದ್ದ ಯಡಿಯೂರಪ್ಪ ತಾನು ನಡೆದದ್ದೇ ಹಾದಿಯೆಂದು ತಿಳಿದಿದ್ದ. ಅದಕ್ಕೆ ಕೇಶವಶಿಲ್ಪದ ಆಶೀರ್ವಾದವೂ ಇತ್ತು. ಹೀಗಾಗಿ ನೆಲದ ಮೇಲೆ ಓಡಾಡುವುದನ್ನೇ ಬಿಟ್ಟುಬಿಟ್ಟಿದ್ದ ಯಡ್ಡಿ ತನಗಾಗಿ ಖಾಸಗಿ ಹೆಲಿಕಾಪ್ಟರ್‌ಗಳನ್ನು ಬಾಡಿಗೆ ಪಡೆಯುತ್ತಿದ್ದ. ಅದು ದೂರದ ವೈಷ್ಣೋದೇವಿಯದಾಗಿರಲಿ ಅಥವಾ ಹತ್ತಿರದ ರಾಮನಗರವಾಗಿರಲಿ ಯಡ್ಡಿಗೆ ಹೆಲಿಕಾಪ್ಟರೇ ಆಗಬೇಕು. ಆತ ಅಧಿಕಾರದಿಂದ ತೊಲಗುವ ಕೆಲವೇ ದಿನಗಳ ಮೊದಲು ರಾಮನಗರ ಮತ್ತು ಕನಕಪುರಗಳಿಗೆ ಹಾರಾಟ ಮಾಡಿದ್ದ. ಅದರ ವೆಚ್ಚ 51 ಲಕ್ಷದ 66 ಸಾವಿರ. ಅಂದಹಾಗೆ ಬೆಂಗಳೂರಿನಿಂದ ರಾಮನಗರ ಕೇವಲ 50 ಕಿಮೀ ದೂರವಿದ್ದರೆ ಕನಕಪುರ 65 ಕಿಮೀ ದೂರದಲ್ಲಿದೆ. ಎರಡೂ ಪಟ್ಟಣಗಳಿಗೆ ಉತ್ತಮ ರಸ್ತೆ ಸಂಪರ್ಕವಿದ್ದು ಹೈಫೈ ಕಾರುಗಳಲ್ಲಿ ಯಡ್ಡಿಗೆ ಹೆಚ್ಚೆಂದರೆ 30-40 ನಿಮಿಷದ ಪ್ರಯಾಣವಷ್ಟೆ. ಇವರ ಇಡೀ ಕ್ಯಾರವಾನ್ ಕೇವಲ 20-30 ಸಾವಿರಗಳಲ್ಲಿ ಮುಗಿದುಬಿಡುತ್ತಿತ್ತು, ಜೊತೆಗೆ ಜನರ ಹಣ ಬೊಕ್ಕಸದಲ್ಲಿ ಉಳಿಯುತ್ತಿತ್ತು.

ಹೋಗಲಿ, ಈತ ವಿಮಾನಯಾನ ಮಾಡಿದ ಘನ ಉದ್ದೇಶವಾದರೂ ಏನು? ಬಿಜೆಪಿಯೊಳಗಿನ ಕಚ್ಚಾಟದ ಸಂದರ್ಭಗಳಲ್ಲಿ ದೆಹಲಿಯಲ್ಲಿರುವ ತಮ್ಮ ಪಕ್ಷದ ವರಿಷ್ಠರ ಭೇಟಿ, ನಾಗಪುರದಲ್ಲಿರುವ ಆರೆಸ್ಸೆಸ್ ಪ್ರಭೃತಿಗಳ ಭೇಟಿ ಮುಂತಾದ ಎಲ್ಲಾ ಸಂದರ್ಭದಲ್ಲೂ ಸರ್ಕಾರಿ ಹಣದಲ್ಲಿ ವಿಶೇಷ ವಿಮಾನ ಬುಕ್ ಮಾಡಿಕೊಂಡು ಯಡ್ಡಿ ಹಾರಾಡಿದ್ದಾನೆ. ಬಳ್ಳಾರಿಯ ಗಣಿದಣಿಗಳ ಜೊತೆ ಡೀಲ್ ಕುದುರಿಸಲು ಯಡ್ಡಿ ಎಷ್ಟು ಬಾರಿ ಹಾರಾಟ ನಡೆಸಿರಬಹುದು ಎಂದು ನಿಮ್ಮಿಂದ ಊಹಿಸಲು ಸಾಧ್ಯವೆ? ಬರೋಬ್ಬರಿ 40 ಬಾರಿ ಅಂದರೆ ಯಾರಾದರೂ ನಂಬುತ್ತಾರಾ? ಹಾಗೆಯೆ ಲಿಂಗಾಯತ ಓಟ್‌ಬ್ಯಾಂಕ್ ಇರುವ ಉತ್ತರ ಕರ್ನಾಟಕದ ಹುಬ್ಬಳ್ಳಿ, ಬೀದರ್ ಮುಂತಾದ ಕಡೆಗಳಲ್ಲಿ ನಡೆದ ಕೆಲವು ಮದುವೆ ತಿಥಿ ಕಾರ್ಯಕ್ರಮಗಳಿಗೂ ಸರ್ಕಾರಿ ವೆಚ್ಚದಲ್ಲಿ ಹೆಲಿಕಾಪ್ಟರ್ ಬಳಸಲಾಗಿದೆಯೆಂದು ಮಾಹಿತಿಹಕ್ಕು ಕಾರ್ಯಕರ್ತ ಭಾಸ್ಕರನ್ ಆರೋಪಿಸುತ್ತಿದ್ದಾರೆ. ಅಂದರೆ ಯಡ್ಡಿಯ ತಿಮಿರು ಎಷ್ಟಿದ್ದಿರಬಹುದೆಂದು ನೀವೇ ಊಹಿಸಿ.

ಮಾಟ-ಮಂತ್ರ, ಮಠ-ಮಾನ್ಯ ಅಂತಾ ಸುತ್ತಾಡೋದರಲ್ಲಿ ಯಡ್ಡಿ ಫೇಮಸ್ ತಾನೇ? ಅದಕ್ಕೂ ಹೆಲಿಕಾಪ್ಟರ್ ಅಥವಾ ವಿಶೇಷ ವಿಮಾನವೇ ಆಗಬೇಕು. ಇದೇ ಚಾನ್ಸು ಅಂತ ಜಮ್ಮುವಿನಲ್ಲಿರುವ ವೈಷ್ಣೋದೇವಿಗೂ ಹೋಗಿಬಂದ, ತಿರುಪತಿ ತಿಮ್ಮಪ್ಪನ ದರ್ಶನವನ್ನೂ ಮಾಡಿದ, ಕೇರಳ, ತಮಿಳುನಾಡಿನ ದೇವಸ್ಥಾನಗಳಿಗೂ ಹಾರಾಡಿದ. ಕೆಲವೊಮ್ಮೆ ಈತನ ಟೈಮ್ ಟೇಬಲ್ ಹೇಗಿರುತ್ತಿತ್ತು ಅಂದರೆ ಬೆಳಗ್ಗೆ ತಿಂಡಿ ತಿಂದು ಬೆಂಗಳೂರಿನಿಂದ ಹಾರಿದನೆಂದರೆ ಮೈಸೂರಿನ ಸುತ್ತೂರಿನಲ್ಲಿ ಇಳಿಯುತ್ತಿದ್ದ. ಅಲ್ಲಿ ಊಟ ಮುಗಿಸಿ ಮತ್ತೆ ಹಾರಿದನೆಂದರೆ ತುಮಕೂರು ಸಿದ್ದಗಂಗಾ ಮಠದಲ್ಲೇ ಟೀ ಬ್ರೇಕ್. ಅಲ್ಲಿಂದ ಮುಂದೆ ರಾತ್ರಿಯ ಊಟ ಇನ್ನೆಲ್ಲೋ...

ಆದರೂ ಯಡ್ಡಿಗೆ ಕೆಲವು ಒಳ್ಳೆಯ ಅಭ್ಯಾಸಗಳಿದ್ದವು. ಅದೇನೆಂದರೆ ಸರ್ಕಾರದ ಸವಲತ್ತುಗಳನ್ನು ಜನರಿಗೆ ತಲುಪಿಸಬೇಕೆಂದು ಭರ್ಜರಿ ಭಾಷಣ ಮಾಡುವುದು. ತನ್ನ ಸ್ವಕ್ಷೇತ್ರವಾದ ಶಿಕಾರಿಪುರಕ್ಕೆ ತಿಂಗಳಿಗೆ ಒಮ್ಮೆಯಾದರೂ ಭೇಟಿ ಕೊಡುವುದು. ಹೇಗೂ ಸರ್ಕಾರಿ ಸವಲತ್ತು ಬಿಟ್ಟಿ ಹೆಲಿಕಾಪ್ಟರ್ ಇದ್ದೇ ಇತ್ತಲ್ಲ; ಅದನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶ ಅಷ್ಟೆ. ಬೇರೇನಿಲ್ಲ.

ಅದಕ್ಕಿಂತಲೂ ಅಧ್ವಾನದ ಸಂಗತಿಯೊಂದಿದೆ ನೋಡಿ. 2010ರ ಮೇ 1 ರಿಂದ 15 ರವರೆಗೆ ಯಾವುದೇ ಪ್ರವಾಸವಿಲ್ಲ. ಆದರೂ 51.28 ಲಕ್ಷ ರೂಗಳನ್ನು ಹೆಲಿಕಾಪ್ಟರ್ ಮಾಲೀಕ ಕಂಪನಿಗೆ ಪಾವತಿಸಲಾಗಿದೆ. ಅದೇ ಜೂನ್ 1ರಿಂದ 16ರವರೆಗೆ ಯಾವುದೇ ಪ್ರವಾಸವಿಲ್ಲ, ಆದರೂ 51.28 ಲಕ್ಷ ರೂ. ಪಾವತಿಯಾಗಿದೆ. ಅದೇ ಏಪ್ರಿಲ್ 16ರಿಂದ 30ರವರೆಗೆ ಮಂಡ್ಯ ಮತ್ತು ಶಿವಮೊಗ್ಗಗಳ ಟ್ರಿಪ್ ರದ್ದಾಗಿದೆ. ಆದರೂ 51.50 ಲಕ್ಷ ರೂ. ಪಾವತಿಯಾಗಿದೆ. ಹೀಗೇಕೆ ಎಂದು ನೀವು ಕೇಳಬಹುದು. ಯಾಕೆಂದರೆ ನಿಗದಿತ ಕಾರ್ಯಕ್ರಮ ಇರಲಿ ಬಿಡಲಿ ಅಧಿಕಾರಿಗಳು ಹೆಲಿಕಾಪ್ಟರ್ ರಿಸರ್ವ್ ಮಾಡಿಟ್ಟಿರುತ್ತಿದ್ದರು. ಇದು ಯಡ್ಡಿಯ ಸ್ಟ್ಯಾಂಡಿಂಗ್ ಆರ್ಡರ್! ಬಡ ಬೋರೇಗೌಡನ ಹಣವನ್ನು ಹೀಗೆ ಅಪವ್ಯಯ ಮಾಡಿದ ಈ ಪಾಪಿಗೆ ಯಾವ ಶಿಕ್ಷೆ ನೀಡಬೇಕು?

ಆದರೂ ಯಡ್ಡಿಗೆ ಎರಡು ಬಾರಿ ಜ್ಞಾನೋದಯವಾಗಿ ಇನ್ನು ಮುಂದೆ ಹೆಲಿಕಾಪ್ಟರ್ ಪ್ರಯಾಣ ಮಾಡುವುದಿಲ್ಲವೆಂದು ಹೇಳಿಕೊಂಡ. ಅಂಥಾ ಜ್ಞಾನೋದಯದ ಗುಟ್ಟು ಏನು ಗೊತ್ತೆ? ಕೇವಲ ಪ್ರಾಣಭಯ ಅಷ್ಟೆ! ಅಂಥಾ ಜ್ಞಾನೋದಯದ ಸಂದರ್ಭಗಳನ್ನು ನೋಡಿ. ಆಂಧ್ರದ ಮುಖ್ಯಮಂತ್ರಿ ವೈಎಸ್‌ಆರ್ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಾಗ ಒಮ್ಮೆ; ಅರುಣಾಚಲಪ್ರದೇಶದ ಮುಖ್ಯಮಂತ್ರಿ ಅಪಘಾತದಲ್ಲಿ ಸತ್ತಾಗ ಮತ್ತೊಮ್ಮೆ. ಆ ಸಂದರ್ಭಗಳಲ್ಲಿ ಯಡ್ಡಿ ಪ್ರಾಣಭಯದಿಂದ ಹೆಲಿಕಾಪ್ಟರ್ ಬಿಟ್ಟು ರೈಲು ಏರಿದ್ದ. ನಂತರ ತಂತ್ರಜ್ಞರ ಸಲಹೆ ಮೇರೆಗೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಂಡು, ಹೆಲಿಕಾಪ್ಟರ್‌ಗೆ ಸ್ಯಾಟಲೈಟ್ ಫೋನ್ ಫಿಕ್ಸ್ ಮಾಡುವಂತೆ ಆದೇಶಿಸಿ ಮತ್ತೆ ತನ್ನ ಹಾರಾಟದ ಚಾಳಿ ಮುಂದುವರೆಸಿದ.

ಮುಖ್ಯಮಂತ್ರಿ ಸ್ಥಾನದಲ್ಲಿರೋರು ಹೆಲಿಕಾಪ್ಟರ್ ಅಥವಾ ವಿಶೇಷ ವಿಮಾನ ಬಳಸೋದು ಮಾಮೂಲಿ; ಅದನ್ನೆ ಒಂದು ದೊಡ್ಡ ಸುದ್ದಿ ಮಾಡ್ತಾ ಇದ್ದಾರೆ ಅಂತ ತಕರಾರು ತೆಗೆಯುವ ಮಂದಿಗೇನು ನಮ್ಮಲ್ಲಿ ಕೊರತೆಯಿಲ್ಲ, ಅವರು ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕು.


ಸರ್ಕಾರದ ಪ್ರಮುಖ ಹುದ್ದೆಯಲ್ಲಿರುವವರು ಅತ್ಯಂ[ತ] ತುರ್ತು ಸಂದರ್ಭಗಳಲ್ಲಿ, ಅಂದರೆ ನೆರೆ ಹಾವಳಿ, ಭೂಕಂಪ, ಚಂಡಮಾರುತ ಮುಂತಾದ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಅಥವಾ ಆಡಳಿತಾತ್ಮಕ ತುರ್ತು ಕಾರ್ಯಗಳ ನಿಮಿತ್ತ ಹೆಲಿಕಾಪ್ಟರ್ ಅಥವಾ ವಿಶೇಷ ವಿಮಾನಗಳನ್ನು ಬಳಸುವುದು ಸಾಮಾನ್ಯ ಸಂಗತಿ. ಅಂಥಾ ಸಂದರ್ಭದಲ್ಲಿ ಬೊಕ್ಕಸಕ್ಕೆ ಬೀಳುವ ಹೊರೆಗಿಂತಲೂ ಒಟ್ಟಾರೆ ನಾಡಿನ ಹಿತದೃಷ್ಟಿ ಮುಖ್ಯವಾಗಿರುತ್ತದೆ. ಆದರೆ ಈಗಿನ ಕಾಲದ ಬಹುಪಾಲು ರಾಜಕಾರಣಿಗಳಿಗೆ ಆತ್ಮಸಾಕ್ಷಿಯೆಂದರೇನು ಅಂತಾನೇ ಗೊತ್ತಿಲ್ಲ, ಈ ಬಿಜೆಪಿಯವರಿಗೆ ಆತ್ಮಸಾಕ್ಷಿಯೂ ಇಲ್ಲ, ಕನಿಷ್ಠ ಪಕ್ಷ ಕಾನೂನಿನ ಭಯವೂ ಇಲ್ಲ. ಹಾಗಾ[ಗಿ] ತಾವು ಏನು ಮಾಡಿದರೂ ನಮ್ಮನ್ನು ಕೇಳೋರು ಯಾರಿದ್ದಾರೆ ಎಂಬ ಗರ್ವದಿಂದ ಮೆರೆದಿದ್ದಾರೆ. ವೈಷ್ಣೋದೇವಿ ದರ್ಶನಕ್ಕೆ ಹೋಗೋದು, ಮಠ-ಮಾನ್ಯಗಳಿಗೆ ಹೋಗಿ ಕಾವಿಧಾರಿಗಳ ಕಾಲಿಗೆ ಬೀಳೋದು, ಕೇರಳ ತಮಿಳುನಾಡು[ಗಳ] ದೇವರಪೂಜೆಗೆ ಹೋಗೋದು, ಯಾರದೋ ಮದುವೆ ಮುಂಜಿಗಳಿಗೆ ಹೋಗೋದು, ಜ್ಯೋತಿಷಿಗಳನ್ನೋ ಮಂತ್ರವಾದಿಗಳನ್ನೋ ಹಿಡಿದು ತನ್ನ ತೆವಲು ತೀರಿಸಿಕೊಳ್ಳೋದು... ಇವೆಲ್ಲಾ ಯಡಿಯೂರಪ್ಪನ ಖಾ[ಸಗಿ] ವಿಷಯ. ತಮ್ಮ ಈ ಖಾಸಗಿ ತೆವಲುಗಳ[ನ್ನು] ತೀರಿಸಿಕೊಳ್ಳಲು ಸರ್ಕಾರದ ಬೊಕ್ಕಸದ ಹ[ಣ] ಸುರಿಯುತ್ತಾರೆಂದರೆ ಇವರಿಗೆ ಯಾತರಲ್ಲಿ ಹೊಡೆದರೆ ಬ[ುದ್ಧಿ] ಬರಬಹುದು?

ಇನ್ನು ಬಿಜೆಪಿ ಪಕ್ಷದ ಆಂತರಿಕ ಕೆಲಸಗಳಿಗೆ ಜ[ನರ] ತೆರಿಗೆ ಹಣ ಸುರಿಯುವ ಅಧಿಕಾರ ಇವರಿಗೆ ಕೊಟ್ಟವರಾ[ರು?] ರೆಡ್ಡಿಗಳ ಜೊತೆ ಡೀಲಿಂಗ್‌ಗಾಗಿ (ಅದೂ 40 ಬಾ[ರಿ]) ಬಳ್ಳಾರಿಗೆ, ಬಿಜೆಪಿ-ಆರೆಸ್ಸೆಸ್ ಹೈಕಮಾಂಡ್‌ನವರ ಭೇಟಿ[ಗಾಗಿ] ದೆಹಲಿ, ನಾಗಪುರಗಳಿಗೆ ಹೋಗುವುದು ಆ ಪಕ್ಷದ ಕ[ೆಲಸ]. ಅದಕ್ಕಾಗಿ ಸರ್ಕಾರದ ಸವಲತ್ತನ್ನು ದುರುಪಯೋ[ಗ] ಮಾಡಿಕೊಳ್ಳುವುದು ಲಜ್ಜೆಗೇಡಿತನದ ಕಾನೂನು ಬಾ[ಹಿರ] ಕೃತ್ಯ.

ಆದ್ದರಿಂದ ಹೀಗೆ ದುರುಪಯೋಗಮಾಡಿಕೊಂಡಿ[ರುವ] ಕೋಟ್ಯಂತರ ರೂಪಾಯಿಗಳನ್ನು ಆಯಾ ವ್ಯಕ್ತಿಗಳಿಂದ[ಲೂ] ಪಕ್ಷದಿಂದಲೂ ವಸೂಲಿ ಮಾಡುವುದೊಂದೇ ಉಳಿದಿರುವ ಮಾರ್ಗ. ಈ ಬಗ್ಗೆ ಸಾರ್ವಜನಿಕ ಹಿತ[ಾಸಕ್ತಿ] ಮೊಕದ್ದಮೆ ಹೂಡಲು ಈಗಾಗಲೇ ತಯಾರಿ ನಡೆದಿರುವ ಸುದ್ದಿ ಕೇಳಿಬಂದಿದೆ. ಈ ನೆಲದ ಕಾನೂ[ನು] ಕಾಯುತ್ತಿರುವ ಸಂಸ್ಥೆಗಳು ಇತ್ತಕಡೆ ಗಮನಹರಿಸುವಂತಾ[ಗಲಿ].


● ದೊಡ್ಡಿಪಾಳ್ಯ ನರಸಿಂಹಮೂ[ರ್ತಿ]

ಸದಾನಂದ ಗೌಡ ಎಷ್ಟು ಭಿನ್ನ?




ಸದಾನಂದ ಗೌಡನಿಗೂ ಯಡಿಯೂರಪ್ಪನಿಗೂ ಏನು ವ್ಯತ್ಯಾಸ? ಯಡಿಯೂರಪ್ಪನ ಕಿರಿಕಿರಿಮೋರೆ ಹಾಗೂ ಸದಾನಂದನ ಹಲ್‌ಕಿರಿ ಮೋರೆಗಳ ಹೊರತಾಗಿ ಭ್ರಷ್ಟಾಚಾರ ಹಾಗೂ ದುರಾಡಳಿತಗಳ ವಿಷಯದಲ್ಲಿ ಅಂಥಾ ದೊಡ್ಡ ವ್ಯತ್ಯಾಸವೇನಿಲ್ಲ. ಈ ಕೆಳಗಿನ ಉದಾಹರಣೆ ಅದನ್ನು ಅನುಮಾನಕ್ಕೆಡೆಯಿಲ್ಲದಂತೆ ಸಾಬೀತುಮಾಡುತ್ತದೆ. "ನಾನು ಅತ್ಯಂತ ಸರಳ ಜೀವಿ, ಸರ್ಕಾರಿ ವೆಚ್ಚವನ್ನು ಉಳಿಸಲು ಹೆಲಿಕಾಪ್ಟರ್ ಬಳಸದೆ ಸದಾ ರೈಲು, ಬಸ್ಸುಗಳಲ್ಲೇ ಪ್ರಯಾಣ ಮಾಡುತ್ತೇನೆ" ಎಂದೆಲ್ಲಾ ಬಂಡಲ್ ಬಿಟ್ಟಿದ್ದ ಹಲ್ಮುಖಿ ಸದಾನಂದ ತನ್ನ 8 ತಿಂಗಳ ಅಧಿಕಾರದಲ್ಲಿ ಮಾಡಿದ ಹೆಲಿಕಾಪ್ಟರ್ ಹಾರಾಟದ ವೆಚ್ಚ ಬರೋಬ್ಬರಿ 9 ಕೋಟಿಗಳು!

2011ರ ಆಗಸ್ಟ್‌ನಿಂದ 2012ರ ಮಾರ್ಚ್ ವೇಳೆಗೆ ಈ ಕಟ್ಟರ್ ಆರೆಸ್ಸೆಸ್ ಕೇಡರ್ 62 ಬಾರಿ ಹೆಲಿಕಾಪ್ಟರ್‌ನಲ್ಲಿ ಹಾರಿದ್ದಾನೆ. ಅದರ ವೆಚ್ಚ ಬರೋಬ್ಬರಿ 7.84 ಕೋಟಿಗಳು. ಇದೇ ಅವಧಿಯಲ್ಲಿ ಆತ 17 ಬಾರಿ ವಿಮಾನಯಾನ ಕೈಗೊಂಡಿದ್ದಾನೆ. ಅದರ ವೆಚ್ಚ ಒಂದು ಕೋಟಿ 22 ಲಕ್ಷಗಳು! ಒಟ್ಟಾರೆ 9 ಕೋಟಿಗಿಂತಲೂ ಹೆಚ್ಚು ಬೊಕ್ಕಸದ ಹಣವನ್ನು ಸದಾನಂದ ವಿಮಾನಯಾನಕ್ಕೆ ಸುರಿದಿದ್ದಾನೆ. ಆದರೆ ಆರೆಸ್ಸೆಸ್ ಗರಡಿಯಲ್ಲಿ ಪಳಗಿದ ಕೇಡರ್ ಆಗಿರುವುದರಿಂದ ಜನರನ್ನು ಯಾಮಾರಿಸಲು ಸರಳ ಸಜ್ಜನನಂತೆ ಪೋಸು ಕೊಟ್ಟಿದ್ದಾನೆ. ಅಷ್ಟೇ ವ್ಯತ್ಯಾಸ.



ಯಾರು ಈ ಭಾಸ್ಕರನ್?



ಈ ಬಿಜೆಪಿ ಸರ್ಕಾರದ ಆಯಕಟ್ಟಿನಲ್ಲಿರುವ ಮಂತ್ರಿ-ಮಹೋದಯರ ಬೆನ್ನುಹತ್ತಿರುವ ಮಾಹಿತಿ ಹಕ್ಕು ಹೋರಾಟಗಾರ ಭಾಸ್ಕರನ್ ಯಾರಿರಬಹುದು? ಅದರಲ್ಲೂ ಸತ್ಯ ಹರಿಶ್ಚಂದ್ರನ ಅಪರಾವತಾರದಂತೆ ಪೋಸು ಕೊಡುತ್ತಿದ್ದ ಕಾನೂನು ಸಚಿವ ಸುರೇಶ್‌ಕುಮಾರನ ನಿಜಬಣ್ಣವನ್ನು ಬಯಲಿಗೆಳೆದಿದ್ದು ಇದೇ ಭಾಸ್ಕರನ್. ಹೀಗೆ ಆಡಳಿತ ಪಕ್ಷದ ಬಂಡವಾಳವನ್ನು ಬಿಚ್ಚಿಡುತ್ತಿರುವ ಭಾಸ್ಕರನ್‌ನ ಹಿಂದೆ ಯಾರೋ ವಿರೋಧ ಪಕ್ಷದವರ ಕೈವಾಡ ಇರಬಹುದೆಂದು ಊಹಿಸುವುದು ಸಾಮಾನ್ಯ. ಆದರೆ ನಮ್ಮ ಊಹೆ ತಪ್ಪು.

38ರ ಹರೆಯದ ಎಸ್.ಭಾಸ್ಕರನ್ ಎಂಬ ಯುವಕ ಈ ಹಿಂದೆ ಬಿಜೆಪಿಯನ್ನು ಅಧಿಕಾರಕ್ಕೆ ತಂದೇ ತೀರಬೇಕೆಂದು ಹಗಲುರಾತ್ರಿ ದುಡಿದ ಕಾರ್ಯಕರ್ತನೆಂದರೆ ಬಹಳ ಮಂದಿ ನಂಬಲಿಕ್ಕಿಲ್ಲ. ಆದರೆ ಬೆಂಗಳೂರಿನ ರಾಜಾಜಿನಗರ ಕ್ಷೇತ್ರದಲ್ಲಿ ಈತ ಚಿರಪರಿಚಿತ. ಯಾಕೆಂದರೆ ಈತ 1993ರಿಂದ 2010ರವರೆಗೆ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತನಾಗಿ ಈ ಕ್ಷೇತ್ರದಲ್ಲಿ ದುಡಿದಿದ್ದಾನೆ. ರಾಜಾಜಿನಗರ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಭಾಸ್ಕರನ್ ಬಿಜೆಪಿ ಪಕ್ಷದ ಮೇಲೆ ಅಪಾರ ಭರವಸೆಯಿಟ್ಟುಕೊಂಡಿದ್ದವರು. ಸಾಧ್ವಿ ಶಿರೋಮಣಿಯಂತೆ ಪೋಸು ಕೊಡುತ್ತಿರುವ ಸುರೇಶ್‌ಕುಮಾರ್ ಪ್ರಪ್ರಥಮ ಬಾರಿಗೆ ಎಂಎಲ್‌ಎ ಆದಾಗಿನಿಂದ ಹಿಡಿದು ಬಿಜೆಪಿ ರಾಜ್ಯದ ಚುಕ್ಕಾಣಿ ಹಿಡಿಯುವವರೆಗೆ ಭಾಸ್ಕರನ್ ಶ್ರಮವೂ ಸೇರಿದೆ. ಆದರೆ ಅಧಿಕಾರಕ್ಕೆ ಬಂದ ನಂತರ ದಿನೇದಿನೇ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ, ಅನೈತಿಕ ವ್ಯವಹಾರಗಳನ್ನು ಕಂಡು ರೋಸಿಹೋದ ಭಾಸ್ಕರನ್ ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಮಾಹಿತಿ ಹಕ್ಕು ಕಾಯ್ದೆಯನ್ನು ಆಯುಧವಾಗಿ ಮಾಡಿಕೊಂಡು ಭ್ರಷ್ಟರ ಬೆನ್ನುಹತ್ತಿದ್ದಾರೆ.

"ಈ ಹಾರಾಟದಿಂದ ಹೀಗೆ ಕೋಟ್ಯಾಂತರ ರೂಪಾಯಿಗಳನ್ನು ಖಾಸಗಿ ಕಂಪನಿಯವರ ಹೊಟ್ಟೆಗೆ ಸುರಿಯುವ ಬದಲು ಅದೇ ಹಣದಲ್ಲಿ ಒಂದಲ್ಲ ಎರಡು ಆಧುನಿಕ ಹೆಲಿಕಾಪ್ಟರ್‌ಗಳನ್ನು ಸರ್ಕಾರವೇ ಕೊಳ್ಳಬಹುದಿತ್ತು, ಒಂದಷ್ಟು ಮಂದಿಗೆ ಉದ್ಯೋಗವನ್ನೂ ಕೊಡಬಹುದಿತ್ತು, ಸರ್ಕಾರಿ ಉಪಯೋಗವಿಲ್ಲದ ವೇಳೆಯಲ್ಲಿ ಬಾಡಿಗೆಗೆ ಕೊಟ್ಟು ಬೊಕ್ಕಸಕ್ಕೆ ಹಣವನ್ನೂ ಗಳಿಸಬಹುದಿತ್ತು, ಅಥವಾ ನೆರೆಹಾವಳಿಯಿಂದ ನಿರ್ವಸಿತರಾದ ಲಕ್ಷಾಂತರ ಮಂದಿಗೆ ಮನೆ ಕಟ್ಟಿಸಿಕೊಡಬಹುದಿತ್ತು" ಎಂಬ ಕಳಕಳಿ ಭಾಸ್ಕರನ್ ಅವರದು.

ಅಂದಹಾಗೆ ಪದವೀಧರರಾಗಿರುವ ಇವರು ಜೀವನೋಪಾಯಕ್ಕಾಗಿ ಖಾಸಗಿ ಬ್ಯಾಂಕೊಂದರಲ್ಲಿ ಉದ್ಯೋಗಿಯಾಗಿದ್ದಾರೆ. ಇನ್ನೊಬ್ಬರ ಎಂಜಲು ಕಾಸಿಗೆ ಕೈಯೊಡ್ಡದೆ, ಆಮಿಷಗಳಿಗೆ ಬಲಿಯಾಗದೆ ಬದುಕಬೇಕೆಂಬ ಛಲ ಹೊಂದಿದ್ದಾರೆ. ಅವರ ಪ್ರಯತ್ನ ಫಲಪ್ರದವಾಗಲಿ ಎಂದು ಹಾರೈಸೋಣ.

ಶ್ರೀರಾಮುಲು ಎಂಬ ಪ್ರಹಸನ



ಕರ್ನಾಟಕದ ಒಟ್ಟು ಜನಸಂಖ್ಯೆ ಎಷ್ಟು? ಈ ಪ್ರಶ್ನೆ ...ದರೆ ಕಳೆದ ಭಾನುವಾರ ರಾಮನಗರದಲ್ಲಿ ನಡೆದ ...ಸ್‌ಆರ್ ಕಾಂಗ್ರೆಸ್ ಪಕ್ಷದ ಸ್ವಾಭಿ'ಮಾನಿ' ಸಂಕಲ್ಪ ...ತ್ರೆಯ ಸಮಾರೋಪ ಕಾರ್ಯಕ್ರಮದಲ್ಲಿ ಬಿಎಸ್‌ಆರ್ ...ಗ್ರೆಸ್ ಪಕ್ಷದ ಅಧ್ಯಕ್ಷ ಶ್ರೀರಾಮುಲು ಹಾಗೂ ಇನ್ನಿತರ ...ಯಕರು ಪದೇಪದೇ ಹೇಳಿದಂತೆ ಕರ್ನಾಟಕದ ಆರು ...ೋಟಿ ಜನರು ಅವರ ಹಿಂದೆ ಇದ್ದಾರೆ. ಆದರೆ ಬಿಜೆಪಿಯ ...ಜಿ ಮುಖ್ಯಮಂತ್ರಿ ಯಡಿಯೂರಪ್ಪ ಕೂಡ ತನಗೆ ... ಕೋಟಿ ಜನರ ಬೆಂಬಲ ಇದೆ ಎಂದು ಪದೇ ... ಹೇಳುತ್ತಿರುತ್ತಾರೆ. ಜೊತೆಗೆ ಜೆಡಿಎಸ್ ನಾಯಕ ...ಮಾರಸ್ವಾಮಿಯವರೂ ತಮ್ಮ ಹಿಂದೆ ಆರು ಕೋಟಿ ... ಇದ್ದಾರೆ ಎನ್ನುತ್ತಿರುತ್ತಾರೆ. ಇದನ್ನೆಲ್ಲ ಲೆಕ್ಕ ಹಾಕಿದರೆ ... ರಾಜ್ಯದ ಜನಸಂಖ್ಯೆ ಎಷ್ಟಾಯ್ತು?!

ಸಿಲ್ಕ್ ರವೀಂದ್ರರ ಭೋಪರಾಕ್

ಅದೆಲ್ಲ ಇರಲಿ, ಈಗ ನಿಜ ವಿಚಾರಕ್ಕೆ ಬರೋಣ. ...ಮಾನಿ (?) ಶ್ರೀರಾಮುಲು ಹೊಸ ಪಕ್ಷ ಕಟ್ಟಲು ...ವಾರ್ಯವಾದ ಕಾರಣಗಳೇನು? ಈ ಪ್ರಶ್ನೆಗೆ ...ದ್ಧಿಜೀವಿ'ಗಳಾದ ಶ್ರೀ ರವೀಂದ್ರ ರೇಷ್ಮೆಯವರು ಅಂದಿನ ...ಯಲ್ಲಿ ಉತ್ತರ ನೀಡಿದರು. ರೇಷ್ಮೆ ಪ್ರಕಾರ "ಮೊಟ್ಟ ...ದಲನೆ. ಯದಾಗಿ ಈ ರಾಜ್ಯದಲ್ಲಿ ಹೃದಯ ...ಶಾಲ್ಯತೆವುಳ್ಳ ನಾಯಕರ ಕೊರತೆ ಇದೆ. ಅದನ್ನು ...ರಾಮುಲುರಂತಹ ಮಹಾನ್ ನಾಯಕರು ...ಬೇಕಾದ ಅನಿವಾರ್ಯತೆ ಇದೆ. ಎರಡನೆ ಯದಾಗಿ ...ಪಿ ಹೈಕಮಾಂಡ್ ಸಂಸ್ಕೃತಿಗೆ ಪರ್ಯಾಯ ವಾಗಿ ...ಭಿಮಾನಿ ಕರ್ನಾಟಕ ಸಂಸ್ಕೃತಿಯನ್ನು ಜಾರಿಗೆ ...ಬೇಕಾಗಿದೆ. ಇದೂ ಸಹ ಅಪಾರ ರಾಜಕೀಯ ಅನುಭವ ...ಂದಿರುವ ಬಿಎಸ್‌ಆರ್ ನಾಯಕರಿಂದ ಮಾತ್ರ ಸಾಧ್ಯ. ...ರನೆಯದಾಗಿ ಈಗಿರುವ ರಾಜಕೀಯ ಪಕ್ಷಗಳಲ್ಲಿ ಸಿಟ್ಟು ...ಷ, ಸೇಡು ಮತ್ತು ಜಾತಿವಾದ ತುಂಬಿದೆ. ಅದನ್ನು ...ತೆಗೆದು ಹಾಕಿ ಆ ಜಾಗದಲ್ಲಿ ಪ್ರೀತಿ, ವಿಶ್ವಾಸ, ಸ್ನೇಹ, ...ಮರಸ್ಯಗಳನ್ನು ಶ್ರೀರಾಮುಲು ತುಂಬುತ್ತಾರೆ. ಎಲ್ಲಕ್ಕಿಂತ ...ಖ್ಯವಾಗಿ ಈ ರಾಜ್ಯದಲ್ಲಿ ತಲೆಮಾರಿನ ಬದಲಾವಣೆ ...ಬೇಕಾಗಿದೆ. ತಲೆಮಾರಿನ ಬದಲಾವಣೆ ಅಂದರೆ ...ಯಸ್ಸಾದವರನ್ನು ಬದಲಿಸಿ ಮೀಸೆ ಚಿಗುರುವ ಯುವಕರನ್ನು ...ಕಾರಕ್ಕೆ ತರುವುದು ಅಲ್ಲ. ಬದಲಿಗೆ ಹೊಸಬಗೆಯ ...ತನೆ, ಧೋರಣೆ, ಮನೋಧರ್ಮ ಹಾಗೂ ಕಾರ್ಯ ...ತೆ ಇರುವವರನ್ನು ಅಧಿಕಾರಕ್ಕೆ ತರುವುದು. ಇಂತಹ ... ಸಾಮರ್ಥ್ಯವಿರುವುದು ಮಹಾನ್ ನಾಯಕ ...ರಾಮುಲು ಅವರಿಗೆ ಮಾತ್ರವೇ."

...ಅಲ್ಲಿಗೆ ರೇಷ್ಮೆ ಅವರ ಬಹುಪರಾಕ್ ಮುಗಿಯಲಿಲ್ಲ. ...ತಿ ಕಟ್ಟುಪಾಡುಗಳನ್ನು, ಪ್ರಾದೇಶಿಕ ಕಟ್ಟುಪಾಡುಗಳನ್ನು ...ರಿ ಶ್ರೀರಾಮುಲು ಬಿಎಸ್‌ಆರ್ ಕಾಂಗ್ರೆಸ್ ಪಕ್ಷವನ್ನು ...ದ್ದಾರೆ. ತನ್ಮೂಲಕ ಕರ್ನಾಟಕದ ಜನತೆಗೆ ಗುಣಮಟ್ಟದ ...ಜಕಾರಣ, ಗುಣಮಟ್ಟದ ಆಡಳಿತವನ್ನು ನೀಡುವ ಸಂಕಲ್ಪ ತೊಟ್ಟಿದ್ದಾರೆ. ಕರ್ನಾಟಕದ ಜನತೆಗೆ ಸಮೃದ್ಧತೆಯನ್ನು ಕಾಣಿಸುವ ಕನಸನ್ನು ಹೊಂದಿದ್ದಾರೆ. ಹಾಗಾಗಿ ನಾಡಿನ ಆರು ಕೋಟಿ ಜನರು ಶ್ರೀರಾಮುಲುರವರನ್ನು ಬೆಂಬಲಿಸಿ ಅವರನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿಸಿ ಕೃತಾರ್ಥರಾಗ ಬೇಕಾದ ಅನಿವಾರ್ಯತೆ ಜನರ ಮುಂದಿದೆ."

ಪಾಪ, ಶ್ರೀರಾಮುಲುನಿಂದ ಪ್ರತಿ ತಿಂಗಳು ಒಂದು ಲಕ್ಷ ರೂಪಾಯಿಗಳ ಪಗಾರ ಪಡೆಯುವ ಮೂಲಕ ಭ್ರಮಾ ಲೋಕದಲ್ಲಿ ವಿಹರಿಸುತ್ತಿರುವ ರೇಷ್ಮೆ ಅವರಿಗೆ ಈಗ ರಾಜ್ಯದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವಾಗಲೀ, ಕೋಮುವಾದಿಗಳ ಆಟಾಟೋಪಗಳಾಗಲೀ, ಬಳ್ಳಾರಿಯ ಗಣಿ ಗ್ಯಾಂಗ್ ಲೂಟಿ ಮಾಡಿದ ಅದಿರಿನ ಬಗ್ಗೆಯಾಗಲೀ ಗೊತ್ತಿಲ್ಲ.

ಶ್ರೀರಾಮುಲು ಅವರ ಬೀದರ್ ಪಾದಯಾತ್ರೆಯನ್ನು ಗಾಂಧೀಜಿಯವರ ದಂಡಿ ಯಾತ್ರೆಗೆ ಹೋಲಿಸಿದ ರೇಷ್ಮೆ ತರಹದ ಬುದ್ಧಿಜೀವಿಗಳೇ, ಗದಗ್‌ನಲ್ಲಿ ಶ್ರೀರಾಮುಲು ಅವರಿಂದ ಉಪವಾಸ ಮಾಡಿಸಿ 108 ಪ್ರಶ್ನೆ ಕೇಳಿಸಿದ ಬುದ್ಧಿಜೀವಿಗಳೇ ನಿಮ್ಮನ್ನು ಜನ ಎರಡೇ ಎರಡು ಪ್ರಶ್ನೆ ಕೇಳುತ್ತಿದ್ದಾರೆ. ಈ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವಿರಾ?

1. ಕೆಲವು ವರ್ಷಗಳ ಹಿಂದಿನ ತನಕ ಬಳ್ಳಾರಿಯಲ್ಲಿ ಅಂಡಲೆಯುತ್ತಿದ್ದ, ರೌಡಿಗಿರಿ ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಶ್ರೀರಾಮುಲುಗೆ ಇವತ್ತು ಇಷ್ಟೊಂದು ಆರ್ಥಿಕ ಬಲ ಬಂದಿದ್ದು ಹೇಗೆ?

2. ಶ್ರೀರಾಮುಲು ಅವರ ಬಳ್ಳಾರಿಯ ರಾಜಕೀಯ ಒಡನಾಡಿಗಳು ಇವತ್ತು ಎಲ್ಲಿದ್ದಾರೆ? ಮತ್ತು ಏಕೆ?

ಶ್ರೀರಾಮುಲು ರಾಜ್ಯ

ಇರಲಿ, ಇನ್ನು ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಅಗ್ರಮಾನ್ಯ ನೇತಾರರಾದ ಶ್ರೀರಾಮುಲು ಅವರು ಅದೇ ಸಭೆಯಲ್ಲಿ ಆಡಿದ ಮಾತುಗಳಂತೂ ಹಾಸ್ಯಾಸ್ಪದವಾಗಿದ್ದವು. ಇವರ ಪಕ್ಷವನ್ನು ರಾಜ್ಯದ ಜನ ಅಧಿಕಾರಕ್ಕೆ ತಂದರೆ ಈ ನಾಡಿನ ಜನರ ಭಾಗ್ಯದ ಬಾಗಿಲು ತೆರೆಯುತ್ತದಂತೆ.

ಏಕೆಂದರೆ ಶ್ರೀರಾಮುಲುವಿನ ಅಧಿಕಾರದಲ್ಲಿ ಹತ್ತನೇ ತರಗತಿ ಓದಿದ ಎಲ್ಲಾ ಮಕ್ಕಳಿಗೆ ಉಚಿತ ಲ್ಯಾಪ್‌ಟಾಪ್ ಕೊಡುತ್ತಾರಂತೆ. ಅಷ್ಟೇ ಅಲ್ಲ, ಎಲ್ಲಾ ಬಡವರ - ಅಂದರೆ ಆಟೋ ಡ್ರೈವರ್, ಮೆಕ್ಯಾನಿಕ್, ಕೂಲಿಕಾರು, ಮುಸುರೆ ತೊಳೆಯುವವರ - ಮಕ್ಕಳಿಗೆ ಶಿಕ್ಷಣ ಉಚಿತ ಕೊಡುತ್ತಾರಂತೆ. (ಈ ಮನುಷ್ಯನಿಗೆ ಈಗಾಗಲೇ ಅಸ್ತಿತ್ವದಲ್ಲಿರುವ ರೈಟ್ ಟು ಎಜುಕೇಶನ್ ಆಕ್ಟ್ ಬಗ್ಗೆಯಾಗಲೀ, ಕಡ್ಡಾಯ ಮತ್ತು ಉಚಿತ ಶಿಕ್ಷಣ ನೀತಿಗಳ ಬಗ್ಗೆಯಾಗಲೀ ಕನಿಷ್ಠ ಜ್ಞಾನವೂ ಇದ್ದಂತಿಲ್ಲ)

ಜಿಲ್ಲೆಗೊಂದು ಕಾರ್ಖಾನೆಗಳನ್ನು ಕೊಡುತ್ತಾರಂತೆ. ಆ ಕಾರ್ಖಾನೆಗಳಲ್ಲಿ ಕೆಲಸ ಸಿಗದವರೂ ಚಿಂತಿಸಬೇಕಿಲ್ಲವಂತೆ ಏಕೆಂದರೆ ಅಂಥವರಿಗೆಲ್ಲ ತಿಂಗಳಿಗೆ ತಲಾ 2,000 ರೂ.ಗಳ ಮಾಸಿಕ ಭತ್ಯೆಯನ್ನು ಸರ್ಕಾರದ ಖಜಾನೆಯಿಂದ ಕೊಡುತ್ತಾರಂತೆ.

ಹೆಣ್ಣು ಮಕ್ಕಳ ಪೋಷಕರಂತೂ ಇನ್ನು ಮುಂದೆ ಚಿಂತೆ ಮಾಡಬೇಕಾದ ಪ್ರಮೇಯವೇ ಇಲ್ಲ! ಏಕೆಂದರೆ ರಾಜ್ಯದ ಎಲ್ಲ ಹೆಣ್ಣುಮಕ್ಕಳ ಮದುವೆಯ ಜವಾಬ್ದಾರಿಯನ್ನು ಬಿಎಸ್‌ಆರ್ ಪಕ್ಷವೇ ವಹಿಸಿಕೊಳ್ಳುತ್ತದಂತೆ.

ರಾಜ್ಯದಲ್ಲಿ ಈಗ ಎರಡು ಹೊತ್ತಿನ ತುತ್ತಿಲ್ಲದೆ ಹಸಿವಿನಿಂದ ಬಳಲುತ್ತಿರುವ ಬಡವರೂ ಯೋಚನೆ ಮಾಡುವ ಅಗತ್ಯವಿಲ್ಲವಂತೆ. ಶ್ರೀರಾಮುಲು ಅವರೇ ಹೇಳಿದಂತೆ "ನಿಮಗೆ ಗೂಡ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ನೀಡುವ ಮೂಲಕ ನಿಮ್ಮನ್ನೂ ಕಾಪಾಡುತ್ತೇನೆ."

ಇಷ್ಟೆಲ್ಲ ಯೋಚಿಸಿರುವ ಶ್ರೀರಾಮುಲು ಅವರು ರಾಜ್ಯದ ರೈತರನ್ನು ಮರೆಯುವುದುಂಟೆ. ಶ್ರೀರಾಮುಲು ಮುಖ್ಯಮಂತ್ರಿ ಆದರೆ ನಾಡಿನ ರೈತರಿಗಂತೂ ಸುವರ್ಣ ದಿನಗಳೇ ಬರುತ್ತದಂತೆ. ಯಾಕೆಂದರೆ ರಾಷ್ಟ್ರೀಕೃತ ಹಾಗೂ ಸಹಕಾರಿ ಬ್ಯಾಂಕ್‌ಗಳಲ್ಲಿರುವ ರೈತರ ಸಾಲಗಳನ್ನು ಸಾರಾಸಗಟಾಗಿ ಮನ್ನಾ ಮಾಡಲು ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತಾರಂತೆ. ಜೊತೆಗೆ ರೈತರು ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಬೆಲೆ ನಿಗದಿ ಪಡಿಸುತ್ತಾರಂತೆ.

ಶ್ರೀರಾಮುಲು ಸಂಗಡಿಗರು

ಹಾಲಿ ರಾಜಕಾರಣಿಗಳನ್ನು ಕಂಡು ಬೇಸತ್ತಿರುವ ರಾಜ್ಯದ ಜನತೆಗೆ ಶ್ರೀರಾಮುಲು ಅವರ ಬಿಎಸ್‌ಆರ್ ಕಾಂಗ್ರೆಸ್ ಅನೇಕ 'ಮುತ್ಸದ್ದಿ' ನಾಯಕರನ್ನು ಪರಿಚಯಿಸುತ್ತಿದೆ. ಅವರಲ್ಲಿ ಪ್ರಮುಖರು ಈ ರಾಜ್ಯ ಕಂಡ 'ಮಹಾನ್' ನಟಿ ಮತ್ತು 'ಅಪೂರ್ವ ಕಲಾವಿದೆ' ಶ್ರೀಮತಿ ರಕ್ಷಿತಾ ಪ್ರೇಮ್, ಕನ್ನಡ ಚಿತ್ರರಂಗ ಕಂಡಿರುವ 'ಅದ್ಭುತ ಸಾಹಿತಿ' ಮತ್ತು ನಿರ್ದೇಶಕ ಪ್ರೇಮ್ (ಶ್ರೀ .ಬೋರೇಗೌಡ), 'ಕಲಾವಿದ' ರಾಜೂ ತಾಳೀಕೋಟೆ, 'ಚಿಂತಾಜನಕ ಚಿಂತಕ'ರಾದ ರವೀಂದ್ರ ರೇಷ್ಮೆ ಮತ್ತು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್ ದ್ವಾರಕಾನಾಥ್.

ಅಂದಹಾಗೆ ಈ ಹಿಂದೆ ಹಲವು ಚಳವಳಿಗಳಿಗೆ ಹಾಗೂ ಹೋರಾಟಗಳಿಗೆ ಸ್ಫೂರ್ತಿ ಗೀತೆಗಳನ್ನು ರಚಿಸಿದ್ದ ಸಾಹಿತಿ, ಗಾಯಕ ಗುರುರಾಜ ಹೊಸಕೋಟೆಯವರು ಶ್ರೀರಾಮುಲುರನ್ನು ಕುರಿತು ಒಂದು ಅದ್ಭುತ ಗೀತೆ ರಚಿಸಿದ್ದಾರೆ. ಅದು ಹೀಗಿದೆ:

"ಶ್ರೀರಾಮುಲು ಎಂಬ ರತ್ನ (!) ದೊರಕಿದೆ ಕಳೆದುಕೊಳ್ಳಬೇಡಿ,

ಬಿಎಸ್‌ಆರ್ ಕಾಂಗ್ರೆಸ್ ಪಕ್ಷ ಕಟ್ಟಿಹರು ಆಶೀರ್ವಾದ ನೀಡಿ

ಪಕ್ಷಕೆ ಬಲವನು ನೀವು ಕೊಡಿ..."

ಗಣಿ ಕಳ್ಳ ಶ್ರೀರಾಮುಲುನನ್ನು ರಾಜ್ಯದ ಭವಿಷ್ಯ ಎಂದು ಕೆಲವರು ಬಿಂಬಿಸುತ್ತಿರುವುದು ಈ ನಾಡಿನ ದುರಂತಗಳಲ್ಲಿ ಒಂದಲ್ಲದೆ ಇನ್ನೇನು?!


● ಶ್ರೀನಿವಾಸ್ ಪಿ.ಜಿ.ಹುಂಡಿ

...ಖಾದಿ ಮಂದಿಗೆ ಕ-ಮಲ ಪಕ್ಷದ ಕೊಡುಗೆ!

ಈ ಬಿಜೆಪಿ ಮಂದಿಯ ಜನಸೇವೆ(?)ಯ ಮಾರ್ಗ ...ು ಒಂದೆರಡಲ್ಲ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಜನತಾ ...ನಾರ್ದನನಿಗೆ ತಿರುಪತಿಯ ಟ್ರೇಡ್‌ಮಾರ್ಕ್ ಹಾಕಲು ... ತಂಡ ತಡವನ್ನಂತು ಮಾಡುವುದಿಲ್ಲ. ಇವರ ಕರಾಳ ...ಕರಣಗಳು ಪಕ್ಕಕ್ಕಿರಲಿ ಮಂತ್ರಿ, ಎಂಎಲ್‌ಎ, ಎಂಎಲ್‌ಸಿ ...? ಪಗಾರದ ವಿಷಯದಲ್ಲೂ ಸದ್ದಿಲ್ಲದೆ ಸಾಹಸವೊಂದು ...ಡೆದುಹೋಗಿದೆ. ಇವರ ಸಾಹಸದಿಂದಾಗಿ ತಿಂಗಳಿಗೆ ...ಲ್ಲವೆಂದರೂ 2.5 ಕೋಟಿ ರೂಪಾಯಿ ರಾಜ್ಯ ...ರ್ಕಾರದ ಬೊಕ್ಕಸ ಕೈಬಿಡುತ್ತಿರೋದು ಮಾತ್ರ ಕರ್ನಾಟಕದ ...ನಿನ ಮತ್ತೊಂದು ದುರಂತ.

...ಹಗರಣಾಧೀಶ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ...ದ್ದುಕೊಂಡು ಜನತೆಗೆ ಏನುಪಕಾರ ಮಾಡಿದರೋ ಗೊತ್ತಿಲ್ಲ? ...ದರೆ ಶಾಸಕರುಗಳಿಗೆ, ಹಾಲಿ ಮತ್ತು ಮಾಜಿ ಮಂತ್ರಿಗಳಿಗೆ ...ಸರ್ಕಾರಿ ಬೋನಸ್ ನೀಡುವ ಕೆಲಸವನ್ನಂತೂ ಮಾಡಿ ...ಹೋಗಿದ್ದಾರೆ. ಅವರು ಕಳೆದ ಜೂನ್‌ನಲ್ಲಿ ಮಂಡಿಸಿದ ...ರ್ನಾಟಕ ಶಾಸಕಾಂಗ ಸದಸ್ಯರ ವೇತನ, ...ಪಿಂಚಣಿ ಮತ್ತು ಭತ್ಯೆಗಳ ಮಸೂದೆ ...(ತಿದ್ದುಪಡಿ)-2011 ಮತ್ತು ...ರ್ನಾಟಕ ರಾಜ್ಯ ಮಂತ್ರಿಗಳ ವೇತನ ...ಮಸೂದೆ (ತಿದ್ದುಪಡಿ)-2011 ಎಂಬ ...ರಡು ಬಿಲ್‌ಗಳು ಪಕ್ಷಭೇದ ಮರೆತು ...ಲ್ಲಾ ರಾಜಕಾರಣಿಗಳ ಜೇಬು ...ತುಂಬಿಸುತ್ತಿರುವುದು ಮಾತ್ರ ಸುಳ್ಳಲ್ಲ.

ಈ ಮಸೂದೆಗಳಿಗೂ ಮುನ್ನ ...ಮುಖ್ಯಮಂತ್ರಿಯ ತಿಂಗಳ ಸಂಬಳ ...2,000 ಇದ್ದದ್ದು ಏಕಾಏಕಿ 30,000 ...ಏರಿಸಲಾಗಿದ್ದರೆ ವಾರ್ಷಿಕ ಭತ್ಯೆಯನ್ನು ...5,000 ದಿಂದ 1.5 ಲಕ್ಷಕ್ಕೆ ಏರಿಸಲಾಗಿದೆ. ಇನ್ನು ಕ್ಯಾಬಿನೆಟ್ ದರ್ಜೆಯ ಸಚಿವರುಗಳ ಸಂಬಳವನ್ನು 10,000 ದಿಂದ 25,000ಕ್ಕೆ ಏರಿಸಲಾಗಿದ್ದರೆ ರಾಜ್ಯ ದರ್ಜೆಯ ಸಚಿವರುಗಳು 8,000 ಕ್ಕೆ ಬದಲಾಗಿ 16,000 ಪಡೆಯುವ ಸೌಕರ್ಯ ಮಾಡಿಕೊಂಡಿದ್ದಾರೆ. ಇದರಲ್ಲಿ ಕ್ಯಾಬಿನೆಟ್ ಸಚಿವರುಗಳು ಮುಖ್ಯಮಂತ್ರಿಯಷ್ಟೇ ವಾರ್ಷಿಕ ಭತ್ಯೆ ಪಡೆದುಕೊಳ್ಳುತ್ತಿದ್ದರೆ ರಾಜ್ಯ ಖಾತೆ ಸಚಿವರ ವಾರ್ಷಿಕ ಭತ್ಯೆ ಎಂಬತ್ತು ಸಾವಿರ (ಈ ಮೊದಲು ನಲವತ್ತು ಸಾವಿರವಿತ್ತು). ಮುಖ್ಯಮಂತ್ರಿಯೂ ಸೇರಿದಂತೆ ಪ್ರಮುಖ ಮಂತ್ರಿಗಳಿಗೆ ಬೆಂಗಳೂರಿನಲ್ಲಿ ಸರ್ಕಾರಿ ಮನೆಯನ್ನು ನೀಡುತ್ತಿರುವುದು ಮಾತ್ರವಲ್ಲದೆ ಅದರ ನಿರ್ವಹಣೆಗೆಂದು ಈ ಮೊದಲು 5,000 ನೀಡಲಾಗುತ್ತಿತ್ತು, ಈಗದನ್ನು 10,000 ಕ್ಕೆ ಹೆಚ್ಚಿಸಿಕೊಂಡಿದ್ದಾರೆ. ಸರ್ಕಾರಿ ವಸತಿ ಗೃಹ ಪಡೆಯದ ಮಂತ್ರಿಗಳಿಗೆ ಈ ಮೊದಲು ಮನೆ ಬಾಡಿಗೆಗೆ ಅಂತ 20,000 ನೀಡಲಾಗುತ್ತಿತ್ತು, ಈಗದು 40 -ಸಾವಿರದ ಗಡಿಗೆ ಬಂದು ನಿಂತಿದೆ.



ಮುಖ್ಯಮಂತ್ರಿ ಮತ್ತು ಸಚಿವರುಗಳ ಓಡಾಟಕ್ಕೆಂದು ಈ ಮೊದಲು ತಿಂಗಳಿಗೆ 500 ಲೀಟರ್ ಪೆಟ್ರೋಲ್ ತುಂಬಿಸಲು ಸರ್ಕಾರದ ಹಣ ಖರ್ಚು ಮಾಡಲಾಗುತ್ತಿತ್ತು, ಈಗದು 750 ಲೀಟರ್‌ಗೆ ಏರಿಕೆಯಾಗಿದೆ. ಅಂದಹಾಗೆ ಮಂತ್ರಿಗಳು ಸರ್ಕಾರಿ ಕೆಲಸಕ್ಕೆಂದು ಓಡಾಡುವ ಪ್ರತಿ ಕಿಲೋಮೀಟರ್‌ಗೆ 20 ರೂಪಾಯಿ ವೇತನ ಭತ್ಯೆಯನ್ನೂ ಪಡೆದುಕೊಳ್ಳುತ್ತಿದ್ದಾರೆ. ಇದಕ್ಕೂ ಮೊದಲು ಇದು 12 ರೂಪಾಯಿ ಇತ್ತು. ರಾಜ್ಯದ ಒಳಗೇ ನಡೆಸುವ ಪ್ರವಾಸಕ್ಕೆ ದೈನಂದಿನ ಭತ್ಯೆಗೆ ಅಂತ 1,500 ರೂಪಾಯಿ ಪಡೆದು ಕೊಂಡರೆ ಹೊರರಾಜ್ಯದ ಪ್ರವಾಸಕ್ಕೆ ಪಡೆಯುವ ಭತ್ಯೆ 2,000.

ಈ ಸದವಕಾಶ ಕೇವಲ ಮಂತ್ರಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಮೇಲ್ಮನೆ ಮತ್ತು ಕೆಳಮನೆಯ ಸ್ಪೀಕರ್‌ಗಳು ಮುಖ್ಯಮಂತ್ರಿಗೆ ಸರಿಸಮನಾದ ಸಂಬಳ ಪಡೆಯುತ್ತಿದ್ದರೆ ಎಂಎಲ್‌ಎ ಮತ್ತು ಎಂಎಲ್‌ಸಿಗಳ ಪಗಾರ 10,000 ದಿಂದ 20,000 ಕ್ಕೆ ಹೆಚ್ಚಳ ಕಂಡಿದೆ.

ಸರ್ಕಾರಿ ನೌಕರರ ಮಾತಿರಲಿ ಕಸ ಗುಡಿಸುವ ಪೌರ ಕಾರ್ಮಿಕರ ವೇತನವನ್ನು 1% ಇಲ್ಲವೆ 2% ಹೆಚ್ಚಿಸಲೂ ಮೂರ್‍ನಾಲ್ಕು ಅಧಿವೇಶನಗಳಿಗಾಗುವಷ್ಟು ಕಿತ್ತಾಡಿಕೊಳ್ಳುವ ಖಾದಿ ಟೀಮು ತಮ್ಮ ಪಗಾರವನ್ನು ಏಕಾಏಕಿ 100% ನಷ್ಟು ಹೆಚ್ಚಿಸಿಕೊಳ್ಳಲು ಸಣ್ಣದೊಂದು ಸಾರ್ವಜನಿಕ ಚರ್ಚೆಗೂ ಮುಂದಾಗಿಲ್ಲ. ಹೋಗಲಿ ವೇತನ ಹೆಚ್ಚಿಸಿಕೊಂಡ ಇವರು ಅದಕ್ಕೆ ತಕ್ಕಂತೆ ತಮ್ಮ ದಕ್ಷತೆಯನ್ನೇನಾದರೂ ಹೆಚ್ಚಿಸಿಕೊಂಡಿದ್ದಾರಾ? ಪ್ರವಾಹದಿಂದ ದಿಕ್ಕೆಟ್ಟು, ಬರದಿಂದ ಬರಗೆಟ್ಟು ನಿಂತಿರುವ ರಾಜ್ಯದಲ್ಲಿ ಶಾಸಕರು, ಮಂತ್ರಿಗಳು ತಮ್ಮ ಸರ್ಕಾರಿ ಸಂಬಳವನ್ನು ಹೆಚ್ಚಿಸಿಕೊಳ್ಳಲೇ ಬೇಕಾದಷ್ಟು ನಿರ್ಗತಿಕರಾಗಿ ನಿಂತಿದ್ದರೆ? ಸಂಬಳದ ಹೊರತಾಗಿ ಬೇರೆ ಆದಾಯವನ್ನೇ ಕಾಣದಷ್ಟು ಪ್ರಾಮಾಣಿಕರಾಗಿ ಬದಲಾಗಿದ್ದಾರಾ?






ಇಂತಹ ಪ್ರಶ್ನೆಗಳನ್ನು ಕೇಳುವವರೇ ಇಲ್ಲದಿರುವಾಗ ಉತ್ತರಿಸುವ ಗೊಡವೆಯಾದರೂ ಅವರಿಗ್ಯಾಕೆ?

ಜೈ ಹೋ ಡೆಮಾಕ್ರಸಿ!

● ಗಿರೀಶ್ ತಾಳಿಕಟ್ಟೆ

ದಾವಣಗೆರೆ : ಉತ್ತರ ಧ್ರುವದಿಂ ದಕ್ಷಿಣ ಧ್ರುವಕ್ಕು



ರವೀಂದ್ರನಾಥ್ | ಸೈಪುಲ್ಲಾ | ಶಾಮನೂರು

ಕಾಂಗ್ರೆಸಿಗೆ ಜಯ ಗ್ಯಾರಂಟಿ

ಬರಲಿರುವ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಈಗ ಮೂರು ಜನರು ಟಿಕೆಟಿಗಾಗಿ ಪ್ರಯತ್ನಿಸುತ್ತಿದ್ದಾರೆ.

ಈಗಾಗಲೇ ಮೂರು ಬಾರಿ ಸ್ಪರ್ಧಿಸಿ ಸೋತಿರುವ ಯಶವಂತರಾವ್ ಟಿಕೆಟ್ ಪಡೆಯುವ ರೇಸಿನ ಮುಂಚೂಣಿಯಲ್ಲಿದ್ದಾರೆ. ಯಶವಂತರಾವ್ ಅಲ್ಲದೆ ಮಹಾನಗರ ಪಾಲಿಕೆಯ ಮಾಜಿ ಮೇಯರ್ ಎಂ.ಜಿ.ಬಕ್ಕೇಶ್ ಮತ್ತು ಹಾಲಿ ಕಾರ್ಪೋರೇಟರ್ ಲೋಕೇಶ್ ಕೂಡ ಲಾಬಿ ಬೀಸಲು ಸಿದ್ಧತೆ ನಡೆಸುತ್ತಿದ್ದಾರೆ.

ಬಿಜೆಪಿ ಟಿಕೆಟ್ ಪಡೆಯಲು ಕಾರ್ಪೋರೇಟರ್ ಲೋಕೇಶ್‌ಗೆ ಯಾವುದೇ ಅರ್ಹತೆ ಇಲ್ಲದಿದ್ದರೂ ಶಾಮನೂರು ಶಿವಶಂಕರಪ್ಪನವರ ಎದುರು ಸ್ಪರ್ಧಿಸುವ ಹುಂಬುತನವಂತೂ ಇದೆ. ಈ ಹಿಂದೆ ಈತ ಕಾಂಗ್ರೆಸ್ಸಿನಲ್ಲೇ ಇದ್ದು ಶಾಮನೂರರ ಗರಡಿಯ ಸದಸ್ಯನಾಗಿದ್ದವನು. ಆ ತಾಕತ್ತಿನಿಂದಲೇ ಈ ಹಿಂದೆ ನಗರಸಭಾ ಅಧ್ಯಕ್ಷನಾಗುವ ಭಾಗ್ಯ ಪಡೆದವನು. ವಲಸೆ ಹಕ್ಕಿ ಆದ ಲೋಕೇಶ್ ಕಾಂಗ್ರೆಸ್‌ನಿಂದ ಬಿಜೆಪಿಗೆ ನೆಗೆದು ಅಲ್ಲಿ ರಾಜಕಾರಣದ ಎರಡನೆ ಕಂತು ಶುರುಮಾಡಿದ್ದಾನೆ. ಬಣಜಿಗ ಲಿಂಗಾಯತರಾದ ಲೋಕೇಶ್ ಕ್ಷೇತ್ರದಲ್ಲಿರುವ ತನ್ನ ಜಾತ್ಯಸ್ಥ ಮತಗಳ ಮೇಲೆ ನಿಗಾಯಿಟ್ಟು ಗೆಲ್ಲುವ ಹಂಬಲದಲ್ಲಿದ್ದಾರೆ.

ಮಹಾನಗರ ಪಾಲಿಕೆಯ ಮಾಜಿ ಮೇಯರ್ ಎಂ.ಜಿ.ಬಕ್ಕೇಶರದ್ದು ಲೋಕೇಶರಿಗಿಂತ ವ್ಯತಿರಿಕ್ತ ರಾಜಕಾರಣ. ಬಕ್ಕೇಶ್ ಬಿಜೆಪಿಯವನಾದರೂ ಜಾತ್ಯತೀತ. ಈತ ಗೆದ್ದಿರುವ ವಾರ್ಡ್‌ನಲ್ಲಿ ಮುಸ್ಲಿಮರ ಮತಗಳೇ ಹೆಚ್ಚಿದ್ದರೂ ಅವರೆಲ್ಲ ಈತನನ್ನು ಎರಡು ಬಾರಿ ಗೆಲ್ಲಿಸಿದ್ದಾರೆ. ಆರ್ಥಿಕವಾಗಿ ಬಕ್ಕೇಶ್ ಶಕ್ತಿಶಾಲಿಯಾಗಿದ್ದರೂ ಜನ ಬಳಕೆ ಹೊಂದಿರುವವರು. ಇವರಿಗೆ ಬಿಜೆಪಿ ಟಿಕೆಟ್ ಕೊಡದಿದ್ದರೆ ಪಕ್ಷೇತರನಾಗಿ ಸ್ಪರ್ಧಿಸುವ ಇಂಗಿತವಿದೆ.

ಹಾಗೊಮ್ಮೆ ಯಶವಂತರಾವ್ ಬಿಜೆಪಿಯಿಂದ ನಿಂತು, ಲೋಕೇಶ್ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಮತ್ತು ಬಕ್ಕೇಶ್ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಕಾಂಗ್ರೆಸಿಗೆ ಮೊದಲ ಸುತ್ತಿನಲ್ಲೇ ಜಯ ಗ್ಯಾರಂಟಿ.

ಸದ್ಯದಲ್ಲೇ ಮತ್ತೊಂದು ವಿಧಾನಸಭಾ ಚುನಾವಣೆ ಎದುರಾಗುವುದರಿಂದ ದಾವಣಗೆರೆಯ ಧಣಿ ಶಾಮನೂರು ಶಿವಶಂಕರಪ್ಪ ಮೈಕೊಡವಿ ನಿಂತಿದ್ದಾರೆ. ನಾಲ್ಕು ವರ್ಷಗಳಿಂದ ಅವರು ಕಳೆದುಕೊಂಡಿರುವ ರಾಜಕೀಯ ವೈಭವವನ್ನು ಮತ್ತೆ ಪಡೆಯಲು ಸಜ್ಜಾಗುತ್ತಿದ್ದಾರೆ. ಅರ್ಥಾತ್ ನಲವತ್ತು ವರ್ಷಗಳ ಅವರ ರಾಜಕೀಯ ಬದುಕು ಮತ್ತೆ ಅಗ್ನಿಪರೀಕ್ಷೆಗೆ ಗುರಿಯಾಗಲಿದೆ.

ಈ ಹಿಂದೆ ಸಮಗ್ರವಾಗಿದ್ದ ದಾವಣಗೆರೆ ವಿಧಾನಸಭಾ ಕ್ಷೇತ್ರ 2008ರಲ್ಲಿ ದಾವಣಗೆರೆ ಉತ್ತರ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭೆಗಳಾಗಿ ವಿಭಜನೆಗೊಂಡಿತು. ದಾವಣಗೆರೆ ಜಿಲ್ಲೆಯ ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ದಾವಣಗೆರೆ ದಕ್ಷಿಣದಿಂದ ಶಾಮನೂರು ಶಿವಶಂಕರಪ್ಪ ಮತ್ತು ಜಗಳೂರಿನಿಂದ ಎಸ್.ವಿ.ರಾಮಚಂದ್ರ ಮಾತ್ರ ಕಾಂಗ್ರೆಸ್ ಪಕ್ಷದ ವತಿಯಿಂದ ಗೆದ್ದಿದ್ದರು. ಇದಕ್ಕೂ ಮುನ್ನ 2004ರಲ್ಲಿ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಶಾಮನೂರರ ಮಗ, ಮಾಜಿ ಮಂತ್ರಿ ಮಲ್ಲಿಕಾರ್ಜುನ ದಾವಣಗೆರೆ ಕ್ಷೇತ್ರದಿಂದ ಬಿಜೆಪಿಯ ಸಿದ್ದೇಶ್ವರ ಎದುರು ಪರಾಜಯಗೊಂಡಿದ್ದರು. ಸಂಸತ್ತಿನ ಚುನಾವಣೆಯಲ್ಲಿ ಮಲ್ಲಿಕಾರ್ಜುನರ ಸೋಲು ಮತ್ತು ವಿಧಾನಸಭೆಗೆ ಜಿಲ್ಲೆಯಲ್ಲಿ ಇತರೆ ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಸೋಲೆಂಬುದೇ ಒಂದು ರೀತಿಯಲ್ಲಿ ನಲವತ್ತು ವರ್ಷಗಳಿಂದ ದಾವಣಗೆರೆಯ ಧಣಿ ಎನಿಸಿಕೊಂಡಿದ್ದ ಶಾಮನೂರರ ಪ್ರತಿಷ್ಠೆಗೆ ಏಟು ನೀಡಿದ್ದವು. ಇದಿಷ್ಟು ಸಾಲದೆಂಬಂತೆ ಅಧಿಕಾರಕ್ಕೆ ಬಂದನಂತರ ಯಡಿಯೂರಪ್ಪನ ಸರ್ಕಾರ ಪ್ರಾರಂಭಿಸಿದ ಅನೈತಿಕ 'ಆಪರೇಷನ್ (ಕ)ಮಲ'ಕ್ಕೆ ಬಲಿಯಾದ ರಾಮಚಂದ್ರ ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿದರು. ಅಂದರೆ ಇಡೀ ಜಿಲ್ಲೆಯಲ್ಲಿ ಶಾಮನೂರು ಶಿವಶಂಕರಪ್ಪರೊಬ್ಬರೇ ಕಾಂಗ್ರೆಸ್ ಶಾಸಕರಾಗಿ ಉಳಿದರು.

ಈಗಾಗಲೇ ದಾವಣಗೆರೆಯ ಎರಡೂ ಕ್ಷೇತ್ರಗಳಲ್ಲಿ ಚುನಾವಣೆಯ ಕಾವು ಏರತೊಡಗಿದೆ. ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಹಾಲಿ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತೆ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಅವರ ಹುರುಪು ಅವರ 80 ವರ್ಷ ವಯಸ್ಸಿಗೂ ಹರೆಯದ ವಿಶ್ವಾಸ ತುಂಬಿದೆ.

ಸದ್ಯ ಇದೇ ಕ್ಷೇತ್ರದಲ್ಲಿ ಜೆಡಿಎಸ್, ಬಿಜೆಪಿ, ಬಿಎಸ್‌ಆರ್ ಪಕ್ಷಗಳಿಂದ ಸ್ಪರ್ಧಿಸುವವರ ಹಾರಾಟ ಶುರುವಾಗಿದೆ. ಬಿಜೆಪಿಯಿಂದ ಇದೇ ಶಾಮನೂರರ ಎದುರು ಮೂರು ಬಾರಿ ಸ್ಪರ್ಧಿಸಿ ಮಣ್ಣು ಮುಕ್ಕಿದ್ದ ಯಶವಂತರಾವ್ ಈ ಬಾರಿಯೂ ಸ್ಪರ್ಧಿಸುವ ಮೂಲಕ ತನ್ನ ಜೀವಮಾನದ ಅಂತಿಮ ಚುನಾವಣೆ ಎಂಬ ದಾಖಲೆಗೆ ಸಿದ್ಧವಾಗುತ್ತಿದ್ದಾನೆ. ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಲು ಚುನಾವಣೆಯಲ್ಲಿ ಮತದಾರರಿಗೆ ತಮ್ಮ ಮೂರಿ ತೋರಿಸುವ ಕಳೆ ಹೊಂದಿರುವವರೇ ಇಲ್ಲದಂತಾಗಿದೆ. ಈ ಹಿಂದೆ ಇದೇ ಕ್ಷೇತ್ರದಿಂದ ಜೆಡಿಎಸ್ ಪಕ್ಷದಿಂದ ಮಾಜಿ ಮಂತ್ರಿ ಶಿವಪ್ಪನವರ ಮಗ ನಾಗರಾಜ ಎಂಬಾತ ಇದೇ ಶಾಮನೂರರ ವಿರುದ್ಧ ಸ್ಪರ್ಧಿಸಿ ಕರುಣಾಜನಕ ಸೋಲು ಕಂಡಿದ್ದ. ಆತ ಈಗ ಮತ್ತೊಮ್ಮೆ ಜೆಡಿಎಸ್‌ನಿಂದ ಸ್ಪರ್ಧಿಸುವಂತಿಲ್ಲ, ಏಕೆಂದರೆ ಆತ ಈಗ ಆ ಪಕ್ಷದಲ್ಲೇ ಇಲ್ಲ! ಬಿಜೆಪಿಯೆಂಬ ಉರಿಯುವ ಮನೆಯಲ್ಲಿ ಗಳವಾಗಿದ್ದ ನಾಗರಾಜ ಈಗ ಅಲ್ಲೇ ಭಸ್ಮವಾಗಿದ್ದಾನೆ. ಹಾಗೆಯೇ ಗಣಿಕಳ್ಳ ಶ್ರೀರಾಮುಲು ಹೆಸರನ್ನು ಹೊರತುಪಡಿಸಿದರೆ ಇಲ್ಲಿ ಬಿಎಸ್‌ಆರ್ ಪಕ್ಷ ಅಸ್ತಿತ್ವದಲ್ಲೇ ಇಲ್ಲ.

ಹಾಗೆ ನೋಡಿದರೆ ಶಿವಶಂಕರಪ್ಪನವರಿಗೆ ಇವರ್‍ಯಾರೂ ಸವಾಲಾಗುವುದೇ ಇಲ್ಲ, ಬದಲಾಗಿ ಅವರಿಗೆ ತಮ್ಮದೇ ಕಾಂಗ್ರೆಸ್‌ನಲ್ಲಿರುವ ಎದುರಾಳಿಗಳೇ ತಲೆನೋವು ನೀಡುವ ಲಕ್ಷಣಗಳು ಕಾಣುತ್ತಿವೆ. ಕಾಂಗ್ರೆಸ್ ಪಕ್ಷದ ಹಿರಿಯ ಮತ್ತು ಅಲ್ಪಸಂಖ್ಯಾತರ ನಾಯಕರಾಗಿರುವ ಸೈಯದ್ ಸೈಪುಲ್ಲಾ ಕೂಡ ಇದೇ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದಾರೆ. ಇದು ಸಹಜವಾಗಿಯೇ ಶಾಮನೂರರಲ್ಲಿ ಆತಂಕ ಹುಟ್ಟಿಸಿದೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಮುಸ್ಲಿಮರ ಮತಗಳೇ ಅಧಿಕವಾಗಿವೆ. ಇದು ಪ್ರತ್ಯೇಕ ಕ್ಷೇತ್ರವಾದ ನಂತರವೇ ಇಲ್ಲಿನ ಮುಸ್ಲಿಮ್ ನಾಯಕರಲ್ಲಿ ಸಹಜವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವ ಹಂಬಲ ಪ್ರಾರಂಭವಾಗಿದ್ದು ಅದಕ್ಕೆ ತಕ್ಕಂತೆ 2008ರಲ್ಲಿ ಇದೇ ಸೈಯದ್ ಸೈಪುಲ್ಲಾ ಅವರಿಗೆ ಕಾಂಗ್ರೆಸ್ ಪಕ್ಷ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು 'ಬಿ' ಫಾರ್ಮ್ ಕೊಟ್ಟಿತ್ತು, ಆದರೆ ತಾನೇ ಆ ಕ್ಷೇತ್ರದಿಂದ ಸ್ಪರ್ಧಿಸಬೇಕೆಂಬ ಹಟಕ್ಕೆ ಬಿದ್ದಿದ್ದ ಶಾಮನೂರರ ಪುತ್ರ ಮಲ್ಲಿಕಾರ್ಜುನ 'ಬಿ' ಫಾರ್ಮ್‌ನಲ್ಲಿ ಸೈಪುಲ್ಲಾ ತಮ್ಮ ಹೆಸರನ್ನು ಒಡೆದುಹಾಕಿ ಆ ಜಾಗೆಯಲ್ಲಿ ಮಲ್ಲಿಕಾರ್ಜುನನ ಹೆಸರು ಬರೆಯುವಂತೆ ಮಾಡಿದ್ದರು. ಆದರೆ ಹೀಗೆ ಅಕ್ರಮವಾಗಿ ತಿದ್ದುಪಡಿ ಮಾಡಿದ್ದ 'ಬಿ' ಫಾರ್ಮ್‌ಅನ್ನು ಚುನಾವಣಾ ಅಧಿಕಾರಿಗಳು ತಿರಸ್ಕರಿಸಿದ್ದರು. ಮಲ್ಲಿಕಾರ್ಜುನ ಮತ್ತು ಸೈಪುಲ್ಲಾ - ಇವರಿಬ್ಬರ ಜಗಳದಲ್ಲಿ ಮೂರನೆಯವನಿಗೆ ಲಾಭವಾಗಿ ಬಿಜೆಪಿಯ ರವೀಂದ್ರನಾಥ ಆ ಚುನಾವಣೆಯಲ್ಲಿ ಗೆದ್ದರು.

ಈ ಬಾರಿಯೂ ಕಾಂಗ್ರೆಸ್ ಟಿಕೆಟ್‌ಗಾಗಿ ಶಿವ ಶಂಕರಪ್ಪನಿಗೆ ಪ್ರಬಲ ಸವಾಲು ನೀಡುತ್ತಿರುವುದು ಇದೇ ಸೈಪುಲ್ಲಾ. ಕಾಂಗ್ರೆಸ್ ಹೈಕಮಾಂಡಿನ ಸಂಪರ್ಕ ಸಾಧಿಸಿರುವ ಸೈಪುಲ್ಲಾ ಅವರಿಗೆ ದಿಗ್ವಿಜಯ ಸಿಂಗ್, ವೀರಪ್ಪ ಮೊಯ್ಲಿ, ಸಿದ್ದರಾಮಯ್ಯ ಮುಂತಾದವರು ಟಿಕೆಟ್ ಕೊಡಿಸುವುದಾಗಿ ಭರವಸೆ ನೀಡಿದ್ದಾರೆ. ಅದೆಲ್ಲಕ್ಕಿಂತ ಮುಖ್ಯವಾಗಿ ಕಳೆದ ಬಾರಿಯ ಚುನಾವಣೆ ಸಂದರ್ಭದಲ್ಲಿ ಶಾಮನೂರು ಶಿವಶಂಕರಪ್ಪನವರು ನೀಡಿದ್ದ ಭರವಸೆಯೇ ಈ ಬಾರಿ ಅವರ ಮೂಗು ಹಿಡಿಯುವ ಲಕ್ಷಣಗಳು ಕಾಣುತ್ತಿವೆ.

2008ರಲ್ಲಿ ದಾವಣಗೆರೆ ಉತ್ತರ ಕ್ಷೇತ್ರದಿಂದ ಸ್ಪರ್ಧಿಸುವ ಅವಕಾಶವನ್ನು ಮಲ್ಲಿಕಾರ್ಜುನನ ವತಿಯಿಂದ ಕಳೆದು ಕೊಂಡಿದ್ದ ಸೈಪುಲ್ಲಾ ಅವರು ಅಲ್ಪಸಂಖ್ಯಾತರು ಅಧಿಕಸಂಖ್ಯೆಯಲ್ಲಿರುವ ದಾವಣಗೆರೆ ದಕ್ಷಿಣದಿಂದ ಸ್ಪರ್ಧಿಸಿದ್ದ ಶಾಮನೂರರ ಪರ ಪ್ರಚಾರದಲ್ಲಿ ತೊಡಗಿದ್ದರು. ಆಗ ಶಾಮನೂನರು "ಇದು ನನ್ನ ಕೊನೆಯ ಚುನಾವಣೆ. ಮುಂದಿನ ಚುನಾವಣೆಯಲ್ಲಿ ಸೈಯದ್ ಸೈಫುಲ್ಲಾರಿಗೆ ಟಿಕೆಟು ಕೊಡಿಸುವ ಭರವಸೆ ಕೊಡುತ್ತೇನೆ" ಎಂದು ಮಾತು ಕೊಟ್ಟಿದ್ದರು. ಆದರೀಗ ಶಾಮನೂರರೆ ಮತ್ತೆ ಸ್ಪರ್ಧಿಸುವ ತವಕದಲ್ಲಿದ್ದಾರೆ.

ಈ ಬಾರಿ ಸೈಫುಲ್ಲಾ ಅವರಿಗೆ ಕಾಂಗ್ರೆಸ್ ಪಕ್ಷ ದಕ್ಷಿಣದಿಂದ ಟಿಕೆಟ್ ನೀಡದಿದ್ದರೆ ಅವರು ಕಾಂಗ್ರೆಸ್ ಪಕ್ಷವನ್ನೇ ತೊರೆಯುವುದು ಗ್ಯಾರಂಟಿ. ಮಾತ್ರವಲ್ಲ ಅವರು ಶ್ರೀರಾಮುಲುವಿನ ಬಿಎಸ್‌ಆರ್ ಪಾರ್ಟಿ ಸೇರುವ ಸಾಧ್ಯತೆಗಳಿವೆ. ಅಂತಹ ಸಂದರ್ಭದಲ್ಲಿ ಈ ಕ್ಷೇತ್ರದಲ್ಲಿರುವ ಅಲ್ಪಸಂಖ್ಯಾತರ ಮತಗಳು ಯಾರಿಗೆ ಸಿಗುತ್ತವೆ ಎಂಬುದನ್ನು ಈಗಲೇ ಲೆಕ್ಕಹಾಕುವಂತಿಲ್ಲ.

ಅದೇನೇ ಇದ್ದರೂ ಈ ಬಾರಿ ತಾವು ಗೆಲ್ಲುವುದು ಮಾತ್ರವಲ್ಲ, ಇಡೀ ದಾವಣಗೆರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಆಧಿಪತ್ಯವನ್ನು ಮತ್ತೆ ಸ್ಥಾಪಿಸುವ ಹೊಣೆಗಾರಿಕೆಯೂ ಶಾಮನೂರರ ಮೇಲಿದೆ. ಅವರು ದಾವಣಗೆರೆಯ ಧಣಿಯಾಗಿ ಮುಂದುವರೆಯಬೇಕೆಂದರೆ ಕಾಂಗ್ರೆಸ್‌ಗೆ ಗೆಲುವು ತರುವುದೂ ಅವರಿಗೆ ಅನಿವಾರ್ಯವಾಗಿದೆ. ಈ ಕಾರಣಕ್ಕಾಗಿಯೇ ಬರುವ ದಿನಗಳಲ್ಲಿ ದಾವಣಗೆರೆ ಜಿಲ್ಲೆಯ ರಾಜಕಾರಣ ಮತ್ತು ಚುನಾವಣೆ ವಿಚಿತ್ರ ರಂಗು ಪಡೆಯುವುದು ಗ್ಯಾರಂಟಿಯಾಗಿದೆ.

● ಟಿ.ಎನ್.ಷಣ್ಮುಖ

ಬಿಜೆಪಿಯ ರವೀಂದ್ರನಾಥರಿಗೆ ಭವಿಷ್ಯದ ಆತಂಕ

ಮಾಯಕೊಂಡ ವಿಧಾನಸಭಾ ಕ್ಷೇತ್ರದಿಂದ ವಲಸೆ ಬಂದು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಿಂದ ಗೆದ್ದು ತರಕಾರಿ ಮಂತ್ರಿಯಾಗಿರುವ ಬಿಜೆಪಿಯ ರವೀಂದ್ರನಾಥರಿಗೆ ಈಗಾಗಲೇ ಭವಿಷ್ಯದ ಬಗ್ಗೆ ಆತಂಕ ಸೃಷ್ಟಿಯಾಗಿದೆ.

ಈಗ ಉತ್ತರ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸುವ ನಾಯಕರ ಕೊರತೆಯಿದೆ. ಶಾಮನೂರು ಶಿವಶಂಕರಪ್ಪನವರ ಮಗ ಮಾಜಿ ಮಂತ್ರಿ ಮಲ್ಲಿಕಾರ್ಜುನರ ಕಡೆ ಎಲ್ಲರೂ ನೋಡುತ್ತಿದ್ದರೂ ದೆಹಲಿಯಲ್ಲಿರುವ ಪಕ್ಷದ ಹೈಕಮಾಂಡ್ ಒಂದೇ ಕುಟುಂಬದ ಇಬ್ಬರಿಗೆ ಟಿಕೆಟು ನೀಡುವ ಪದ್ಧತಿಗೆ ಸಮ್ಮತಿಸುವ ಲಕ್ಷಣಗಳಿಲ್ಲ. ಹಾಗಾಗಿ ಶಿವಶಂಕರಪ್ಪ ದಕ್ಷಿಣದಿಂದ ಸ್ಪರ್ಧಿಸಿದರೆ ಮಾತ್ರ ರವೀಂದ್ರನಾಥರು ನಿರಾಳ. ಅಷ್ಟೇ ಏಕೆ, ಚುನಾವಣಾ ಫಲಿತಾಂಶವನ್ನು ಮೊದಲೇ ಹೇಳಿಬಿಡಬಹುದು.

ಆದರೆ ಕಾಂಗ್ರೆಸ್ ಹೈಕಮಾಂಡ್ ದಕ್ಷಿಣ ಕ್ಷೇತ್ರದಲ್ಲಿರುವ ಅಲ್ಪಸಂಖ್ಯಾತರ ಮತಗಳ ಮೇಲೆ ದೃಷ್ಟಿ ಇಟ್ಟು ಸೈಯದ್ ಸೈಫುಲ್ಲಾರಿಗೆ ಟಿಕೆಟ್ ಕೊಟ್ಟರೆ ಹಾಲಿ ಶಾಸಕ ಶಿವಶಂಕರಪ್ಪ ದಕ್ಷಿಣದಿಂದ ಉತ್ತರಕ್ಕೆ ಮುಖ ಮಾಡಿದರೆ ರವೀಂದ್ರನಾಥರಿಗೆ ಚಳಿಜ್ವರ ಮತ್ತು ವಾಂತಿ ಎರಡೂ ಒಮ್ಮೆಗೆ ಶುರುವಾಗುತ್ತದೆ.

ಅಂದಹಾಗೆ, ಶಿವಶಂಕರಪ್ಪ-ರವೀಂದ್ರನಾಥ್ ಇಬ್ಬರೂ ಪ್ರಬಲ ಸಮುದಾಯವಾದ ಸಾದು ಲಿಂಗಾಯತರು. ಈ ಕ್ಷೇತ್ರದಲ್ಲಿ ಸಾದು ಲಿಂಗಾಯತರ ಮತಗಳು ಅಧಿಕವಾಗಿದ್ದರೂ ಯಾರದ್ದೇ ಗೆಲುವಿನಲ್ಲಿ ನಿರ್ಣಾಯಕ ಪಾತ್ರವಹಿಸುವುದು ಮಾತ್ರ ನಾಯಕರು, ಕುರುಬರು ಮತ್ತು ದಲಿತರ ಮತಗಳು. ಹಾಗೆ ನೋಡಿದರೆ ಕುರುಬರು, ನಾಯಕರು, ದಲಿತರು ಶಾಮನೂರರ ಕೈ ಬಿಡುವುದಿಲ್ಲ. ಆದ್ದರಿಂದ ಸಾದು ಲಿಂಗಾಯತರ ಮತಗಳು ಇವರಿಬ್ಬರ ನಡುವೆ ಹಂಚಿಹೋದರೂ ಇತರೆ ಸಮುದಾಯಗಳು ಶಾಮನೂರರನ್ನು ಗೆಲ್ಲಿಸುತ್ತವೆ.

ಹಾಗೊಂದು ವೇಳೆ ದಕ್ಷಿಣದಲ್ಲಿ ಸೈಫುಲ್ಲಾರಿಗೆ ಕಾಂಗ್ರೆಸ್ ಟಿಕೆಟು ಸಿಕ್ಕು ಶಿವಶಂಕರಪ್ಪ ಉತ್ತರದಿಂದ ಸ್ಪರ್ಧಿಸಿದರೆ ಉತ್ತರದಲ್ಲಿರುವ ಅಲ್ಪಸಂಖ್ಯಾತರ ಮತಗಳೂ ಶಿವಶಂಕರಪ್ಪನವರಿಗೆ ಒಲಿಯುತ್ತವೆ. ಇದೇ ರವೀಂದ್ರನಾಥರಲ್ಲಿ ಸೋಲಿನ ಭಯ ಹುಟ್ಟಿಸಿರುವುದು.

ತರಕಾರಿ ಮಂತ್ರಿ ರವೀಂದ್ರನಾಥರ ಒರಟುತನ, ಸ್ವಜಾತಿ ವ್ಯಾಮೋಹ, ಪಕ್ಷದ ಕಾರ್ಯಕರ್ತರ ನಡುವೆಯೇ ಜಾತಿಯನ್ನು ಹುಡುಕುವ ಚಾಳಿ ಅವರಿಗೆ ಉರುಳಾಗುತ್ತವೆ. ರವೀಂದ್ರನಾಥರ ನಾಲಗೆಗೆ ಎಲುಬುಗಳಿಲ್ಲ, ಆದ್ದರಿಂದ ಬಾಯಿಗೆ ಬಂದಂಗೆ ಮಾತನಾಡುತ್ತಾರೆ. ಅವರ ಈ ನಾಲಗೆಯೇ ಅವರನ್ನು ಮತದಾರರು ಮತ್ತು ಪಕ್ಷದ ಕಾರ್ಯಕರ್ತರಿಂದ ದೂರ ಮಾಡಿದೆ.

ಈ ಹಿಂದೆ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಲಿಂಗರಾಜರಿಂದ ಅಧಿಕಾರವನ್ನು ಕಿತ್ತುಕೊಂಡ ರವೀಂದ್ರನಾಥ್ ಅದನ್ನು ಹರಿಹರದಲ್ಲಿ ಹಾಲು ಮಾರಿಕೊಂಡಿದ್ದ ಕಲ್ಲೇಶಿ ಎಂಬಾತನಿಗೆ ಕೊಟ್ಟಿದ್ದರು. ಇದಕ್ಕೆ ಅವರ ಸ್ವಜಾತಿ ಪ್ರೇಮವೇ ಕಾರಣವಾಗಿತ್ತು, ಲಿಂಗರಾಜ ಬಿಜೆಪಿಯ ಹಿರಿಯ ನಾಯಕ ಕೆ.ಎಸ್.ಈಶ್ವರಪ್ಪನ ಸಂಬಂಧಿ. ಹಾಗೆಯೇ ನಿರುಪದ್ರವಿ. ಕಲ್ಲೇಶಿ ರವೀಂದ್ರನಾಥರ ಖಾಸಾ ಸಂಬಂಧಿ. ಹರಿಹರದಲ್ಲಿ ತಮ್ಮದೇ ಪಕ್ಷದ ಹರೀಶನನ್ನು ಸೋಲಿಸಲು ಇದೇ ಕಲ್ಲೇಶಿಯನ್ನು ಗುರಾಣಿಯಾಗಿ ರವೀಂದ್ರನಾಥ ಬಳಕೆ ಮಾಡಿಕೊಂಡಿದ್ದರೆನ್ನುವ ಸಂಗತಿ ಗುಟ್ಟಾಗಿ ಉಳಿದಿಲ್ಲ, ಈ ಕಾರಣಕ್ಕೇ ಹರೀಶ ಮತ್ತು ರವೀಂದ್ರನಾಥ ಸಾದು ಲಿಂಗಾಯತರಾದರೂ ಅವರಿಬ್ಬರ ನಡುವೆ ಹಾವು ಮುಂಗುಸಿ ತರಹದ ದ್ವೇಷವಿದೆ.

ರವೀಂದ್ರನಾಥರಿಗೆ ಕ್ಷೇತ್ರದಲ್ಲಿರುವ ಸ್ವಜಾತಿ ಮತಗಳ ಮೇಲೆ ಮಿತಿಮೀರಿದ ಭರವಸೆ ಇದೆ. ಮಾತ್ರವಲ್ಲ, ಅವರಲ್ಲಿ ಉಳಿದ ಜಾತಿಗಳ ಬಗ್ಗೆ ಉಡಾಫೆ ಪ್ರವೃತ್ತಿ ಇದೆ. ಈತ 2008ರಲ್ಲಿ ಉತ್ತರ ವಿಧಾನಸಭಾ ಕ್ಷೇತ್ರದಿಂದ ಮೊದಲು ಸ್ಪರ್ಧಿಸಿದಾಗ ಈತನ ವಿರುದ್ಧ ಕಾಂಗ್ರೆಸ್‌ನಿಂದ ಪ್ರಬಲ ಅಭ್ಯರ್ಥಿ ಕಣಕ್ಕಿಳಿದಿರಲಿಲ್ಲ, ಹಾಗಾಗಿಯೇ ರವೀಂದ್ರನಾಥರ ಪರ ಸಾದು ಲಿಂಗಾಯತರು ಸ್ವಜಾತಿ ಪ್ರೇಮವನ್ನು ಪ್ರದರ್ಶಿಸಿದ್ದರು. ಅದು ಅಂದಿನ ಚುನಾವಣೆಯಾದರೆ ಬರುವ ಚುನಾವಣೆಯ ಲೆಕ್ಕಾಚಾರದ ಗುಣಗಳೇ ಬೇರೆಯಾಗುತ್ತದೆ. ಹಾಗೊಂದು ವೇಳೆ ಶಾಮನೂರು ಶಿವಶಂಕರಪ್ಪ ಕಣಕ್ಕಿಳಿದರೆ ರವೀಂದ್ರನಾಥ ನಂಬಿರುವ ಸ್ವಜಾತಿ ಮತಗಳು ಕೈ ಕೊಡುವುದು ಗ್ಯಾರಂಟಿ. ಶ್ಯಾಮನೂರು ಶಿವಶಂಕರಪ್ಪನವರಿಗೆ ದೇವನಗರಿಯ ಮೇಲೆ ಹಿಡಿತವಿದೆ, ಸ್ವಜಾತಿಯಿರಲಿ, ಬೇರೆ ಜಾತಿಗಳ ಬೆಂಬಲವೂ, ಇ[illegible] ಶಿವಶಂಕರಪ್ಪನವರ ವಿರುದ್ಧ ಯಾರೂ ನಿಲ್ಲುವ ಮನಸ್ಸು ಮಾಡುವುದಿ[illegible] ಹಾಗೆ ನೋಡಿದರೆ ಶಿವಶಂಕರಪ್ಪನವರಿಗೆ ದಾವಣಗೆರೆ ದಕ್ಷಿಣಕ್ಕಿಂತ ಉತ್ತರ[illegible] ಸುಲಭವಾಗುತ್ತದೆ.

ರವೀಂದ್ರನಾಥರು ಸೋಲಲು ಮತ್ತೊಂದು ಕಾರಣವೂ ಇದೆ. ಅ[illegible] ಅತಿಯಾದ ಸ್ವಜಾತಿ ಪ್ರೀತಿ. ದಾವಣಗೆರೆ ತಾಲ್ಲೂಕು ಪಂಚಾಯತಿಯ[illegible] ತಮ್ಮ ವ್ಯವಹಾರಗಳ ಮತ್ತು ಆಮದಾನಿಯ ಮೇಲೆ ನಿಗಾ ಇಡಲು ಪ್ರಭುದೇ[illegible] ಎಂಬುವವನನ್ನು ಕಳೆದ ಮೂರು ವರ್ಷಗಳಿಂದ ಇಓ ಮಾಡಿ ಕೂರಿಸಿದ್ದಾ[illegible] ಈ ಪ್ರಭುದೇವ ಏಕಕಾಲದಲ್ಲಿ ಎರಡು ಹುದ್ದೆಗಳನ್ನು ನಿಭಾಯಿಸುತ್ತಿದ್ದಾ[illegible] ಇತ್ತ ಇಓ ಆಗಿರುವ ಪ್ರಭುದೇವ ಅತ್ತ ಜಿಲ್ಲಾ ಪಂಚಾಯತಿಯಲ್ಲೂ ಇಂಜಿನಿಯ[illegible] ಆಗಿದ್ದಾನೆ. ರವೀಂದ್ರನಾಥರ ಆಸ್ತಿ-ಪಾಸ್ತಿಯ ಉಸ್ತುವಾರಿ, ಖರ್ಚುವೆಚ್ಚ ಮನೆ[illegible] ಆಗು ಹೋಗುಗಳ ಸೂಪರ್‌ವೈಸರ್ ಈ ಪ್ರಭುದೇವನೇ. ಈ ಹಿಂದೆ ಜಿ[illegible] ಪಂಚಾಯತಿಯಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿದ್ದ ಬಸವನಗೌ[illegible] ಚೇಲ ಆಗಿದ್ದ. ಈಗ ತಾಲ್ಲೂಕು ಪಂಚಾಯತಿಯಲ್ಲಿ ಪ್ರತಿ ಲಕ್ಷಕ್ಕೆ ಶೇ[illegible] 20ರಷ್ಟು ಕಮೀಷನ್ ವಸೂಲಿ ಮಾಡುತ್ತ ತರಕಾರಿ ಮಂತ್ರಿ ರವೀಂದ್ರನಾಥ[illegible] ಬೊಕ್ಕಸವನ್ನು ಭರ್ತಿ ಮಾಡುತ್ತಿದ್ದಾನೆ. ಇಂಥಾ ಜಾತಿ ವ್ಯಾಮೋಹದಿಂದ[illegible] ಮತದಾರ ಬೇಸತ್ತಿರುವುದು.

ಶಾಮನೂರು ಶಿವಶಂಕರಪ್ಪ ಮತ್ತು ಮಲ್ಲಿಕಾರ್ಜುನ ಅಧಿಕಾರದಲ್ಲಿದ[illegible] ರವೀಂದ್ರನಾಥನಂತೆ ಜಾತಿರಾಜಕಾರಣ ಮಾಡಲಿಲ್ಲ, ಭ್ರಷ್ಟರೂ ಆಗಲಿಲ್ಲ. [illegible] ಮಗನ ಅಧಿಕಾರಾವಧಿಯಲ್ಲಿ ಜಿಲ್ಲೆಯ ತುಂಬಾ ದಲಿತರು-ಹಿಂದುಳ[illegible] ಅಧಿಕಾರಿಗಳಿದ್ದರು. ಆದರೆ ರವೀಂದ್ರನಾಥ ಹಾಗಲ್ಲ, ಬೇರೆ ಜಾತಿ[illegible] ಅಧಿಕಾರಿಗಳಿದ್ದರೆ "ನಾನು ಹೋಗಿ ಎನ್ನುವ ಮೊದಲೇ ವರ್ಗಮಾಡಿಸಿಕೊ[illegible] ಎಂದು ಎಚ್ಚರಿಕೆ ನೀಡುವ ಮನುಷ್ಯ.

...ಚಿತ್ರ' ವ್ಯಾಪಾರಿ ದಂಧೆಯ 'ದೊಡ್ಡವರು!'

...ನ್ನಗೆ ಅರಿವೆ ಚಿಂತೆ; ಮೊಮ್ಮಗಳಿಗೆ ತಿಂಡಿ ಚಿಂತೆ!! ...ಸಾಣ್ಣುಡಿ ಮಂಗಳೂರಿನಲ್ಲಿ ಹಿಂದೂ ...ಗಳು ಹೋಮ್ ಸ್ಟೇ ಮೇಲೆ ದಾಳಿ ನಡೆಸಿದ ...ದ್ದಿರುವ ಪರಸ್ಪರ ಎರಡು ವಿರುದ್ಧ "ಧ್ವನಿ"ಗಳಿಗೆ ...ಹೊಂದುವಂತಿದೆ! ಬರ್ತ್‌ಡೇ ಪಾರ್ಟಿ ನಿರತ ...ವಿದ್ಯಾರ್ಥಿಗಳ ಮೇಲಾದ ಅಮಾನುಷ ಹಲ್ಲೆ ...ಂಗಕ್ಕೆ ದೊಡ್ಡ ಮಟ್ಟದ ಖಂಡನೆ-ಧಿಕ್ಕಾರ ...ುತ್ತಿದೆ; ಜನಪರ ಸಂಘಟನೆಗಳು-ವಿದ್ಯಾರ್ಥಿ... ಆಕ್ರೋಶದಿಂದ ಬೀದಿಗಿಳಿದಿವೆ. ಇದರಿಂದ ...ವಾರದ ಪುರೋಹಿತರು ಬೆಚ್ಚಿಬಿದ್ದಿದ್ದಾರೆ!

...ಗೂ ಮಹಿಳೆಯರ ಮಾನ-ಪ್ರಾಣ-ಹಕ್ಕು-...ನ ಚಿಂತೆಯಾದರೆ, ಸಂಘಪರಿವಾರದ ಸೈತಾನರಿಗೆ ...ಜಲಿ ಸಂಸ್ಕೃತಿ" ದೇಶ-ವಿದೇಶಕ್ಕೆಲ್ಲ ಗೊತ್ತಾಗಿ ...ಲ್ಲ ಎಂಬ ಫಜೀತಿ. ಸುಳ್ಳು ಹೇಳುವುದರಲ್ಲಿ, ...ಬಾಯಿ ಬಡಿದುಕೊಳ್ಳುವುದರಲ್ಲಿ ನಿಸ್ಸೀಮರಾದ ...ದ "ಪರಾಕ್ರಮಿ"ಗಳು ಈಗ ಡ್ಯಾಮೇಜು ...ಗೆ ವಿಷಯಾಂತರ ಮಾಡುವ-ದಾರಿತಪ್ಪಿಸುವ ...ಶುರುವಿಟ್ಟುಕೊಂಡಿದ್ದಾರೆ. ಅದಕ್ಕೆಂದೇ ತಮ್ಮ ...ಸಮಾಜೋತ್ಸವದ ಹಿರೇಮಣಿ-ಶಿಕ್ಷಣ ವ್ಯಾಪಾರಿ ...ನಯ ಹೆಗ್ಡೆಯಂಥವರನ್ನು ಛೂಬಿಟ್ಟು ಕೇಸರಿ ...ಕಾಮಚೇಷ್ಟೆಯ ಕರ್ಮಕಾಂಡಕ್ಕೆ ವಾಣಿಜ್ಯ ತಿರುವು ಹವಣಿಸುತ್ತಿದ್ದಾರೆ.

...ನ್ನೆ ರಾತ್ರೋರಾತ್ರಿ ಮಂಗಳೂರಲ್ಲಿ "ಎದ್ದೇಳು ...ಳೂರು" ಎಂಬ ಲಾಭಬಡುಕ ವ್ಯಾಪಾರಿಗಳ ...ಯೊಂದು ಹುಟ್ಟಿಕೊಂಡಿದೆ. ಇದರಲ್ಲಿ ಇರುವವರು ...ರಿನ ಸೋಕಾಲ್ಡ್ ಗಣ್ಯರಾದ ನಿಟ್ಟೆ ವಿನಯ ...ತಾ ಆರ್. ಕಿಣಿ, ಇನ್ಫೋಸಿಸ್‌ನ ನರೇಶ್, ...ಡಿಸೋಜಾ, ಪಣಂಬೂರು ಬೀಚ್‌ನ ...ಬೈಕಂಪಾಡಿ.... ಮತ್ತಿತರರು. ಹಿಂದೂ ...ಹಾವಳಿ ಹೀಗೇ ಮುಂದುವರಿದರೆ ತಮ್ಮ ...-ಉದ್ಯಮ ಬೋರಲು ಬೀಳುತ್ತದೆಂಬ ...ಈ ವ್ಯಾಪಾರಿ ಕುಳಗಳಿಗೆ ಶುರುವಾಗಿದೆ. ... ಮಂಗಳೂರಲ್ಲಿ ಮತ್ತೆ-ಮತ್ತೆ ಕುಸಂಸ್ಕೃತಿ ...ದರೆ ಹೂಡಿಕೆ, ಪ್ರವಾಸ, ಶೈಕ್ಷಣಿಕ ಕ್ಷೇತ್ರದಲ್ಲಿ ...ರಿಣಾಮಗಳಾಗುತ್ತದೆ; ಮಾಹಿತಿ ತಂತ್ರಜ್ಞಾನ, ...ರ್ಸಿಂಗ್ ಹೋಂ, ಹೋಟೆಲ್ ಮತ್ತು ...ಎಸ್ಟೇಟ್ ವಲಯಕ್ಕೆ ಹಾನಿ ಆಗುತ್ತದೆಂಬ ...ದೃಷ್ಟಿಯಿಂದ ಈ ದೊಡ್ಡವರೆಲ್ಲ "ಎದ್ದೇಳು ...ಳೂರು" ಎಂಬ ಗ್ಯಾಂಗ್ ಕಟ್ಟಿಕೊಂಡಿದ್ದಾರೆ.

..."ಅರೈಸ್ ಮಂಗಳೂರ್" ಸಂಘದವರು ರಾಜ್ಯಪಾಲ ...ು ವಿಚಿತ್ರ ಮನವಿ ಸಲ್ಲಿಸಿದ್ದಾರೆ. ಅದರಲ್ಲಿ ದಾಳಿ ...ವಲ್ಲಿ ಮಾಧ್ಯಮಗಳ ಪಾತ್ರ ಪ್ರಶ್ನಿಸಲಾಗಿದೆ; ...ರರು ಮತ್ತು ಮಾಧ್ಯಮದವರ ನಡುವಿನ ನಂಟಿನ ...ಶಯ ಎತ್ತಲಾಗಿದೆ. ಇದರ ಹಿಂದೆ ಮಂಗಳೂರು ... ಕಮೀಷನರ್ ಸೀಮಂತ್‌ಕುಮಾರ್ ಸಿಂಗ್ ...ಆತನ ಕಮೀಷನರ್ ಜನರಲ್ ಕಲ್ಲಡ್ಕ ಭಟ್ಟನ ... ಇರುವಂತಿದೆ. "ಕೆಲವು ಟಿವಿ ವಾಹಿನಿಗಳು ...ಗಿ ದಾಳಿಕೋರರ ಜೊತೆ ಕೈಜೋಡಿಸಿವೆ. ಅವು ...ರಿಗೆ ತಕ್ಷಣ ಮಾಹಿತಿ ಕೊಡುವುದು ಬಿಟ್ಟು ... ಮಹತ್ವ ನೀಡಿವೆ. ವರದಿಗಾರರು ವಿಡಿಯೋ ... ಪ್ರಸಾರಕ್ಕೂ ಮುನ್ನ ಪೊಲೀಸರಿಗೆ ತಿಳಿಸಿದ್ದರೆ ...ತಡೆಯ ಬಹುದಿತ್ತು... 2009 ರ ಜನವರಿಯ ...ದಾಳಿಗೂ, ಈಗಿನ ಹೋಮ್ ಸ್ಟೇ ದಾಳಿಗೂ ...ಯಿದೆ. ಹೀಗಾಗಿ ಮಾಧ್ಯಮ ಮತ್ತು ಪುಂಡರ ... ನಂಟಿನ ಬಗ್ಗೆ ತನಿಖೆ ಆಗಬೇಕು...." ಎಂದು ... ಮಂಗಳೂರ್" ತಂಡ ಮನವಿಯಲ್ಲಿ ಹಲುಬಿದೆ! ... ವಾಹಿನಿಗಳು ಸ್ಕೂಪ್‌ಗಾಗಿ ದಾಳಿಕೋರರ ಜೊತೆ ...ದಿವೆ ಎಂಬ ತೀರ್ಮಾನಕ್ಕೆ ಈ ಬಿಸಿನೆಸ್ ಭೂಪರು ಬಂದರೋ ಗೊತ್ತಿಲ್ಲ. ಇವರೇನಾದರೂ ...ಧನಾ ವರದಿ ತಯಾರಿಸಿದ್ದಾರಾ? ನಿಜವಾಗಿಯೂ ... ಹೋಮ್ ಸ್ಟೇ ದಾಳಿಯಿಂದ ಕಳವಳ ಉಂಟಾಗಿ ...ರಿಗೆ ಮನವಿ ಸಲ್ಲಿಸಿದ್ದೇ ಆಗಿದ್ದರೆ, ಮೊದಲು ...ಮಾಡಿದ ನವೀನ್ ಸೂರಿಂಜೆ ಎಂಬ ಕಸ್ತೂರಿ ...ದಿಗಾರನ ಹೇಳಿಕೆ ಪಡೆಯಬೇಕಿತ್ತು, ಮಂಗಳೂರಿನ ... ಪರ ಸಂಘಟನೆಗಳು ಈ ಅಮಾನುಷ ದಾಳಿಯ ...ಂದು ಸತ್ಯಶೋಧನಾ ವರದಿ ತಯಾರಿಸಿದ್ದಾರೆ. ... ನವೀನ್ ಸೂರಿಂಜೆಯ "ವಿಚಾರಣೆ" ನಡೆಸಿದ್ದರು. ...ರುವಾಗುತ್ತಿದ್ದಂತೆಯೇ ನವೀನ್ ಮತ್ತು ಸ್ಥಳೀಯ ...ವ"ದ ಫೋಟೋಗ್ರಾಫರ್ ಶರಣ್ ಕಂಕನಾಡಿ ...ಸರಿಗೆ ಫೋನ್ ಮಾಡಿದ್ದಾರೆ. ಆದರಾತ ಕರೆ ...ಲಿಲ್ಲ. ಇದು ಲೋಕಕ್ಕೇ ಗೊತ್ತಿರುವ ಸತ್ಯ ...ಗ ಅರೈಸ್ ಮಂಗಳೂರ್ ಮಹಾಮಹಿಮರು ... ಮತ್ತು ಮಾಧ್ಯಮದವರ ನಡುವೆ ನಂಟಿದೆ

ಎಂದು ಏಕಪಕ್ಷೀಯ ನಿರ್ಧಾರಕ್ಕೆ ಬಂದಿದ್ದಾರೆ. ಇದೂ ಸಂಘ ಪರಿವಾರದ ಡಾನ್-ಡಾಕೂಗಳ ಸಂಚಾ? ಇದು ಎಂಥವರಲ್ಲೂ ಮೂಡುವಂಥ ಸರಳ ಸಂಶಯ!

"ಎದ್ದೇಳು ಮಂಗ್ಳೂರ್" ಮಂಡಳಿ ಸದಸ್ಯರು ತುಂಬ ತಡವಾಗಿ ಆಕಳಿಸುತ್ತ-ಕಣ್ಣುಜ್ಜುತ್ತ ಎದ್ದು ಕುಳಿತಿದ್ದಾರೆ. ನವೀನ್ ಸೂರಿಂಜೆಯನ್ನು ಗುರಿಯಾಗಿಟ್ಟು ಈ ತಂಡ ಮಾತಾಡಿದಂತಿದೆ. ಆತ ಹಲ್ಲೆ ತಡೆಯುವುದಕ್ಕಿಂತ ಸ್ಕೂಪ್‌ಗೇ ಹೆಚ್ಚು ಮಹತ್ವ ಕೊಟ್ಟಿದ್ದು ಹೌದಾದರೆ ಬೇರೆ ಟಿವಿ ವಾಹಿನಿಗಳಲ್ಲಿ ದಾಳಿ ದೃಶ್ಯಾವಳಿ ಪ್ರಸಾರ ಆಗಿದ್ದು ಹೇಗೆ? ಆತನ ಟಿವಿ ಛಾನಲ್ ನಲ್ಲಿ ಮಾತ್ರ ಆ ಘಟನೆ ಎಕ್ಸ್‌ಕ್ಲೂಸಿವ್ ಆಗಿ ಬರಬೇಕಿತ್ತಲ್ಲವಾ? ಅಷ್ಟಕ್ಕೂ ಟಿವಿ ಮಾಧ್ಯಮದಲ್ಲಿ ತಕ್ಷಣಕ್ಕೆ ಈ ಚೆಡ್ಡಿ ರಿಪಬ್ಲಿಕ್ ಹಿಂಸೋನ್ಮಾದ-ಕಾಮೋನ್ಮಾದದ ದೃಶ್ಯಗಳು ಪ್ರಸಾರ ಆಗಿದ್ದರಿಂದಲೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಿಂದೂ ಮೃಗಗಳ ನೀಚತನದ ಬಗ್ಗೆ ಚರ್ಚೆ ಆಯ್ತಲ್ಲವಾ? 25 ಕಾವಿ ಕಿರಾತಕರ ಬಂಧನ ಸಾಧ್ಯವಾಯ್ತಲ್ಲವಾ? ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳೂ ಘಟನೆಯನ್ನು ಖಂಡಿಸಿ ಸರ್ಕಾರಕ್ಕೆ ಎಚ್ಚರಿಕೆ ಕೊಡುವಂತಾಯ್ತಲ್ಲವಾ? "ಆ ನೀಲಿ ಚೆಕ್ಸ್ ಶರ್ಟ್‌ನ ವ್ಯಕ್ತಿ ಯಾರು?" ಎಂದು ಹಲ್ಲೆಕೋರನೊಬ್ಬನ ಬಗ್ಗೆ ನ್ಯಾಯಮೂರ್ತಿಗಳು ಪ್ರಶ್ನಿಸುವಂತಾಯ್ತಲ್ಲವಾ? ಇದಾಗದಿದ್ದರೆ ಮಂಗಳೂರಿನ ಕೇಸರೀಕರಣಗೊಂಡಿರುವ ಪೊಲೀಸರು ವಾಡಿಕೆಯಂತೆ ಕೇಸ್ ಹಳ್ಳ ಹಿಡಿಸಿ ಪಾಪಿಗಳ ಹಿಂದೂತ್ವದ ದರ್ಬಾರು ಅಬಾಧಿತ ಮಾಡುತ್ತಿದ್ದರಲ್ಲವಾ? ಇವೆಲ್ಲ ಸಾಧ್ಯವಾಗಿದ್ದು ಮಾಧ್ಯಮದವರಿಂದ. ಈ ವಾಸ್ತವ ಅರಿಯದಷ್ಟು ಮಂದಮತಿಗಳಾ ಅರೈಸ್ ಮಂಗ್ಳೂರ್‌ನ ವ್ಯಾಪಾರಿ ಬಳಗದವರು??



ವಿನಯ ಹೆಗ್ಡೆ

ಹೋಮ್ ಸ್ಟೇ ದಾಳಿ

ಯಾಕೆ ಅರೈಸ್ ಮಂಗ್ಳೂರ್ ಎದ್ದೇಳಲಿಲ್ಲ? ಯಾಕೆಂದರೆ ಆಗದು ದೃಶ್ಯಮಾಧ್ಯಮದಲ್ಲಿ ಅಥವಾ ಪ್ರಿಂಟ್ ಮಾಧ್ಯಮದಲ್ಲಿ ದೊಡ್ಡ ಸುದ್ದಿಯಾಗ್ಲಿ ಜನರನ್ನು ಎಚ್ಚರಿಸಿರಲಿಲ್ಲ, ಈಗಿನಂತೆ ಮಾನವತಾವಾದಿಗಳು ಬೀದಿಗಿಳಿದು ನ್ಯಾಯ ಕೇಳಿರಲಿಲ್ಲ.

ಅದೇರೀತಿ ಒಂದು ತಿಂಗಳ ಹಿಂದೆ ಮೇರಿಹಿಲ್‌ನ ಹೆಲಿಪ್ಯಾಡ್‌ನ ವಿಹಂಗಮ ನೋಟ ನೋಡಲೆಂದು ಬಂದಿದ್ದ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮೇಲೆ ಶ್ರೀರಾಮ ಸೇನೆಯ ಕಪಿಗಳು ಎಗರಿಬಿದ್ದಿದ್ದವು. ಕಾರಿನ ನಾಲ್ಕೂ ಡೋರ್ ತೆರೆದು ಚಿಪ್ಸ್ ತಿನ್ನುತ್ತ ಹರಟುತ್ತಿದ್ದ ಯುವಕ-ಯುವತಿಯರಿಗೆ ಹೊಡೆದು-ಬಡಿದು ಅನೈತಿಕತೆ ಲೇಬಲ್ ತೊಡಿಸಿ ಅನೈತಿಕ ಪೊಲೀಸರು ಕಾವೂರು ಠಾಣೆಗೆ ಒಪ್ಪಿಸಿದ್ದರು. ಆಗ ಯಾಕೆ ಅರೈಸ್ ಮಂಗ್ಳೂರ್ ಮಾತಾಡಲಿಲ್ಲ? ಯಾಕೆಂದರೆ ಆಗಲೂ ಅದು ವಿಷ್ಯುವಲ್ ಆಗಿರಲಿಲ್ಲ. ಪ್ರಿಂಟ್ ಮಿಡಿಯಾದಲ್ಲೂ ಸೆನ್‌ಸೇಷನಲ್ ಸುದ್ದಿ ಆಗಿ ಬಂದಿರಲಿಲ್ಲ.

ಈ ಹಳೇ ಕರುಣ ಕತೆಗಳನ್ನೆಲ್ಲ ಬಿಟ್ಟುಬಿಡಿ; ಮೊನ್ನಿನ ಹೋಮ್ ಸ್ಟೇ ದಾಳಿಯ ಮರುದಿನವೇ ಮಂಗಳೂರು ಸರ್ವೀಸ್ ಬಸ್ ನಿಲ್ದಾಣದಲ್ಲೇ ಯುವಕ-ಯುವತಿ ಮೇಲೆ ಬರ್ಬರ ದಾಳಿ ಆಗಿತ್ತು, ಉದ್ಯೋಗದ ಸಂದರ್ಶನಕ್ಕೆಂದು ವಿಟ್ಲದಿಂದ ಬಂದಿದ್ದ ಆ ಹುಡುಗಿಗೆ ಸಹಪಾಠಿ ಆಕಸ್ಮಾತ್ ಸಿಕ್ಕಿದ್ದ. ಸಹಜವಾಗೇ ಮಾತಾಡಿದ್ದಾರೆ. ಅದೂ ಜನನಿಬಿಡ ಬಸ್‌ಸ್ಟ್ಯಾಂಡಿನಲ್ಲಿ! ಅಷ್ಟಕ್ಕೇ ಅವರ ಮೇಲೆ ಪರಿವಾರದ ಪುಂಡರು ಮುಗಿಬಿದ್ದು ಪೊಲೀಸರಿಗೊಪ್ಪಿಸಿದ್ದರು. ಪೊಲೀಸರು ಚೆಡ್ಡಿ ರಿಪಬ್ಲಿಕ್ ನಿಯಮದಂತೆ ಪಾಪದ ಹುಡುಗ- ಹುಡುಗಿಯರಿಗೇ ವಾರ್ನಿಂಗ್ ಕೊಟ್ಟು ಕಳಿಸಿದ್ದರು. ಆಗ ಅರೈಸ್ ಮಂಗ್ಳೂರ್‌ಗೆ ನಿದ್ದೆಬಿದ್ದಿತ್ತಾ? ಆಗಲೂ ಅದು ಅಂಥ ಸುದ್ದಿಯಾಗಿರಲಿಲ್ಲ, ಹಾಗಾಗಿ ಅರೈಸ್ ಮಂಗ್ಳೂರ್‌ಗೂ ಬಾಯಿ ಬಂದ್ ಆಗಿತ್ತು.

ಇಲ್ಲಿರುವ ಅರೈಸ್ ಮಂಗ್ಳೂರ್ "ಸಮಸ್ಯೆ" ಇಷ್ಟೇ! ಯಾರು ಯಾರನ್ನು ಬೇಕಿದ್ದರೂ ಹೊಡೆಯಲಿ; ಸಂಸ್ಕೃತಿ ಹೆಸರಲ್ಲಿ ಎಲ್ಲೆಂದರಲ್ಲಿ ಹುಡುಗಿಯ ಮೈಮೇಲೆ ಕೈಹಾಕಿ ಹಿಂದೂ ಪುಂಡರು ಚಟತೀರಿಸಿಕೊಳ್ಳಲಿ. ಅದನ್ನು ಯಾರೂ ಶೂಟ್ ಮಾಡಿ ಟಿವಿಯಲ್ಲಿ ಹಾಕಬಾರದು; ಪತ್ರಿಕೆಯಲ್ಲಿ ಬರೆಯಬಾರದು. ಇದರಿಂದ ನಮ್ಮಲ್ಲಿಗೆ ಬರೋ ಹೂಡಿಕೆ ಖೋತಾ ಆಗುತ್ತದೆ; ನಮ್ಮ ತರಹೇವಾರಿ ದೋಖಾ ಬಿಸಿನೆಸ್‌ಗೆ ಧಕ್ಕೆಯಾಗುತ್ತದೆ-ಎಂಬುದಷ್ಟೇ ಅರೈಸ್ ಮಂಗ್ಳೂರ್ ಅಳಲು; ಧಗಾಕೋರ ಸಂಸ್ಕೃತಿ ಕಾಳಜಿ!! ತಮ್ಮ ವ್ಯಾಪಾರ-ವಹಿವಾಟಿನ ರಕ್ಷಣೆಗಷ್ಟೇ ತಾವೀಗ ಎಚ್ಚೆತ್ತಿದ್ದೇವೆಂದು ಅರೈಸ್ ಮಂಗ್ಳೂರ್ ಬಿಸಿನೆಸ್‌ಮನ್‌ಗಳು ಸ್ವಯಂ ಸಾಬೀತುಮಾಡಿಕೊಂಡಿದ್ದಾರೆ!

ಹಿಂದೂ ವೀರ ವಿನಯ ಹೆಗ್ಡೆಯಂಥವರ ಎಡಬಿಡಂಗಿತನವೇ ಅಮಾಯಕ ಹುಡುಗಿಯರ ಮಾನ ಪ್ರಾಣ ಹಿಂಡಿ ವಿಕೃತ-ಸುಖ ಅನುಭವಿಸುವ ಹಿಂದೂ ಪುಂಡ ಪೋಷಕರು ಯಾರೆಂಬುದನ್ನು ಸಾರಿ-ಸಾರಿ ಹೇಳುತ್ತದೆ. ಈ ವಿನಯ್ ಹೆಗ್ಡೆಯಂಥ ಅಡ್ಡಕಸುಬಿಗಳೇ ತಮ್ಮ ಒಣಪ್ರತಿಷ್ಠೆ-ಬಿಸಿನೆಸ್ ವೃದ್ಧಿಗಾಗಿ ಹಿಂದೂತ್ವಕ್ಕೆ ಎಡೆ ಮಾಡಿಕೊಡುತ್ತಿದ್ದಾರೆಂಬುದು ಇಡೀ ಕರಾವಳಿಗೆ ಗೊತ್ತಿರುವ ಬಹಿರಂಗ ರಹಸ್ಯ. ಹೋಮ್ ಸ್ಟೇ ದಾಳಿಯ ಬಗ್ಗೆಯೂ ಆತ ವಿರೋಧಾಭಾಸದ ಹೇಳಿಕೆಯೇ ಬಿತ್ತರಿಸಿದ್ದಾನೆ. ಆತನ ಪ್ರಕಾರ ಬರ್ತ್ ಡೇ ಪಾರ್ಟಿ ಮೇಲಿನ ದಾಳಿ ಇದೆಯಲ್ಲ, ಅದು ಅನಿರೀಕ್ಷಿತ; ಅದು ಅನೈತಿಕ ಪೊಲೀಸರ ದಾಳಿಯಂತೂ ಅಲ್ಲವೇ ಅಲ್ಲ, ಅದು "ಯಾರೋ" ಪುಂಡರು ಮಾಡಿದ ದುರಾಕ್ರಮಣ.

ವಿನಯ್ ಹೆಗ್ಡೆಯ ನಡೆ-ನುಡಿ ಗಮನಿಸಿದರೆ, ಆತ ನಡೆಸಿದಂತೆ ಕಾಣಿಸುತ್ತದೆ. ವಾಸ್ತವವೆಂದರೆ ಹೋಮ್ ಸ್ಟೇ ಆಕ್ರಮಣ- ಅಲ್ಲಿನ ಆಕ್ರಂದನಕ್ಕೆ ಕಾರಣ "ಯಾರೋ" ಪುಂಡರಲ್ಲ, ಇವರೆಲ್ಲ ಹಿಂದೂತ್ವದಿಂದ ಮಿದುಳೇ ಕಳೆದುಕೊಂಡಿರುವ ಹೃದಯಶೂನ್ಯ ಮೃಗಗಳು. ಕೋಮುವಾದಿ ಹಿಡನ್ ಅಜೆಂಡಾ ಈಡೇರಿಕೆಗಾಗಿ ನಡೆದಿರುವ ದಾಳಿಯಿದು. ಅದರಲ್ಲಿ ಆರೆಸ್ಸೆಸ್ ಡಾನ್ ಕಲ್ಲಡ್ಕ ಪ್ರಭಾಕರ ಭಟ್, ಹಿಂಜಾವೇ ಹಿಂಸಾವಾದಿ ಜಗದೀಶ್ ಕಾರಂತ್ ವಗೈರೆಗಳು ಹೇಗೆ ಆರೋಪಿಗಳೋ ಹಾಗೇ ಈ ವಿನಯ ಹೆಗ್ಡೆಯೂ ಹಿಂದೂತ್ವದ ಅನಾಚಾರಕ್ಕೆ ಕಾರಣಕರ್ತನಾದವನು. ದಕ್ಷಿಣ ಕನ್ನಡದ ಮೂಲೆ-ಮೂಲೆಗಳಲ್ಲಿ ಹಿಂದೂ ಸಮಾಜೋತ್ಸವ ಸಂಘಟಿಸಿ ಹಿಂದುಳಿದ ವರ್ಗದ ಯುವಕರ ತಲೆಯಲ್ಲಿ ಅಧರ್ಮ-ಅನ್ಯಾಯ-ಅತ್ಯಾಚಾರದ ತರಬೇತಿ ನೀಡಲಾಗಿದೆ. ಅದರ ಕುಮ್ಮಕ್ಕಿನಿಂದಲೇ ಪಬ್ ಮೇಲೆ ದಾಳಿ, ಹೋಮ್ ಸ್ಟೇ ಮೇಲೆ ದಾಳಿ, ಅನೈತಿಕ ಪೊಲೀಸ್‌ಗಿರಿ ದಾಂಧಲೆ ಅವ್ಯಾಹತವಾಗಿ ನಡೆಯುತ್ತಿದೆ.


ಇಂಥ ಅನಾಹುತಕಾರಿ ಹಿಂದೂ ಸಮಾಜೋತ್ಸವಗಳನ್ನು ಹೆಚ್ಚೆಚ್ಚು ಸಂಘಟಿಸಿದ "ಸಾಧನೆ" ನಿಟ್ಟೆ ವಿನಯ ಹೆಗ್ಡೆಯದು. ಈ ಹಿಂದೂ ಸಮಾಜೋತ್ಸವದ ಗೌರವಾಧ್ಯಕ್ಷರೇ ಈ ವಿನಯ್ ಹೆಗ್ಡೆ. ಹಾಗಾಗಿ ಈ ಹೋಮ್ ಸ್ಟೇ ದಾಳಿಯಲ್ಲಿ ವಿನಯ್ ಹೆಗ್ಡೆಯೂ ಒಬ್ಬ "ನೈತಿಕ ಆರೋಪಿ"!! ಈಗ ಅತಿರೇಕಕ್ಕೆ ತಲುಪಿರುವ ಈ ದಾಳಿಗಳಿಂದ ವಿನಯ ಹೆಗ್ಡೆಯ ಶಿಕ್ಷಣ ಸಂಸ್ಥೆಗಳ ವ್ಯಾಪಾರಕ್ಕೆ ಹೊಡೆತ ಬೀಳುವ ಸಂದರ್ಭ ಎದುರಾಗಿದೆ. ಹಾಗಾಗಿ ಹೆಗ್ಡೆ ಕಂಗಾಲಾಗಿದ್ದಾರೆ. ಹೆಗ್ಡೆಯ ತರಹೇವಾರಿ ಕೋರ್ಸುಗಳ ಕಾಲೇಜಿಗೆ ಬರುವ ವಿದ್ಯಾರ್ಥಿಗಳಲ್ಲಿ ಹೊರ ರಾಜ್ಯದ ಹಣವಂತರೇ ಹೆಚ್ಚು. ಇವರೇ ಹೆಗ್ಡೆ ಕಾಲೇಜಿನ ದಂಧೆಯ ಜೀವಾಳ. ಈ ಅನೈತಿಕ ದಾಳಿ-ಅನೈತಿಕ ಪೊಲೀಸ್‌ಗಿರಿಗೆ ಬೆದರಿ ಹೊರರಾಜ್ಯದ ಶ್ರೀಮಂತ ವಿದ್ಯಾರ್ಥಿಗಳು ತನ್ನ ಕಾಲೇಜಿಗೆ ಸೇರದೇ ಇರಬಹುದೆಂಬ ದೂ(ದು)ರಾಲೋಚನೆಯಿಂದ ಹಿಂದೂವಾದಿ ವಿನಯ ಹೆಗ್ಡೆ ಆತಂಕಿತರಾಗಿದ್ದಾರೆ. ಈ ಬಿಸಿನೆಸ್ ಭೀತಿ ಆತನನ್ನು "ಎಚ್ಚರ" ಮಾಡಿದೆಯಷ್ಟೇ.

ಇನ್ನೊಂದು ಕುತೂಹಲಕರ ಅಂಶವೆಂದರೆ, ಹೋಮ್ ಸ್ಟೇ ದಾಳಿಯ ಪ್ರಮುಖ ಪಾತಕಿ ಸುಭಾಷ್ ಪಡೀಲ್‌ಗೆ ರೌಡಿಗಿರಿ ದೀಕ್ಷೆ ಕೊಟ್ಟಿದ್ದೇ ಮಂಗಳೂರಿನ ವಿಶೇಷ ಆರ್ಥಿಕ ವಲಯ. ಅಂದರೆ ಮಂಗಳೂರಿನ ವಾಣಿಜ್ಯೋದ್ಯಮಿಗಳ ಸಂಘ (ಕೆಸಿಸಿಐ)ದ ಪಾಲುದಾರಿಕೆಯ ಎಸ್‌ಇಝಡ್. ಈಗ ಈ ಕೆಸಿಸಿಐ ಕೂಡ "ಎದ್ದೇಳು ಮಂಗಳೂರು" ತಂಡದಲ್ಲಿ ಸೇರಿಕೊಂಡು ದಾಳಿ ವಿರುದ್ಧ ಮಾತಾಡುತ್ತಿದೆ. ಈ ಕೆಸಿಸಿಐ ಉದ್ಯಮಿಗಳು ತಮ್ಮ ಸ್ವಾರ್ಥಕ್ಕಾಗಿ ದೊಡ್ಡ ರೌಡಿ ಪಡೆಯನ್ನೇ ತಯಾರು ಮಾಡಿದ್ದಾರೆ. ಕೆಸಿಸಿಐ ಸಹಭಾಗಿತ್ವದ ಮಂಗಳೂರು ವಿಶೇಷ ಆರ್ಥಿಕ ವಲಯ ಭೂಸ್ವಾಧೀನಕ್ಕಾಗಿ ರೌಡಿಗಳನ್ನು ಯಥೇಚ್ಛ ವಾಗಿ ಬಳಕೆ ಮಾಡಿದೆ. ಬಜಪೆ ಬಳಿಯ ನೆಲ್ಲಿದಡಿಯ ಕೃಷಿ ಭೂಮಿ ಸ್ವಾಧೀನಕ್ಕೆ ಇದೇ ಸೈತಾನ ಸುಭಾಷ್ ಪಡೀಲ್ ನಾಯಕತ್ವದ ಗೂಂಡಾ ಗ್ಯಾಂಗ್‌ನ್ನು ಸೆಝ್ ಛೂಬಿಟ್ಟಿತ್ತು! ಈ ಬಗ್ಗೆ ಎರಡೆರಡು ಪ್ರಕರಣ ಬಜಪೆ ಠಾಣೆಯಲ್ಲಿ ದಾಖಲಾಗಿದೆ. ಹೀಗಿರುವಾಗ ಕೆಸಿಸಿಐ ಹೋಮ್ ಸ್ಟೇ ದಾಳಿ ವಿರೋಧಿಸುವುದು ಬರೀ ಬೂಟಾಟಿಕೆ ಅಲ್ಲವಾ?

ಹಾಗೆ ನೋಡಿದರೆ, ವಿನಯ್ ಹೆಗ್ಡೆ ಮತ್ತವರ ಉದ್ಯಮಿ ಮಿತ್ರರು ಕರಾವಳಿಯ ನೆಮ್ಮದಿಗಾಗಿ ಗವರ್ನರ್ ತನಕ ಹೋಗುವ ಅವಶ್ಯಕತೆಯೇ ಇಲ್ಲ. ಸಂಘಪರಿವಾರದ ಪುರೋಹಿತಾಗ್ರೇಸ್ ಕಲ್ಲಡ್ಕ ಭಟ್‌ನಂಥವರಿಗೆ "ದಾಳಿಗಳ" ಅಪಾಯದ ಘೋರತನ ಮನಗಾಣಿಸಿದರೆ ಸಾಕು. ಇವತ್ತು ಹೆಗ್ಡೆಯ ಹೈಟೆಕ್ ಶಿಕ್ಷಣ ಸಂಸ್ಥೆಗಾಗುವ ಹಾನಿ ನಾಳೆ ಕಲ್ಲಡ್ಕನ ಕಾವಿ ಶಾಲೆ-ಹೈಸ್ಕೂಲಿಗೂ ತಪ್ಪಿದ್ದಲ್ಲ. ಕೋಮು ಹುಲಿ ಸವಾರಿ ಮಾಡುತ್ತಿರುವ ವಿನಯ್ ಹೆಗ್ಡೆ ಕಲ್ಲಡ್ಕ ಭಟ್, ಜಗದೀಶ್ ಕಾರಂತ್ ವಗೈರೆಗಳಿಗೆ ಭಟ್ಕಳದ ಶಾಸಕ ಚಿತ್ತರಂಜನ್ ನೆನಪಾಗುವುದಿಲ್ಲವಾ? ಆ ಡಾ. ರಂಜನ್‌ರನ್ನು ಹಿಂದೂತ್ವದ ಹುಲಿಯೇ ತಿಂದು ಹಾಕಿದ್ದಲ್ಲವಾ?

ಸಿಆರ್‌ಝೆಡ್ ಕಾಯ್ದೆ ಉಲ್ಲಂಘಿಸಿ ಗೆಸ್ಟ್‌ಹೌಸ್ ಕಟ್ಟಿಕೊಂಡಿರುವ, ತನ್ನ ಕಂಪನಿ ಕಾರ್ಮಿಕರಿಗೆ ಸರಿಯಾಗಿ ಸಂಬಳ ಕೊಡದ, ವಿದ್ಯಾರ್ಥಿಗಳ ಡೊನೇಷನ್ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿರುವ, ಒಣಪ್ರತಿಷ್ಠೆಗೆ ಹಿಂದೂ ಸಮಾಜೋತ್ಸವವನ್ನು ಪೈಪೋಟಿಯಲ್ಲಿ ಸಂಘಟಿಸಿದ ವಿನಯ್ ಹೆಗ್ಡೆ ಎಂಬ ಅಡ್ಡಕಸುಬಿಗೆ ಹಿಂದೂತ್ವದ "ಬಿಸಿ" ತಟ್ಟಿರುವುದು ನೈಸರ್ಗಿಕ ನ್ಯಾಯತತ್ವ ತಾನೆ? ಮಾಡಿದ್ದುಣ್ಣೋ ಮಹರಾಯ!!

● ನಹುಷ





ಸುಂದರಿಯಾಗಿದ್ದ ಆಕೆ ತನ್ನ ಸೌಂದರ್ಯದಿಂದ ಯಾರನ್ನಾದರೂ ಮಣಿಸಬಹುದೆಂಬ ಅಹಂಕಾರದಿಂದ ಕೂಡಿದ್ದವಳು. ಆಕೆಯೂ ಸಾಮಾನ್ಯ ಮಹಿಳೆಯಾಗಿರಲಿಲ್ಲ. ವಕೀಲಳಾಗಿದ್ದವಳು. ಅಷ್ಟೇ ಅಲ್ಲದೆ ಹರಿಯಾಣಾ ರಾಜ್ಯದ ಸಹಾಯಕ ಅಡ್ವೋಕೇಟ್ ಜನರಲ್ ಆಗಿ ನೇಮಕಗೊಂಡಿದ್ದವಳು. ವಿವಾಹಿತನೊಡನೆ ಮರುಮದುವೆ ಮಾಡಿಕೊಂಡಲ್ಲಿ ದ್ವಿಪತ್ನಿತ್ವದ ಅಪರಾಧವಾಗುತ್ತದೆಂದು ಬಲ್ಲವಳು. ಆತ ಕೇವಲ ತನ್ನ ದೇಹವನ್ನು ಬಯಸುತ್ತಿರುವನೆಂಬ ವಾಸ್ತವತೆಯನ್ನು ಬೇಕೆಂತಲೇ ಪಕ್ಕಕ್ಕೆ ಸರಿಸಿದಳು. ಅವಿದ್ಯಾವಂತ ಬಾಲೆಯಾಗಿರಲೀ ಅಥವಾ ಫಿಜಾಳಂತಹ ವಿದ್ಯಾವಂತ ವಕೀಲಳಾಗಲೀ ಇಂತಹ ಮೋಹಪಾಶದಲ್ಲಿ ಸಿಲುಕಿ ಯಾಕೆ ಪತಂಗದಂತೆ ಬೆಂಕಿಗಾಹುತಿಯಾಗುತ್ತಾರೆ?


ಫಿಜಾ ಎಂಬ ಉಲ್ಕೆ


ನಮ್ಮ ಟಿಪಿಕಲ್ ಬಾಲಿವುಡ್ ಶೈಲಿಯ ಪತಿ ಪತ್ನಿ ಔರ್ ವೋ ತ್ರಿಕೋನ ಪ್ರೇಮಕಥೆಯ ಅಂತ್ಯದಂತೆ ಉರಿದು ಉಲ್ಕೆಯಾದವಳು ಅನುರಾಧ ಬಾಲಿ ಅಲಿಯಾಸ್ ಫಿಜಾ. ಆಗಸ್ಟ್ 6 ರಂದು ಮೊಹಾಲಿಯ ಆಕೆಯ ಮನೆಯಿಂದ ಬರುತ್ತಿದ್ದ ದುರ್ವಾಸನೆಯ ದೂರಿನ ಮೇರೆಗೆ ಆಕೆಯ ಮನೆಯ ಕದವನ್ನು ದೂಡಿದಾಗ ಚಿಲಕ ಹಾಕದೆ ಇದ್ದ ಕದವು ತಂತಾನೇ ಪೊಲೀಸಿನವರಿಗೆ ತೆರೆದುಕೊಂಡಾಗ ಕಂಡುಬಂದಿದ್ದು ಆಕೆಯ ಕೊಳೆತ ಶವ. ಕೈ ಹಿಡಿಯಷ್ಟು ಬಂಧುಗಳ ಸಮ್ಮುಖದಲ್ಲಿ ಚಿಕ್ಕಪ್ಪ ಸತ್ಯಪಾಲ್‌ನ ನೇತೃತ್ವದಲ್ಲಿ ನಡೆದ ಅಂತ್ಯಸಂಸ್ಕಾರದಲ್ಲಿ ಯಾವುದೇ ಪ್ರತಿಭಟನೆಯನ್ನು ತೋರದೆ ಚಿತೆಗೇರಿದಳು. ಅವಳು ಸಂಸ್ಥಾಪಿಸಿದ ಫಿಜಾ-ಎ-ಹಿಂದ್ ಎಂಬ ಸರ್ಕಾರೇತರ ಸಂಸ್ಥೆಯ ಸದಸ್ಯನಾದ ನಸೀಮ್ ಅಹಮದ್ ಎಂಬಾತ ಮಾತ್ರ "ಅಯ್ಯೋ! ನಮ್ಮೊಡನೆ ಜುಲೈ 30ರಂದು ರೋಜಾದ ಇಫ್ತಾರಿ (ಉಪವಾಸವನ್ನು ಬಿಡುವಾಗ ಮಾಡುವ ಉಪಹಾರ) ಮಾಡಿದಳು. ಅವಳನ್ನು ಮುಸ್ಲಿಮ್ ಸಂಪ್ರದಾಯದ ರೀತ್ಯಾ ಅಂತ್ಯಕ್ರಿಯೆ ನಡೆಸುತ್ತಾರೆ ಅಂತ ಅಂದು ಕೊಂಡಿದ್ದೆವು" ಎಂದು ಅಲವತ್ತುಕೊಂಡಿದ್ದನ್ನು ಬಿಟ್ಟರೆ ಇನ್ಯಾರೂ ಕೂಡಾ ಉಸಿರೆತ್ತಲಿಲ್ಲ.

ಪ್ರೀತಿಗಾಗಿ ಎಂದು ಏನೆಲ್ಲಾ ಆಯಿತು.... ಹರಿಯಾಣಾದ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಹೂಡಾ ಮಂತ್ರಿಮಂಡಲದಲ್ಲಿ ಉಪಮುಖ್ಯ ಮಂತ್ರಿಯಾಗಿದ್ದ ಚಂದ್ರಮೋಹನನ ಮುರುಳಿ ಮಾಧುರ್ಯಕ್ಕೆ ಮಾರುಹೋಗಲು ಆಕೆ ಹಲವಾರು ವರ್ಷಗಳನ್ನೇ ತೆಗೆದುಕೊಂಡಳು. ಸುಲಭವಾಗಿ ಅವನನ್ನು ಆಕೆ ಒಪ್ಪಿಕೊಳ್ಳಲಿಲ್ಲ. "ಅನು ಪ್ಲೀಜ್ ಕಿಲ್ ಮಿ" ಎಂಬ ಅವನ ಮೆಸೇಜುಗಳಿಗೆ ಉತ್ತರಿಸುವ ಗೋಜಿಗೇ ಹೋಗಲಿಲ್ಲ. "ನಿನ್ನ ಹೃದಯದಲ್ಲಿ ದಯೆ ಎಂಬುದು ಇಲ್ಲವೇ ನನ್ನ ಕೋರಿಕೆಯನ್ನು ಆಲಿಸಿದ್ದರೆ ಭಗವಂತನೂ ಕೂಡಾ ಕರಗುತ್ತಿದ್ದ" ಎಂದು ಭಗವಂತನನ್ನು ಕೂಡಾ ಎಳೆದು ತಂದ. "ಯೂ ಆರ್ ವೆರಿ ಸ್ಟಬ್ಬರ್ನ್... ಯೂ ನೆವರ್ ಗಿವ್ ರಿಪ್ಲೈ" ಎಂದು ದೂರಿದ. "ವೈ ಡೋಂಟ್ ಯೂ ಮ್ಯಾರಿ ಮಿ" ಎಂದು ಮದುವೆಯ ಪ್ರಸ್ತಾವನೆಯನ್ನು ಸಲ್ಲಿಸಿದ. "ಅಗರ್ ಭಗವಾನ್ ಏಕ್ ವಿಶ್ ಪೂಛೇ ತೋ ಮೈ ಆಪ್ ಸೇ ಶಾದಿ ಕರೂಂ" ಎಂದು ತನ್ನ ಬದುಕಿನ ಮಹದಾಸೆಯನ್ನು ಆಕೆಯೆದುರು ಬಿಚ್ಚಿಟ್ಟ.

ಆಕೆಯೂ ಸಾಮಾನ್ಯ ಮಹಿಳೆಯಾಗಿರಲಿಲ್ಲ, ವಕೀಲಳಾಗಿದ್ದವಳು. ಅಷ್ಟೇ ಅಲ್ಲದೆ ಆತ ಉಪಮುಖ್ಯಮಂತ್ರಿಯಾದಾಗ ಅವಳೂ ಕೂಡಾ ಹರಿಯಾಣಾ ರಾಜ್ಯದ ಸಹಾಯಕ ಅಡ್ವೋಕೇಟ್ ಜನರಲ್ ಆಗಿ ನೇಮಕಗೊಂಡಿದ್ದವಳು. ವಿವಾಹಿತನಾಗಿದ್ದು ಇಬ್ಬರು ಮಕ್ಕಳ ತಂದೆಯಾಗಿದ್ದ ಚಂದ್ರಮೋಹನನೊಡನೆ ಮರುಮದುವೆ ಮಾಡಿಕೊಂಡಲ್ಲಿ ದ್ವಿಪತ್ನಿತ್ವದ ಅಪರಾಧವಾಗುತ್ತದೆಂದು ಬಲ್ಲವಳು. ಹಾಗೆಯೇ ಅವನ ತಂದೆ ಭಜನ್‌ಲಾಲ್ ರಾಜಕೀಯವಾಗಿ ಎಂತಹ ಬಲಿಷ್ಠ ವ್ಯಕ್ತಿ ಎಂದು ಅರಿತವಳು. ಹೀಗಾಗಿ ಅವನ ಪ್ರೇಮ ನಿವೇದನೆಯನ್ನು ಐದಾರು ವರ್ಷಗಳವರೆಗೆ ಉಪೇಕ್ಷಿಸಿದಳು. ಕೊನೆಗೂ ಅವನ ಮೆಸೇಜುಗಳಿಗೆ ಸೋತು ಹೋದಳು. "ಪ್ಲೀಜ್ ಕಾಲ್ ಮಿ... ಐ ಆಮ್ ಡೈಯಿಂಗ್" ಎಂಬ ಆತನ ಮೆಸೇಜು ಬಂದಾಗ.... ಅದು ನಿಜವೇ ಎಂದು ಭ್ರಮಿಸಿದಳು.

ಸುಂದರಿಯಾಗಿದ್ದ ಆಕೆ ತನ್ನ ಸೌಂದರ್ಯದಿಂದ ಯಾರನ್ನಾದರೂ ಮಣಿಸಬಹುದೆಂಬ ಅಹಂಕಾರದಿಂದ ಕೂಡಿದ್ದವಳು. ಆತ ಕೇವಲ ತನ್ನ ದೇಹವನ್ನು ಬಯಸುತ್ತಿರುವನೆಂಬ ವಾಸ್ತವತೆಯನ್ನು ಬೇಕೆಂತಲೇ ಪಕ್ಕಕ್ಕೆ ಸರಿಸಿದಳು. ಆತ "ನಾನು ಭಿಕ್ಷೆ ಬೇಡುತ್ತಿದ್ದೇನೆ... ನನ್ನನ್ನು ಒಪ್ಪಿಕೋ" ಎಂದು ಕಾಲೇಜು ಹುಡುಗನಂತೆ ಗೋಗರೆದಾಗ ಒಂದಿಷ್ಟು ಕರಗಿದಳು. ಕೊನೆಗಂತೂ "ಓಕೆ... ಐ ಪೂಟ್ ಮೈ ಸೆಲ್ಫ್" ಎಂದು ಮೆಸೇಜು ಕಳುಹಿಸಿದಾಗ ಸಂಪೂರ್ಣವಾಗಿ ಸೋತು ಹೋದಳು. ಎಂತಹ ಅಮರ ಪ್ರೇಮಿ ಎಂದು ಆತನಿಗೆ ಶರಣಾದಳು. ಆ ಹೊತ್ತಿನಲ್ಲಿಯೂ ತನ್ನ ಲೀಗಲ್ ಸ್ಟೇಟಸ್‌ನ ಬಗ್ಗೆ ಆಕೆಗೆ ವಿಪರೀತ ಕಾಳಜಿ ಇತ್ತು, ಹೀಗಾಗಿ ಆತ ತನ್ನನ್ನು ವಿಧಿಬದ್ಧವಾಗಿ ವಿವಾಹವಾಗಲೇಬೇಕೆಂಬ ಶರತ್ತನ್ನಿಟ್ಟಳು. ಚಂಡೀಗಢದ ಮಿಲಿಟರಿ ಸರ್ವಿಸಸ್‌ನ ಉದ್ಯೋಗಿಯಾಗಿದ್ದ ಧರ್ಮಪಾಲ ಎಂಬುವವನ ಮಗಳಾಗಿದ್ದ ಆಕೆ ತನ್ನ 24ನೆಯ ವಯಸ್ಸಿನಲ್ಲಿಯೇ ಒಬ್ಬಾತನೊಡನೆ ಮದುವೆಯಾಗಿದ್ದಳು. ಪುಟ್ಟದಾದ ಒಂದು ಸಾರಿಗೆ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದ ಆತನಿಂದ ಮದುವೆಯಾದ ಒಂದು ವರ್ಷದೊಳಗೆ ವಿಚ್ಛೇದನವನ್ನು ಪಡೆದು ಉನ್ನತ ಸರ್ಕಾರೀ ಹುದ್ದೆಯನ್ನು ಏರಿದ್ದಳು.





ಪ್ರೀತಿಯ 'ಬಂಧನ'ದಲ್ಲಿ

ವಕೀಲಳಾಗಿದ್ದ ಆಕೆ ಉಚಿತ ಕಾನೂನು ನೆರವನ್ನು ನೀಡಿದುದನ್ನು ಆತ ಸ್ವೀಕರಿಸಿದ. ದೇಶದ ಕಾನೂನಿನ ದೃಷ್ಟಿಯಿಂದ ಅಕ್ರಮವಾದ ವಿವಾಹವನ್ನು ಸಕ್ರಮಗೊಳಿಸುವ ಯೋಜನೆಯನ್ನು ಇಬ್ಬರೂ ಸೇರಿ ಸಿದ್ಧ ಪಡಿಸಿದರು. ಅದರಂತೆ ಒನ್ ಫೈನ್ ಡೇ ಅಂತಾರಲ್ಲ... ಅಂತಹದೊಂದು ದಿನ ಇಬ್ಬರೂ ಕೂಡಾ ನಾಪತ್ತೆಯಾದರು. ಹರಿಯಾಣಾ ರಾಜ್ಯದ ಜನತೆ ಚಕಿತರಾದರು. ರಾಜ್ಯದ ಉಪ ಮುಖ್ಯ ಮಂತ್ರಿ ಮತ್ತು ರಾಜ್ಯದ ಸಹಾಯಕ ಅಡ್ವೊಕೇಟ್ ಜನರಲ್ ಇಬ್ಬರೂ ನಾಪತ್ತೆಯಾದರು... ಎಂದರೆ! 2008ರ ನವೆಂಬರ್ 8ರಂದು ನಾಪತ್ತೆಯಾದ ಅವರಿಬ್ಬರೂ ಡಿಸೆಂಬರ್ 8ರಂದು ಇಸ್ಲಾಮಿಗೆ ಮತಾಂತರಗೊಂಡರು. ಮೀರತ್‌ನಲ್ಲಿ ಮೌಲ್ವಿಯವರು ಚಾಂದ್ ಮೋಹನ್ ಮತ್ತು ಫಿಜಾ ಎಂದು ಮತಾಂತರಗೊಂಡ ಅವರಿಬ್ಬರ ನಿಕಾಹ್ ನೆರವೇರಿಸಿದರು. ಚಾಂದ್ ಮೋಹನ್ ತನ್ನ ವಧುವಾದ ಫಿಜಾಳಿಗೆ ಐದು ಲಕ್ಷ ರೂ.ಗಳ 'ಮೆಹರನ್ನು ನೀಡಿದ. ಇಬ್ಬರೂ 2009ರ ಜನವರಿ 11 ರಂದು ಮತ್ತೆ ತಮ್ಮ ರಾಜ್ಯಕ್ಕೆ ಹಿಂದಿರುಗಿ ತಮ್ಮ ಮದುವೆಯನ್ನು ಬಹಿರಂಗಗೊಳಿಸಿದರು. ಚಂದ್ರಮೋಹನ್‌ನ ಹೆಂಡತಿ ಸೀಮಾ ಬಿಷ್ಣೋಯಿ ಸಾರ್ವಜನಿಕವಾಗಿ ಸೊಲ್ಲೆತ್ತಲಿಲ್ಲ, ಆದರೆ, ಅಂತರಂಗದಲ್ಲಿ ಅವಳು ಹರಿಸಿದ ಕಣ್ಣೀರಿನ ಲೆಕ್ಕವನ್ನಿಟ್ಟಿರುವವರ್‍ಯಾರು? ಜನವರಿ 9 ರಂದು ಉಪಮುಖ್ಯಮಂತ್ರಿಯನ್ನು ಮತ್ತು ಸಹಾಯಕ ಅಡ್ವೋಕೇಟ್ ಜನರಲ್‌ರನ್ನು ಒಟ್ಟಿಗೆ ಮನೆಗೆ ಕಳಿಸಲಾಯಿತು... ಕರ್ತವ್ಯಲೋಪದ ಆರೋಪದ ಮೇರೆಗೆ. ಚಂದ್ರ ಮೋಹನ್‌ನ ತಂದೆ ಭಜನ್ ಲಾಲ್ ಆತನೊಡನೆ ಸಾರ್ವಜನಿಕವಾಗಿ ಸಂಬಂಧವನ್ನು ತೊರೆದುಕೊಂಡ.

ಪ್ರೇಮದ ಎದುರು ರಾಜ್ಯಭಾರ ಕೂಡಾ ತೃಣಸಮಾನ ಎಂದು ಸಾಬೀತುಪಡಿಸಿರುವುದಕ್ಕೆ ಚರಿತ್ರೆ ಸಾಕ್ಷಿಯಾಗಿದೆ. ಇದೂ ಕೂಡ ಅಂತಹದೊಂದು ಅಮರ ಪ್ರೇಮ ಕಹಾನಿಯೇನೋ ಎಂದು ಅನುಮಾನ ಪಡುವಷ್ಟರಲ್ಲಿಯೇ ಜನವರಿ 29 ರಂದು ಫಿಜಾಳ ಮನೆಯನ್ನು ಮತ್ತು ಅವಳನ್ನು ತೊರೆದು ಚಂದ್ರಮೋಹನ್ ತನ್ನ ಮೂಲಮನೆತನಕ್ಕೆ ಮತ್ತು ತನ್ನ ಹಳೆ ಹೆಂಡತಿಯ ಪಾದಕ್ಕೆ ಹಾಗೂ ತನ್ನ ತಂದೆಯ ಬಳಿಗೆ ಮರಳಿದ. ಪ್ರೀತಿಗಾಗಿ ಇಡೀ ಲೋಕವನ್ನೇ ಧಿಕ್ಕರಿಸಿದ ಚಂದ್ರಮೋಹನ್ ಮಾರ್ಚ್ 14ರಂದು ಆಕೆಗೆ ಇಸ್ಲಾಮೀ ಕಾನೂನುರೀತ್ಯಾ ವಿಚ್ಛೇದನವನ್ನು ನೀಡಿದ ಮತ್ತು ತಲಾಕ್ ತಲಾಕ್ ತಲಾಕ್ ಎಂದು ಎಸ್‌ಎಂಎಸ್ ಮೆಸೇಜನ್ನು ಕಳುಹಿಸಿದ. ಅಲ್ಲಿಗೆ ಅವರಿಬ್ಬರ 40 ದಿನಗಳ ದಾಂಪತ್ಯಜೀವನ ಅಂತ್ಯವಾಯಿತು.

ನಂತರ ಆಕೆ ತೀವ್ರ ಖಿನ್ನತೆಗೊಳಗಾಗಿ ಮಾನಸಿಕ ತಜ್ಞರ ಬಳಿ ಚಿಕಿತ್ಸೆಯನ್ನು ಪಡೆಯತೊಡಗಿದಳು. ಚಂದ್ರಮೋಹನ್ ಹಾಗೂ ಆತನ ಕುಟುಂಬವನ್ನು ರಾಜಕೀಯವಾಗಿ ಕಾಡಿಸತೊಡಗಿದಳು. ತಾನೇ ಒಂದು ರಾಜಕೀಯ ಪಕ್ಷವನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡಿದಳು. ರಿಯಾಲಿಟಿ ಶೋ ಒಂದರಲ್ಲಿ ಭಾಗವಹಿಸಿ ಎಡ್ರಾ ಬಿರ್‍ರಿಯರ್ ನಡೆದುಕೊಂಡಳು. ಕೊನೆಗೆ 6ನೇ ವಾರದಲ್ಲಿಯೆ ಸ್ಪರ್ಧಿಗಳೆಲ್ಲಾ ಸೇರಿ ಅವಳನ್ನು ಹೊರಹಾಕಿ ಬಿಡುಗಡೆಯ ನಿಟ್ಟುಸಿರನ್ನು ಬಿಟ್ಟರು. ಆನಂತರ ಅವಳ ಬದುಕ ನೇರವಾಗಲೇ ಇಲ್ಲ, ಶವವಾಗಿ, ಕೊಳೆತು ಬೆಂಕಿಗಾಹು ಯಾದಳು. ಅವಳ ದುರಂತ ಬದುಕಿನ ಅಧ್ಯಾಯಗಳ ಒಂದೊಂದಾಗಿ ತೆರೆದುಕೊಳ್ಳುತ್ತಿದ್ದಂತೆಯೇ...

ನನ್ನ ವೃತ್ತಿಯ ಸಂಬಂಧ ನನ್ನೆದುರು ಅಂತಹ ಹಲವಾರ ಪ್ರಕರಣಗಳು ಮೂಡಿ ಮಾಯವಾಗುತ್ತವೆ. ಅವಿದ್ಯಾವಂ ಬಾಲೆಯಾಗಿರಲೀ ಅಥವಾ ಫಿಜಾಳಂತಹ ವಿದ್ಯಾವಂ ವಕೀಲಳಾಗಲೀ ಇಂತಹ ಮೋಹಪಾಶದಲ್ಲಿ ಸಿಲುಕಿ ಯಾ ಪತಂಗದಂತೆ ಬೆಂಕಿಗಾಹುತಿಯಾಗುತ್ತಾರೆ?

ಅವಳು ವಕೀಲಳಾಗಿ ಬೇಕೆಂತಲೇ ಕಡೆಗಣಿಸಿ ಕಾನೂನಿನ ಅಂಶವೊಂದಿದೆ. ಹಿಂದೂ ಅಥವಾ ಹಿಂದ ಯೇತರ ಪತಿಯು ತನ್ನ ವಿವಾಹಿತ ಪತ್ನಿಯಿಂದ ಬಿಡುಗ ಯನ್ನು ಪಡೆಯಲು ಇಸ್ಲಾಮಿಗೆ ಮತಾಂತರಗೊಂಡಲ್ಲಿ ಕೃತ್ಯವು ಸಿಂಧುವಾಗುವುದೇ? ತನ್ನ ಪತ್ನಿ ಅಥವಾ ಪತಿಯ ಜೀವಂತವಾಗಿರುವಾಗ್ಗೆ ಹಿಂದೂ ಪುರುಷ ಅಥವ ಮಹಿಳೆಯು ಇಸ್ಲಾಮಿಗೆ ಮತಾಂತರಗೊಂಡಲ್ಲಿ ಆಕೆಯ ಅಥವಾ ಆತನ ಮೊದಲ ಮದುವೆಯ ತಂತಾನೇ ವಿಘಟನೆಗೊಳ್ಳುತ್ತದೆಯೇ ನಿಲ್ಲಿ! ಭಾವಿ ಅಮರ ಪ್ರೇಮಿಗಳೇ ನಿಮ್ಮ ಮೇಲ್ಕಂಡ ಕೃತ್ಯವು ಕಾನೂನುರೀತ ಅಪರಾಧ ಎಂದು ಸುಪ್ರೀಂಕೋರ್ಟ್ ಹಲವಾರು ಸಾರಿ ತನ್ನ ತೀರ್ಪುಗ ಮೂಲಕ ಎಚ್ಚರಿಕೆಯನ್ನು ಕೊಟ್ಟಿದೆ.


ಸರಳಾ ಮುದ್ಗಲ್ ವಿರು ಯೂನಿಯನ್ ಆಫ್ ಇಂಡಿಯ ಎಐಆರ್ 1995 ಸುಪ್ರೀಂಕೋರ್ಟ 1531 ಪ್ರಕರಣದಲ್ಲಿನ ಅರ್ಜಿದಾರಳ ಮೀನಾ ಮಾಥುರ್ ಜಿತೇಂ ಮಾಥುರ್‌ನ ವಿವಾಹಿತ ಪತ್ನಿ. ಅವರ ಮೂವರು ಮಕ್ಕಳಿದ್ದವು. ಮದುವೆಯ ಸುಮಾರು 10 ವರ್ಷಗಳ ನಂತರ ಆಕೆಗೆ ತನ್ನ ಪತಿಯ ಸುನಿತಾ ನರುಲ ಅಲಿಯಾಸ್ ಫಾತಿಮಾ ಎಂಬಾಕೆಯೊ ಮರು ಮದುವೆಯಾಗಿದ್ದಾನೆ ಎಂಬ ವಿಷಯವು ತಿಳಿ ಬಂದಿತು. ಅವರಿಬ್ಬರೂ ಇಸ್ಲಾಮ್ ಧರ್ಮಕ್ಕೆ ಮತಾಂ ಗೊಂಡಿದ್ದು ಆ ಮೂಲಕ ಮರು ಮದುವೆಯಾಗಿದ ಎಂಬುದೂ ಕೂಡಾ ಆಕೆಗೆ ತಿಳಿದುಬಂದಿತು. ಭಾರತೀ ದಂಡಸಂಹಿತೆಯ ಕಲಮು 494ರ ರೀತ್ಯಾ ಬಿಗೆಮಿ ಅಪರಾಧಕ್ಕಾಗಿ ವಿಧಿಸಬಹುದಾದ ದಂಡನೆಯ ತಪ್ಪಿಸಿಕೊಳ್ಳುವ ಸಲುವಾಗಿ ಆತ ಇಸ್ಲಾಮ ಮತಾಂತರಗೊಂಡಿದ್ದು, ತಾನು ನಾಲ್ಕು ಪತ್ನಿಯರ ಹೊಂದುವ ಅವಕಾಶವಿದೆ ಎಂದು ವಾದಿಸಿದ್ದ ಮತ್ತೊಂ ರಿಟ್ ಅರ್ಜಿಯನ್ನು ದಾಖಲಿಸಿದ್ದವಳು ಜಿತೇಂ ಮಾಥುರ್‌ನ ಎರಡನೇ ಪತ್ನಿಯಾದ ಸುನಿತಾ ನರು ಅಲಿಯಾಸ್ ಫಾತಿಮಾ. ವಿಚಿತ್ರ ತಿರ ನಲ್ಲಿ ಆಕೆಯು ರಿಟ್ ಅರ್ಜಿಯ ಸಲ್ಲಿಸಿದ್ದು ತನ್ನ ಪತಿಯಾದ ಜಿತೇ ಮಾಥುರ್ ಮೊದಲು ಮೀನಾ ಮಾಥು ಳನ್ನು ಮದುವೆಯಾಗಿದ್ದು ತನ್ನ ಪತಿ ಆತನ ಮೊದಲನೇ ಪತ್ನಿಯ ಪ್ರಭಾ ಒಳಗಾಗಿ ತಾನು ಹಿಂದೂ ಧರ್ಮ ಮರಳಿರುವುದಾಗಿಯೂ ಮತ್ತು ಆಕೆ ಹಾಗೂ ಆಕೆಯ ಮಕ್ಕಳ ಪಾಲ ಪೋಷಣೆ ಮಾಡುವುದಾಗಿ ಒಪ್ಪಿರುತ ಆದ್ದರಿಂದ ತನ್ನ ಸಮಸ್ಯೆ ಏನೆಂ ತಾನು ಮುಸ್ಲಿಮ್ ಧರ್ಮದ ರೀ ನೀತಿಯ ಪ್ರಕಾರ ಬದುಕುತ್ತಿರ ದಾಗಿಯೂ ಮತ್ತು ತನ್ನ ಪತಿಯು ನಿಗಾವಣೆಯನ್ನು ಮಾಡುತ್ತಿರುವು



ಕೊಳೆತ ಹೆಣವಾದ ಫಿಜಾ



ಫಿಜಾಳ ಅಂತ್ಯಕ್ರಿಯೆ



ಮೋಸ ಹೋದ ಫಿಜಾ ಕಣ್ಣೀರಿಡುತ್ತಿರುವುದು....

...ಯು ತಾನು ಅಪಾರ ಕಷ್ಟವನ್ನು ಅನುಭವಿಸುತ್ತಿರುವುದಾಗಿಯೂ ...ಸುತ್ತಾಳೆ. ಹಿಂದೂ ಮತ್ತು ಮುಸ್ಲಿಮ್ ವೈಯಕ್ತಿಕ ಕಾನೂನುಗಳು - ...ದರಲ್ಲಿಯೂ ತನಗೆ ರಕ್ಷಣೆ ದೊರಕಿಲ್ಲವೆಂದು ಪರಿಹಾರವನ್ನು ...ದ್ದಾಳೆ. ಆದೇ ಸಂದರ್ಭದಲ್ಲಿ ಕಲ್ಯಾಣಿ ಎಂಬ ಹೆಸರಿನ ಮಹಿಳಾ ...ಟನೆಯು ಕೂಡಾ ಕಾನೂನುರೀತ್ಯಾ ಹಿಂದೂ ಮಹಿಳೆಯರಿಂದ ...ದನವನ್ನು ಯಶಸ್ವಿಯಾಗಿ ಪಡೆಯುವ ಸಲುವಾಗಿ ಹಿಂದೂ ಪುರುಷರು ...ಧರ್ಮಕ್ಕೆ ಮತಾಂತರಗೊಳ್ಳುತ್ತಿರುವ ಪ್ರಸಂಗವನ್ನು ನ್ಯಾಯಾಲಯದ ...ಕ್ಕೆ ತಂದಿದ್ದು, ಆ ಬಗ್ಗೆ ಸೂಕ್ತ ಪರಿಹಾರವನ್ನು ಕೋರಿತ್ತು. ಈ ... ಪ್ರಕರಣಗಳನ್ನೂ ಒಟ್ಟಾಗಿ ಅವಲೋಕಿಸಿದ ಸರ್ವೋಚ್ಚ ...ಾಲಯವು ಇಸ್ಲಾಮ್ ಧರ್ಮಕ್ಕೆ ಮತಾಂತರಗೊಂಡು ಮರು ...ವೆಯಾದ ಹಿಂದೂ ಪತಿಯು ಭಾರತೀಯ ದಂಡಸಂಹಿತೆಯ ...ು 494ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಮಾಡಿರುವನೆಂತಲೂ ... ಮತಾಂತರಗೊಂಡ ನಂತರ ಮಾಡಿಕೊಂಡ ಮರು ಮದುವೆಯು ...ಧು ಎಂತಲೂ ತೀರ್ಪನ್ನು ಪ್ರಕಟಗೊಳಿಸಿದೆ.

...ಲಿ ಥಾಮಸ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ (2000) ...ಆರ್‌ಸಿಸಿ 224ರ ಪ್ರಕರಣದಲ್ಲಿ ಸುಶ್ಮಿತಾ ಘೋಷ್ ಎಂಬಾಕೆಯು ...ಘೋಷ್ ಎಂಬುವವನ ಪತ್ನಿಯಾಗಿದ್ದು 1992ರಲ್ಲಿ ರಿಟ್ ಪಿಟಿಷನ್ನನ್ನು ...ಸಿದಳು. ತಾವಿಬ್ಬರೂ 1984ರಲ್ಲಿ ಮದುವೆಯಾಗಿದ್ದು, ನೆಮ್ಮದಿಯ ...ಹಿಕ ಜೀವನವನ್ನು ನಡೆಸುತ್ತಿದ್ದುದಾಗಿಯೂ, ಆದರೆ 1992ರಲ್ಲಿ ...ಗೆಯು ತಾನು ವನಿತಾಗುಪ್ತ ಎಂಬಾಕೆಯನ್ನು ಮದುವೆ ...ಕೊಳ್ಳುವುದಾಗಿಯೂ, ಆದುದರಿಂದ ಮರ್ಯಾದೆಯಿಂದ ಆಕೆಯು ... ಸಮ್ಮತಿಯ ಮೇರೆಗೆ ವಿಚ್ಛೇದನವನ್ನು ನೀಡಿದರೆ ಆಕೆಗೇ ...ಸುದೆಂತಲೂ ಹೇಳಿ ಮೌಲ್ವಿಯ ಸಮ್ಮುಖದಲ್ಲಿ ಇಸ್ಲಾಂಗೆ ...ಂತರಗೊಂಡ ಸರ್ಟಿಫಿಕೇಟನ್ನು ತೋರಿಸುತ್ತಾನೆ ಮತ್ತು ಈ ನಿಟ್ಟಿನಲ್ಲಿ ... ಹೆಸರನ್ನು ಮೊಹಮ್ಮದ್ ಕರೀಮ್ ಘಾಜಿ ಎಂದು ...ಾಯಿಸಿಕೊಂಡಿರುವುದಾಗಿಯೂ ಹೇಳುತ್ತಾನೆ. ಆಕೆಯ ಕುಟುಂಬದವರ ...ವಾದಕ್ಕೆ ಕೂಡಾ ಆತನು ಮಣಿಯುವುದಿಲ್ಲ, ಬದಲಿಗೆ ಒಳ್ಳೆ ಮಾತಿನಲ್ಲಿ ...ಯು ವಿಚ್ಛೇದನವನ್ನು ನೀಡದಿದ್ದಲ್ಲಿ ಸವತಿಯ ಜೊತೆಯಲ್ಲಿ ಬಾಳ್ವೆ ...ುವ ದುರ್ಗತಿಯನ್ನು ಎದುರಿಸಬೇಕಾಗುತ್ತದೆ ಎಂದು ಆತನು ...ದಿಸಿದ. ಕೊನೆಗೆ ಆಕೆಯು ಮೇಲ್ಕಂಡಂತೆ ರಿಟ್ ಪಿಟಿಷನ್ನನ್ನು ...ಲಿಸಿದ್ದು, ಸದರಿ ಪಿಟಿಷನ್ನಿನಲ್ಲಿ ಆತನು ಇಸ್ಲಾಮಿಗೆ ಮತಾಂತರಗೊಂಡಿ...ದು ಮರು ಮದುವೆ ಆಗುವ ಏಕೈಕ ಉದ್ದೇಶದಿಂದ ಮಾತ್ರ ...ತು ಇಸ್ಲಾಮಿನ ಮೇಲಿನ ಪ್ರೀತಿ ಮತ್ತು ಶ್ರದ್ಧೆಯಿಂದ ಅಲ್ಲ ಹಾಗೂ ... ತನ್ನ ಹೆಸರನ್ನು ಅಧಿಕೃತವಾಗಿ ಬದಲಾಯಿಸಿರುವುದಿಲ್ಲ ಎಂದು ...ದ್ದು ಅನೇಕ ಪರಿಹಾರಗಳನ್ನು ನ್ಯಾಯಾಲಯದಿಂದ ಕೋರಿದಳು. ...ೂ ಆಕೆಯು ಮತಾಂತರಗೊಂಡು ಬಹು ಪತ್ನಿಯರನ್ನು ಹೊಂದುವುದು ...ವಿವಾದ ಕೃತ್ಯ ಮತ್ತು ಸದರಿ ಮತಾಂತರದ ನಂತರದ ಮರು ...ಹವು ರದ್ದಾಗತಕ್ಕದ್ದು ಎಂಬ ಆದೇಶವನ್ನು ಕೋರಿದ್ದಳು. ಈ ನಿಟ್ಟಿನಲ್ಲಿ ...ರ್ವೋಚ್ಚ ನ್ಯಾಯಾಲಯದ ಆದೇಶವು ಸುಸ್ಪಷ್ಟವಾಗಿದೆ. ಬೇರೆ ಧರ್ಮಕ್ಕೆ ...ಂತರಗೊಂಡಾಗ ಆ ವ್ಯಕ್ತಿಯ ಮೊದಲ ವಿವಾಹವು ರದ್ದಾಗುವುದಿಲ್ಲ ...ೂ ಮತಾಂತರದ ನಂತರದ ಎರಡನೆಯ ಮದುವೆಯು ...ರ್ಣತವಾಗುವುದಿಲ್ಲ. ಅದಕ್ಕೆ ಕಾನೂನಿನ ಯಾವ ಮಾನ್ಯತೆಯೂ ...ಕುವುದಿಲ್ಲ.

...ಾಷ್ಟೊಂದು ಸ್ಪಷ್ಟವಾದ ಕಾನೂನಿನ ಉಪಬಂಧಗಳು ಇದ್ದರೂ ಕೂಡಾ ...ನ್ನು ಕಡೆಗಣಿಸಿ, ಪತಂಗದಂತೆ ಬೆಂಕಿಯಂತಹ ಪ್ರೇಮದೊಂದಿಗೆ ... ಆಡಿದಾಗ ಉರಿದು ಬೀಳುವವು ಹೆಣ್ಣುಗಳೇ ಯಾಕೆ? ಪುರುಷರು ... ಹಿಂದಿನ ಸಾಮಾಜಿಕ ಮನ್ನಣೆ ಮತ್ತು ಕುಟುಂಬವನ್ನು ಅನಾಯಾಸವಾಗಿ ...ಮುಕೊಂಡು ಎಲ್ಲಾ ವೈಯಕ್ತಿಕ ಕಾನೂನುಗಳ ದುರ್ಬಳಕೆಯನ್ನು ...ಡಿದರೂ ರಕ್ಷಣೆಯನ್ನು ಪಡೆದುಕೊಳ್ಳುವಾಗ ಮಹಿಳೆಯರು ಯಾವ ...ರ್ಮ ಮತ್ತು ಕಾನೂನಿನ ರಕ್ಷಣೆಯೂ ದೊರಕದೆ ಯಾಕೆ ...ತ್ತಸಾಗುತ್ತಾರೆ? ಎಲ್ಲಕ್ಕಿಂತ ಹೆಚ್ಚಾಗಿ ಇನ್ನೊಬ್ಬಳ ಪತಿಯನ್ನು ಕಂಡೂ ...ೂ ಎಗರಿಸುವ ಹೆಣ್ಣುಗಳಿಗೆ ಏನೆಂದು ಕರೆಯಬೇಕು... ಈ ಎಲ್ಲಾ ...ಗಳು ನಮ್ಮ ಮುಂದಿನ ಸಂಕೀರ್ಣ ಸಮಾಜದ ಗೋಜಲು ಸಂಬಂಧಗಳ ...ರ್ಣಯವನ್ನು ಮಾಡಲು ಸಮರ್ಥವಾದಲ್ಲಿ ಯಾವುದಾದರೂ ...ಾರವನ್ನು ಕಂಡುಕೊಳ್ಳಲು ಸಾಧ್ಯ. ಆದರೆ, ಪ್ರಕೃತಿಯನ್ನು ಮತ್ತು ...ಬಂಧಗಳನ್ನು ಹಾಗೂ ಕಾನೂನುಗಳನ್ನು ತಮ್ಮ ಮನಸೋಇಚ್ಛೆ ದುರ್ಬಳಕೆ ...ಡಿಕೊಂಡರೂ ಯಾರ ಅಂಕೆಗೂ ಸಿಲುಕದೆ, ತಮ್ಮದೇ ಕಾನೂನುಗಳನ್ನು ...ಲ್ಲಿ ತಮ್ಮದೇ ಅಧಿಕಾರ ಕೇಂದ್ರಿತವಾದ ಮೌಲ್ಯಗಳನ್ನು ಪ್ರತಿಪಾದಿಸುತ್ತಾ, ... ಪ್ರಯೋಜನಗಳನ್ನು ಪಡೆದುಕೊಳ್ಳುವ ವಿಚಿತ್ರ ಪುರುಷ ಜಗತ್ತಿನ ...ಯಮಗಳನ್ನು ನಾವು ಅಂಚಿನಿಂದ ಮಾತ್ರ ಪ್ರಶ್ನಿಸುತ್ತಿದ್ದೇವೆ.

● ಬಾನು ಮುಷ್ತಾಕ್

ರಾಮನಗರದ ಭಾಷಣ ಚೆನ್ನಾಗಿತ್ತು ರೇಷ್ಮೆ!

ಮಂಗಳೂರಿನಲ್ಲಿ ಬಿಜೆಪಿಗಳ ಹಾದರಕ್ಕೆ ಹುಟ್ಟಿದ ಮಂಗಗಳು ಹೆಣ್ಣುಮಕ್ಕಳ ಮೇಲೆ ದಾಳಿ ಮಾಡಿ, ಮೈಸವರಿ, ಪೀಡನೆಯ ಸುಖ ಅನುಭವಿಸಿ ಪರಾರಿಯಾಗುವ ಮುನ್ನ ಚಿನ್ನದ ಸರ, ಮೊಬೈಲ್ ಮತ್ತು ಹಣವನ್ನು ಕಿತ್ತುಕೊಂಡು ಪರಾರಿಯಾದವಲ್ಲಾ, ಸದರಿ ಘಟನೆಗೆ ಸಂಬಂಧಿಸಿದಂತೆ ಈ ಮಂಗಗಳಿಗೆ ಜನ್ಮ ಕೊಟ್ಟವರೆಲ್ಲಾ ಒಕ್ಕೊರಲಿಂದ "ದಾಳಿ ಮಾಡಿದ್ದು ತಪ್ಪು, ಆದರೆ ಹೋಂ ಸ್ಟೇಗಳಲ್ಲಿ ನಡೆಯಬಾರದ್ದೆಲ್ಲಾ ನಡೆಯುತ್ತೆ, ಅದು ಸಂಸ್ಕೃತಿ ರಕ್ಷಕರನ್ನು ಕೆರಳಿಸುತ್ತೆ, ಆಗ ಸುಮ್ಮನೆ ಕೂರಲಾಗುವುದಿಲ್ಲ" ಎಂದು ಒಂದೇ ತರ ಮಾತನಾಡಿವೆಯಲ್ಲಾ, ಹೀಗೆ ದಾಳಿಯ ಜಾಗಕ್ಕೆ ಸಂಸ್ಕೃತಿ ತಂದು ಮಡಗಿ, ಯಾವುದು ಸಂಸ್ಕೃತಿ ಎಂಬ ಪ್ರಶ್ನೆ ಎದುರಿಸಲಾಗದ ಮಂಗಗಳ ಮಾತಾಪಿತೃಗಳು ಇದ್ದಕ್ಕಿದ್ದಂತೆ ಉಡುಪಿ ಕಡೆಯಲ್ಲಿ ತ್ರಿಶೂಲವೊಂದನ್ನು ನೆಟ್ಟು "ಇದೀಗ ತಾನೆ ಉದ್ಭವಿಸಿದೆ. ತ್ರಿಶೂಲದ ಬಿಸಿ ಇನ್ನೂ ಆರಿಲ್ಲ ನೋಡಿ" ಎಂದು ಮೂಢಭಕ್ತರನ್ನು ಕೂಗತೊಡಗಿವೆಯಂತಲ್ಲಾ, ಅತ್ತ ಸಂಸ್ಕೃತಿ ಹೆಸರಲ್ಲಿ ದಾಳಿ, ಇತ್ತ ಭಜರಂಗಿಗಳ ಆಯುಧವಾದ ತ್ರಿಶೂಲೋದ್ಭವ, ಹೀಗೆ ಏಕಕಾಲಕ್ಕೆ ತಮ್ಮ ವಿಕೃತ ಅಜೆಂಡಾಗಳ ಝಂಡಾ ಹಿಡಿದು ಹೊರಟವರ ಎದುರು ಕಾಂಗೈ-ದಳ ಹೋಗಲಿ, ನಾಡಿನ ಪ್ರಜ್ಞಾವಂತರೂ ಪ್ರಜ್ಞೆ ಕಳೆದುಕೊಂಡು ಕೂತಿದ್ದಾರಲ್ಲಾ, ಥೂತ್ತೇರಿ!

*****

ಜೈಲಿನಲ್ಲಿರುವ ಜನಾರ್ದನ ರೆಡ್ಡಿಯನ್ನು ಬಿಡಿಸಿಕೊಳ್ಳಲು ಲಂಚ ಕೊಟ್ಟು ಸಿಕ್ಕಿಬಿದ್ದಿರುವ ಸೋಮಶೇಖರ ರೆಡ್ಡಿ ಎಂಬ ಕಳ್ಳಬೆಕ್ಕು, ಕೆಎಂಎಫ್ ಹಾಲು ಕುಡಿಯಲು ಯಾವ ಅಡ್ಡಿಯೂ ಇಲ್ಲ ಎಂದು ಬಿಜೆಪಿಯವರಿಗೆ ಬೇಡವಾದ ಪುಟ್ಟಸ್ವಾಮಿ ಎಂಬ ಆಸಾಮಿ ಹೇಳಿದೆಯಂತಲ್ಲಾ, ರಾಜಕಾರಣದ ಜಗಳದಲ್ಲಿ ಯಾವ ಲೆವೆಲ್ಲಿಗೆ ಬೇಕಾದರೂ ಇಳಿದು ಜಗಳ ಮಾಡಬಲ್ಲ ಶಕ್ತಿಯಿರುವ ಪುಟ್ಟಸ್ವಾಮಿಯನ್ನು ಎಡೂರಪ್ಪ ಹಿಡಿದು ಮೇಲೆತ್ತಿದ್ದೇ ದೇವೇಗೌಡರ ಕುಟುಂಬದ ಎದುರು ಹೋರಾಡಲೆಂಬ ಉದ್ದೇಶದಿಂದ ಎಂದು ಬಿಜೆಪಿ ಒಕ್ಕಲಿಗರು ಪಿಸುಗುಟ್ಟುತ್ತಿವೆಯಲ್ಲಾ, ಸದರಿ ಪುಟ್ಟಸ್ವಾಮಿ ಎಡೂರಪ್ಪನ ಪರವೇನು, ರೆಡ್ಡಿಗಳ ಪರವೂ ವಾದಿಸುತ್ತ ಹೋರಾಡಬಲ್ಲದು ಎಂಬ ಸುದ್ದಿ ಕೇಳಿದಕೂಡಲೇ ಲಂಕೇಶರ ಒಡನಾಡಿಯಾಗಿದ್ದ ರೇಷ್ಮೆ ನೆನಪಿಗೆ ಬಂದರಲ್ಲಾ, ಥೂತ್ತೇರಿ!!

*****

ಒಳ್ಳೆಯ ಉಪನ್ಯಾಸಕ, ಒಳ್ಳೆಯ ವಾಗ್ಮಿ, ರಾಜಕೀಯ ಮಾಹಿತಿಗಳ ಕೋಶ, ಬಾಟ್ಲಿಂಗ್ ಹಗರಣ ಬರೆದು ಜನತಾ ಸರ್ಕಾರವನ್ನೇ ಅಲ್ಲಾಡಿಸಿ ರಾಮಕೃಷ್ಣ ಹೆಗಡೆ ರಾಜೀನಾಮೆ ಕೊಡುವಂತೆ ಮಾಡಿದ್ದ ನಿಷ್ಠುರ ಪತ್ರಕರ್ತನಾಗಿದ್ದ ರವೀಂದ್ರ ರೇಷ್ಮೆಯನ್ನು ಮಾತನಾಡಿಸಬೇಕೆನಿಸಿತಲ್ಲಾ. ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಕಿರ್...... ಕಿರ್.... ಕಿರ್... ಕಿರ್...."

"ಹಲೋ ಯಾರು?"

"ನಾನು ರೇಷ್ಮೆ ಯಾಹು."

"ಏನ್ ಯಾಹು ಚೆನ್ನಾಗಿದ್ದೀರ? ಮೇಡಂ ಹ್ಯಾಗಿದಾರೆ?"

"ಮೇಡಂ ಆರಾಮಾಗ್ಯವ್ರೆ. ಶಾಕ್ ಆಗಿರದು ನಮಿಗೆ."

"ನಿಮಗ್ಯಾಕೆ ಶಾಕ್ ಆಗಿದೆ?"

"ರಾಮನಗರದ ರಾಮುಲು ಸಭೇಲಿ ನೀವು ಭಾಷಣ ಮಾಡಿದರಲ್ಲಾ, ಆ ಭಾಷಣ ಕೇಳಿ ಶಾಕ್ ಆಯ್ತು, ನಿಜವಾಗ್ಲು ಎಷ್ಟು ಚೆನ್ನಾಗಿತ್ತು ಅಂತಿರಿ ನಿಮ್ಮ ಭಾಷಣ."

"ಥ್ಯಾಂಕ್ಸ್. ಅದನ್ನ ಒಂದು ರಿಪೋರ್ಟ್ ಮಾಡಿ ಯಾಹು."

"ಮಾಡ್ತಿನಿ. ರಾಮುಲು ಬಗ್ಗೆ ಇಷ್ಟೆಲ್ಲಾ ಗೊತ್ತಿರಲಿಲ್ಲ ನನಿಗೆ."

"ನಿಜವಾಗ್ಲು ಆತ ಬಹಳ ಒಳ್ಳೆ ರಾಜಕಾರಣಿ. ಎಲ್ಲಕ್ಕಿಂತಲೂ ಮುಗ್ಧ. ನಾವು ಏನೇಳಿದ್ರು ಕೇಳ್ತನೆ. ನಾವು ಇಂತವರನ್ನ ಸೇರಿಸಿಕೊ ಅಂದ್ರೆ ಸೇರಿಸಿಕಳ್ತನೆ. ತೆಗೆದಾಕು ಅಂದ್ರೆ ತೆಗೆದಾಕ್ತನೆ. ಇಂತ ಒಬ್ಬ ವಿಶಾಲ ಮನಸಿನ ರಾಜಕಾರಣಿನೆ ನಮಗೆ ಸಿಕ್ಕಿರಲಿಲ್ಲ."

"ನಿಜ ರೇಷ್ಮೆ. ಆತನ ಮನಸ್ಸು ಬಳ್ಳಾರಿ ಗಣಿ ಗುಂಡಿಗಳಷ್ಟೇ ವಿಶಾಲವಾಗಿವೆ."

"ಅದನ್ನೆಲ್ಲಾ ರೆಡ್ಡಿಗಳು ಮಾಡಿದ್ದು."

"ರೆಡ್ಡಿಗಳು ಮಾಡಿದ್ರೂ ಸಿಂಹಪಾಲು ಇವುನಿಗೂ ಸಿಕ್ಕಿದೆಯಲ್ಲಾ. ನೀನಾಗ್ಲಿ, ನಿನ್ನ ಗೆಳೆಯನಾಗ್ಲಿ ಇವತ್ತು ತಿಂತಾಯಿರೂ ಅನ್ನ ಗಣಿ ಧೂಳಿಂದು ಅಂತ ಜನಗಳು ಆಡಿಕೊಳ್ತಾ ಅವ್ರೆ."

"ನನಗೆ ಕೈತುಂಬ ಪೆನ್ಷನ್ ಬರುತ್ತೆ, ನನ್ನ ಹೆಂಡತಿ ಡಾಕ್ಟರು."


"ಆಂಗಿದ್ರೆ ಮರಿಯಾದಿಯಾಗಿ ಇರಬವುದಿತ್ತಲವಾ? ಇವತ್ತು ಹೋದಲ್ಲಿ ಬಂದಲ್ಲಿ ನಾವು ಉತ್ತರ ಕೊಡಬೇಕಲ್ಲ ಹೇಳಿ."

"ಉತ್ತರ ಸ್ಪಷ್ಟವಾಗಿದೆ. ಇವತ್ತು ಕರ್ನಾಟಕದಲ್ಲಿ ಒಂದು ಕಡೆ ಕುಟುಂಬ ರಾಜಕಾರಣ ಇದೆ. ಇನ್ನೊಂದು ಕಡೆ ಹೈಕಮಾಂಡಿನ ಗುಲಾಮಿ ರಾಜಕಾರಣ ಇದೆ. ಅವ್ರುರನ್ನೆಲ್ಲಾ ನೋಡಾಯ್ತು."

"ಅವ್ರುರಿಂದ ಏನುಗಿಟ್ಟಲಿಲ್ಲ ಅಂತ್ಲ?"

"ಹಾಗಲ್ಲ, ನಮಗೂ ರಾಜಕಾರಣದ ಆಕಾಂಕ್ಷೆ ಇದೆ. ಅದ್ಕೆ ರಾಮುಲು ಜೊತೆ ಹೋಗಿದ್ದೀವಿ."

ಥೂತ್ತೇರಿ ಯಾಹೂ



"ನೀವು ರಾಜಕಾರಣನೆ ಮಾಡದಿದ್ರೆ ದೇವನೂರು ಮಹಾದೇವ ಅಧ್ಯಕ್ಷ ಆಗಿರೊ ಪಾರ್ಟಿಯಿತ್ತು. ಅದು ಬೇಡ ಅಂದ್ರೆ ಲಂಕೇಶರ ಪ್ರಗತಿ ರಂಗಕ್ಕೆ ಜೀವಕೊಡಬವುದಿತ್ತು. ಅದರಿಂದ ನೀವು ಪವರ್‌ಗೆ ಬರದೇಯಿದ್ರೂ ಒಳ್ಳೆ ರಾಜಕೀಯ ಪ್ರಜ್ಞೆನ ಹುಟ್ಟಾಕಬವುದಿತ್ತಲವೆ?"

"ಇವತ್ತು ಪೊಲಟಿಕಲ್ ಪಾರ್ಟಿ ಸ್ಥಾಪನೆ ಮಾಡಿ ಮುನ್ನಡೆಸೋದಕ್ಕೆ ಒಂದು ಆರ್ಥಿಕ ಆಯಾಮನೂ ಮುಖ್ಯ ಯಾಹೂ."

"ಅದ ನಾನು ಒಪ್ಪಗಳತಿನಿ. ಆ ಅರ್ಥಮೂಲನೂ ಮುಖ್ಯ ಅಲವೆ. ಆ ರಾಮುಲು ಅನ್ನೋ ರೌಡಿ ಮೇಲೆ ಏಳೆಂಟು ಕೇಸವೆ. ಅವನಿಗೆ ಸಂವಿಧಾನ ಅಂದ್ರೇನು ಗೊತ್ತಿಲ್ಲ. ನೀವೆಲ್ಲಾ ಲಂಕೇಶ್, ರಾಮದಾಸ್ ಜೊತೆ ಕುಂತಗೊಂಡ ಮಾತನಾಡುತಿದ್ದ ಮಾತು ಅವುನಿಗೆ ಅರ್ಥವಾಗಲ್ಲ. ಪ್ರತಿಯೊಂದನ್ನು ದುಡ್ಡು ಕೊಟ್ಟೇ ಕೊಳ್ಳೊ ಅಂತ ಮನುಷ್ಯನ ಜೊತೆ ಹೋಗಿದ್ದೀರಲ್ಲಾ, ನಿಮಗೇನಾಗಿದೆ ರೇಷ್ಮೆ?"

"ನೋಡಿ, ನನಗೂ ರಾಜಕಾರಣದ ಆಕಾಂಕ್ಷೆ ಇದೆ. ಆ ದ್ವಾರಕನಾಥ್ ಕುಮಾರಸ್ವಾಮಿನ ಹೊಗಳಿ ಹೊಗಳಿ ಶಾಶ್ವತ ಹಿಂದುಳಿದ ಆಯೋಗದ ಅಧ್ಯಕ್ಷ ಆಗಿದ್ದ. ನಾನು ಏನೂ ಆಗದೆ ಸಮಯ ಹಾಳಾಯ್ತು. ಇನ್ನು ಎಷ್ಟು ದಿವಸ ಅಂತ ಹೀಗೇ ಇರೋದು. ನಮ್ಮ ಬರವಣಿಗೆ, ಹೋರಾಟದ ಪ್ರತಿಫಲವಾಗಿ ನಾವು ಏನೂ ಪಡೆಯೋದು ಬೇಡವಾ?"

"ಸರಿ ರೇಷ್ಮೆ, ನೀವೇ ಆಗಾಗ್ಗೆ ಬರಿತಿದ್ದ ಗೋಪಾಲಗೌಡ್ರು ಬರಿ ಶಾಸಕರಾಗೇ ಇದ್ರು. ಲೋಹಿಯಾ ಬರಿ ಎಂ.ಪಿ.ಯಾಗಿದ್ರು. ಈ ತರ ಒಂದು ದೊಡ್ಡ ಪಟ್ಟಿನೆ ಇದೆ. ನೀವು ರಾಜಕಾರಣ ಮಾಡೋದೇ ಆಗಿದ್ರೆ ಆಗ ಲಂಕೇಶ್‌ರನ್ನು ಬಿಟ್ಟು ಹೆಗಡೆ ಜೊತೆ ಹೋಗಬೇಕಾಗಿತ್ತು. ಆತ ಕರ್ನಾಟಕ ಕಂಡ ಒಬ್ಬ ಸಜ್ಜನ, ಧೀಮಂತ ರಾಜಕಾರಣಿಯಾಗಿದ್ದ ಅದು ಬಿಟ್ಟು ಜೈಲಲ್ಲಿರೊ ನಾಯಕನ ಬಿಡುಗಡೆಗೆ ಜಡಜಿಗೆ ಲಂಚ ಕೊಟ್ಟಿರೊ ರಾಮುಲು ಜೊತೆ ಹೋಗಿ, ರಾಮನಗರದಲ್ಲಿ ನಿಂತಗಂಡು ಇದು ರೇಷ್ಮೆನಾಡು, ನನ್ನ ಹೆಸರು ರೇಷ್ಮೆ ಅಂತ ಭಾಷಣ ಮಾಡ್ತಿರಲ್ಲಾ, ನಿಮಗೇನು ತಲೆ ಕೆಟ್ಟಿದೆಯೋ? ಬವಳ ಬಂದಿದೆಯೋ? ಅಥವಾ ಹಣಕಾಸಿನ ಹುಚ್ಚುಹಿಡಿದಿದೆಯೋ ಗೊತ್ತಾಯ್ತಯಿಲ್ಲಾ."

"ಈ ತರ ಮಾತಾಡಿದ್ರೆ ನಾನು ಸರಿಯಾಗಿ ಉತ್ತರ ಕೊಡಬೇಕಾಗುತ್ತೆ."

"ಸಾರಿ ರೇಷ್ಮೆ, ನಿನ್ನ ವಿಷಯದಲ್ಲಿ ನನ್ನ ಬಿ.ಪಿ. ಏರುಪೇರಾಯ್ತಾ ಅದೆ. ಆ ರಾಮುಲು ಹೊಗಳಿ, ನಂತರ ಯರಡು ಸಾವ್ರುರುಪಾಯಿ ಕೊಡಿ ಅಂತ ಕೇಳಬೇಡಿ. ಯಾಕಂದ್ರೆ ಇಂದ್ರಜಿತನ ಸಿನಿಮಾ ಹೊಗಳಿ ಕೂಡಲೆ ಎರಡು ಸಾವಿರ ರೂಪಾಯಿ ಕೊಡು ಎಂದು ಕೇಳಿದ್ರಿ. ನೆನಪಿದೆಯಾ?"

'ಥೂತ್ತೇರಿ!!!'

ಹೆಚ್ಚುತ್ತಿರುವ ಕಗ್ಗತ್ತಲ...ಓಡಿಸಬಲ್ಲದೇ?

▶2

ಇದಲ್ಲದೇ ಕಳೆದ 30-40 ವರ್ಷಗಳಲ್ಲಿ ಭೂಸುಧಾರಣೆ, ಹಸಿರು ಕ್ರಾಂತಿ, ಪಂಚಾಯತ್ ರಾಜ್ ವ್ಯವಸ್ಥೆಗಳು ಭಾರತದ ಗ್ರಾಮೀಣ ಪ್ರದೇಶದಲ್ಲಿ ಹೊಸ ಜಾತಿ ಸಮೀಕರಣವನ್ನು ಹುಟ್ಟುಹಾಕಿವೆ. 40 ವರ್ಷಗಳ ಹಿಂದೆ ಶೂದ್ರ-ದಲಿತ ಪದಗಳು ಒಂದೇ ಅರ್ಥವನ್ನು ಕೊಡುತ್ತಿದ್ದವು. ಆದರೆ ಮೇಲೆ ಹೇಳಿದ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳು ಗ್ರಾಮೀಣ ಪ್ರದೇಶದಲ್ಲಿ ಭೂಹಿಡುವಳಿ ಹೊಂದಿದ್ದ ಶೂದ್ರ ವರ್ಗದ ಒಂದು ಸ್ತರವನ್ನು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬಲಿಷ್ಠಗೊಳಿಸಿದ್ದರೆ ಭೂಹೀನ ದಲಿತ ಸಮುದಾಯವನ್ನು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಮತ್ತಷ್ಟು ನಿತ್ರಾಣಗೊಳಿಸಿದೆ. ಆದರೆ ಗ್ರಾಮೀಣ ಭಾರತದ ಈ ಹೊಸ ಶೋಷಕರೂ ಸಹ ಹಿಂದೆ ಬ್ರಾಹ್ಮಣವಾದದ ಬಲಿಪಶುಗಳೇ ಆಗಿದ್ದರೂ ಈಗ ದಲಿತರ ಮೇಲೆ ತಮ್ಮ ಸಾಮಾಜಿಕ ಹಿಡಿತ ಮತ್ತು ದಮನವನ್ನು ಮುಂದುವರೆಸಿಕೊಂಡು ಹೋಗಲು ಆಶ್ರಯಿಸಿದ್ದು ಬ್ರಾಹ್ಮಣವಾದವನ್ನೇ. ಹೀಗಾಗಿಯೇ 1967ರ ನಂತರದಲ್ಲಿ ದಲಿತರ ಮೇಲೆ ನಡೆದ ಎಲ್ಲಾ ದೌರ್ಜನ್ಯಗಳ ಹಿಂದೆ ಇರುವುದು ಈ ಬ್ರಾಹ್ಮಣೀಕರಣಗೊಂಡ ಹೊಸ ಭೂಮಾಲೀಕ ಶೂದ್ರ ವರ್ಗವೇ. ಹೀಗಾಗಿಯೇ ಈ ವರ್ಗ ಬಹು ಸುಲಭವಾಗಿ ಹಿಂದೂತ್ವವಾದಿಗಳ ಜೊತೆ ಹೊಸ ರಾಜಕೀಯ ಸಮೀಕರಣವನ್ನು ಏರ್ಪಡಿಸಿಕೊಂಡು ಅದರ ಸಾಮಾಜಿಕ ತಳಹದಿಯನ್ನು ವಿಸ್ತರಿಸುತ್ತಿದೆ.


ಹಾಗೆಯೇ ಕಳೆದ 30 ವರ್ಷಗಳಲ್ಲಿ ದಲಿತ ಸಮುದಾಯದಲ್ಲೂ ಒಂದು ಸ್ವಾರ್ಥನಿಷ್ಠ ದಲಿತ ಮಧ್ಯಮವರ್ಗ ಹುಟ್ಟಿಕೊಂಡಿದೆ. ಇದೂ ಕೂಡಾ ಸಾಂಸ್ಕೃತಿಕವಾಗಿ ಬ್ರಾಹ್ಮಣೀಕರಣಗೊಂಡಿದ್ದು ದಲಿತ ಸಮುದಾಯ ತನ್ನ ವಿಮೋಚನೆಗೆ ಈ ವರ್ಗದಿಂದ ಯಾವುದೇ ನೈತಿಕ ಅಥವಾ ರಾಜಕೀಯ ಸಂಪನ್ಮೂಲವನ್ನು ನಿರೀಕ್ಷಿಸುವುದು ಕಷ್ಟವಾಗುತ್ತಿದೆ. ಈ ಎಲ್ಲ ಕಾರಣಗಳಿಂದಲೂ ಪ್ರಗತಿಪರ ಚಳವಳಿಗಳು ಕಳೆಗುಂದಿವೆ.

ಹೀಗೆ ಎಲ್ಲಾ ರೀತಿಯಿಂದಲೂ ಒಂದು ಬಗೆಯ ಹೊಸ ಹುಟ್ಟನ್ನು ನಿರೀಕ್ಷಿಸುವ ಸಂಕ್ರಮಣ ಕಾಲಘಟ್ಟದಲ್ಲಿ ನಾವಿದ್ದೇವೆ. ಇದು ಹಳೆಯ ಪ್ರಶ್ನೆಗಳ ಜೊತೆಗೆ ಕೆಲವು ಹೊಸ ಸವಾಲುಗಳನ್ನು ನಮ್ಮ ಮುಂದಿಟ್ಟಿವೆ. ಈಗಿರುವ ಮೀಸಲಾತಿಯನ್ನು ಉಳಿಸಿಕೊಳ್ಳುತ್ತಲೇ ಖಾಸಗೀಕರಣದ ಈ ಯುಗದಲ್ಲಿ ಕೇವಲ ಮೀಸಲಾತಿಯೊಂದರ ಮೇಲೆ ಆಧಾರವಿಟ್ಟ ರಾಜಕಾರಣದ ಮಿತಿಯನ್ನು ಈಗಲಾದರೂ ಅರ್ಥ ಮಾಡಿಕೊಳ್ಳಬೇಕಿದೆ.



ರಿಯಲ್ ಎಸ್ಟೇಟ್ ಗೃಹಮಂತ್ರಿ

ಪ್ರಸಂಗ-1; ಇತ್ತೀಚಿಗೆ ಗಾರ್ಮೆಂಟ್ ಕೆಲಸಕ್ಕೆಂದು ಬೆಂಗಳೂರಿಗೆ ಬಂದಿದ್ದ ಮಂಡ್ಯದ ಯುವತಿಯೊಬ್ಬಳನ್ನು ಪುಂಡರ ಗುಂಪೊಂದು ಹಾಡುಹಗಲೇ ಅತ್ಯಾಚಾರಕ್ಕೆ ಯತ್ನಿಸಿ ರೈಲಿನಿಂದ ದಬ್ಬಿ ಕೊಲೆಗೆ ಯತ್ನಿಸಿತು. ಬದುಕುಳಿದ ಆ ನತದೃಷ್ಟೆಯ ಮೇಲಾದ ದೌರ್ಜನ್ಯದ ವಿರುದ್ಧ ಪ್ರಜ್ಞಾವಂತರು ಬೀದಿಗಿಳಿದರು. ಶ್ರೀರಾಮಸೇನೆ, ಭಜರಂಗ ದಳದ ಯೋಧರಂತೂ ಪೊಲೀಸರ ಪಹರೆಯನ್ನೇ ಬೇಧಿಸಿ ದೌರ್ಜನ್ಯವೆಸಗಿದ ಪುಂಡರನ್ನು ಹಿಡಿದು ಬಡಿದರು. ಹೆಣ್ಣು ಮಗಳೊಬ್ಬಳಿಗೆ ಹಾಡುಹಗಲೇ ಅದೂ ಸಹಸ್ರಾರು ಜನ ಓಡಾಡುವ ರೈಲಿನಲ್ಲೇ ರಕ್ಷಣೆಯಿಲ್ಲ ಎಂದ ಮೇಲೆ ಯಾವುದೇ ಜನಪರ ಸರ್ಕಾರವೊಂದು ಇದರ ವಿರುದ್ಧ ಹೇಗೆ ವರ್ತಿಸಬೇಕು?



ಪ್ರಸಂಗ-2; ಕರ್ನಾಟಕ ಕಂಡ ಅತ್ಯಂತ ಪ್ರಾಮಾಣಿಕ ಅಧಿಕಾರಿ ಮಹಾಂತೇಶ್‌ರನ್ನು ದುಷ್ಕರ್ಮಿಗಳು ನಡುರಸ್ತೆಯಲ್ಲೇ ಇರಿದು ಕೊಲ್ಲುತ್ತಾರೆ. ಅದರ ತನಿಖೆಗೆ ನಿಂತ ಪೊಲೀಸ್ ಅಧಿಕಾರಿಯೊಬ್ಬರು ಮಹಾಂತೇಶ್ ಮೊಬೈಲಿನಲ್ಲಿ ಅಶ್ಲೀಲ ಚಿತ್ರಗಳಿದ್ದವೆಂದೂ, ಯಾರೋ ಹೆಂಗಸೊಬ್ಬಳಿಗೆ ಮಹಾಂತೇಶ್ ಜೊತೆ ವೈಷಮ್ಯವಿತ್ತೆಂದೂ ಪುಕಾರೆಬ್ಬಿಸುತ್ತಾರೆ. ಕೊನೆಗೂ ಮಹಾಂತೇಶ್ ತಮ್ಮ ಪ್ರಾಮಾಣಿಕತೆಯ ಕಾರಣಕ್ಕೇ ಕೊಲೆಯಾದರೆಂಬ ಸತ್ಯ ಬಯಲಾದ ಮೇಲೆ ಅದಕ್ಕೆ ಗೃಹಮಂತ್ರಿಯೊಬ್ಬ ಏನು ಕ್ರಮ ಜರುಗಿಸಬೇಕು.

ಪ್ರಸಂಗ-3; ಮಂಗಳೂರಿನಲ್ಲಿ ಪಾರ್ಟಿಯೊಂದಕ್ಕೆ ನುಗ್ಗಿದ ಹಿಂದೂ ಜಾಗರಣಾ ವೇದಿಕೆಯ ವಿಕೃತಕಾಮಿಗಳು ಅಲ್ಲಿದ್ದ ಯುವತಿಯರ ಮೇಲೆ ನಡೆಸಿದ ದೌರ್ಜನ್ಯದ ವಿರುದ್ಧ ಯಾವುದೇ ನಾಗರಿಕ ಸರ್ಕಾರವೊಂದು ಎಂಥಾ ದಂಡ ಪ್ರಯೋಗಿಸಬೇಕು?



ಈ ಮೂರು ಪ್ರಸಂಗಗಳು ಬೊಟ್ಟು ಮಾಡಿ ತೋರಿಸುವುದು ಗೃಹ ಮಂತ್ರಿ ಅರ್ಥಾತ್ ಉಪಮುಖ್ಯಮಂತ್ರಿ ಅಶೋಕ್‌ರನ್ನು. ಕಳೆದೆರಡು ವರ್ಷಗಳಿಂದ ಪೊಲೀಸ್ ಖಾತೆಯ ಜೊತೆ ಸಾರಿಗೆ ಇಲಾಖೆಯ ಹೊಣೆಯನ್ನೂ ಹೊತ್ತವರು ಆರ್. ಅಶೋಕ್. ಅತ್ತ ಯಡ್ಡಿಯ ಹಂಗು ಇತ್ತ ಅನಂತ್ ಜೊತೆಗಿನ ಮುಲಾಜು, ಆರೆಸ್ಸೆಸ್ ನೆಂಟಸ್ತಿಕೆ ಮತ್ತು ಹೈಕಮಾಂಡ್ ಆಶೀರ್ವಾದ ಎಲ್ಲವನ್ನೂ ಒಟ್ಟೊಟ್ಟಿಗೆ ನಿಭಾಯಿಸಿ 'ಅಂದರಿಕೆ ಮಂಚಿವಾಡು' ಮುಖವಾಡ ಧರಿಸಿದ ಅಶೋಕ್ ಅಧಿಪತ್ಯದಲ್ಲಿ ಗೃಹ ಇಲಾಖೆ ಯಾವ ಪರಿ ಎಕ್ಕುಟ್ಟಿದೆ ಎಂಬುದಕ್ಕೆ ಮೇಲಿನ ಪ್ರಸಂಗಗಳೇ ಸಾಕು.

ಅಶೋಕ್ ಈ ಹಿಂದೆ ಮಂಡ್ಯ ಜಿಲ್ಲೆಗೆ ಉಸ್ತುವಾರಿ ಮಂತ್ರಿಯಾಗಿದ್ದವರು. ಪ್ರತಿನಿತ್ಯ ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರದಿಂದ ಬೆಂಗಳೂರಿನ ಗಾರ್ಮೆಂಟ್ ಫ್ಯಾಕ್ಟರಿಗಳಿಗೆಂದು ಬೆಳಗಿನ ರೈಲುಗಳಲ್ಲಿ ಪ್ರಯಾಣಿಸುವ ಹೆಣ್ಣುಮಕ್ಕಳ ಒಟ್ಟು ಸಂಖ್ಯೆ 20 ಸಾವಿರಕ್ಕೂ ಅಧಿಕ. ಬಹುಪಾಲು ಒಕ್ಕಲಿಗ ಹೆಣ್ಣುಮಕ್ಕಳೆ. ಹೀಗೆ ಹೊಟ್ಟೆಪಾಡಿಗೆಂದು ರೈಲಿನಲ್ಲಿ ಬೆಂಗಳೂರಿಗೆ ಬಂದು ಸಂಜೆ ವಾಪಸ್ಸಾಗುವ ಸಾವಿರಾರು ಹೆಣ್ಣುಮಕ್ಕಳು ಪ್ರತಿನಿತ್ಯ ಹೇಗೆ ಪುಂಡುಪೋಕರಿಗಳ ಕೈಯಲ್ಲಿ ಸಿಲುಕಿ ನರಳುತ್ತಿದ್ದಾರೆಂಬುದಕ್ಕೆ ಆ ಯುವತಿಯನ್ನು ರೈಲಿಂದ ತಳ್ಳಿದ ಈ ಪ್ರಕರಣವೊಂದೇ ಸಾಕು. ಇದಕ್ಕೆ ಮೀಡಿಯಾಗಳು ಕೊಟ್ಟ ಪ್ರಚಾರ, ಜನ ಸ್ಪಂದಿಸಿದ ರೀತಿಯನ್ನು ಕಂಡೇ ಗೃಹಮಂತ್ರಿ ಅಶೋಕ್ ಈ ಬಗ್ಗೆ ವಿಶೇಷ ಮುತುವರ್ಜಿ ವಹಿಸುತ್ತಾರೆಂದೇ ಜನ ಭಾವಿಸಿದ್ದರು. ಯಾರೇ ಸಂವೇದನಾಶೀಲ ಗೃಹಮಂತ್ರಿಯೊಬ್ಬ ಮೊದಲು ನೊಂದ ಯುವತಿಯನ್ನು ಕಂಡು ಸಾಂತ್ವನ ಹೇಳುತ್ತಿದ್ದರು. ಪ್ರತಿನಿತ್ಯ ರೈಲು ನಿಲ್ದಾಣಕ್ಕೆ ಬರುವ ಹೆಣ್ಣುಮಕ್ಕಳಿಗೆ ಧೈರ್ಯ ತುಂಬುತ್ತಿದ್ದರು. ಆಯಾ ರೈಲುನಿಲ್ದಾಣಗಳಿಗೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಸಭೆ ಕರೆದು ಹೆಣ್ಣುಮಕ್ಕಳ ರಕ್ಷಣೆ ಕುರಿತು ಕಾರ್ಯತಂತ್ರ ರೂಪಿಸುತ್ತಿದ್ದರು.

ಆದರೆ ಅಶೋಕ್ ಈ ಬಗ್ಗೆ ಕಾಟಾಚಾರಕ್ಕೂ ಬಾಯಿಬಿಡಲಿಲ್ಲ, ಹೋಗಲಿ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಾದರೂ ಮುಂಜಾಗ್ರತೆ ಬಗ್ಗೆ ತಲೆಕೆಡಿಸಿಕೊಂಡರೆ?

ಪ್ರಕರಣದ ಆರೋಪಿಗಳನ್ನು ಕಷ್ಟಪಟ್ಟು ಹಿಡಿದದ್ದು ಬಿಟ್ಟರೆ ಇಂಥದೊಂದು ಸೂಕ್ಷ್ಮಸಂಗತಿಯ ವಿವಿಧ ಆಯಾಮಗಳನ್ನು ಸರ್ಕಾರವಾಗಲಿ, ಗೃಹಮಂತ್ರಿಯಾಗಲಿ ಪರಿಶೀಲಿಸಲೇ ಇಲ್ಲ. ಪ್ರತಿನಿತ್ಯ ಮಂಡ್ಯ, ಮದ್ದೂರು, ಚನ್ನಪಟ್ಟಣ ಭಾಗದಿಂದ ಬೆಂಗಳೂರಿಗೆ ಬರುವ ಹೆಣ್ಣುಮಕ್ಕಳದ್ದು ಇವತ್ತಿಗೂ ಅದೇ ಪಾಡು. ಒಂದೋ ಪುಂಡರಿಗೆ ಬಲಿಯಾಗಬೇಕು ಅಥವಾ ಕಾಮುಕರಿಗೆ ಅಂಜಿ ಹೊಟ್ಟೆಪಾಡನ್ನೇ ಬಿಡಬೇಕು!

ನಿಷ್ಠಾವಂತ ಅಧಿಕಾರಿ ಮಹಾಂತೇಶ್ ಕೊಲೆಯಾದಾಗ ಮುಖ್ಯಮಂತ್ರಿ ಸದಾನಂದ ಗೌಡ ಮತ್ತು ಸಂಸದೀಯ ಖಾತೆ ಸಚಿವ ಸುರೇಶ್ ಕುಮಾರ್ ಖುದ್ದಾಗಿ ಬಂದು ರೋದಿಸುತ್ತಿದ್ದ ಸಂಬಂಧಿಗಳನ್ನು ಸಂತೈಸಬೇಕಾಯ್ತು. ಹೊಣೆಹೊರಬೇಕಿದ್ದ ಪೊಲೀಸು ಮಂತ್ರಿ ಪತ್ತೆಯೇ ಇಲ್ಲ. ಕನಿಷ್ಠ ಮಹಾಂತೇಶ್‌ರ ಮೊಬೈಲಿಗೆ ಅಶ್ಲೀಲ ಚಿತ್ರಗಳನ್ನು ಫೀಡ್ ಮಾಡಿ ಅಪಪ್ರಚಾರ ಮಾಡಿದ ಪೊಲೀಸ್ ಅಧಿಕಾರಿಯ ವಿರುದ್ಧವೂ ಚಕಾರವೆತ್ತಲಿಲ್ಲ. ಏಕೆಂದರೆ ಆ ಅಧಿಕಾರಿ ಅಶೋಕ್ ಸಾಹೇಬರ ಜಾತಿಬಂಧುವಾಗಿದ್ದ



ಭಿನ್ನಮಂಗಲ ಕೃಷ್ಣಪ್ಪ



ಇನ್ನು ಮಂಗಳೂರಿನ ಪದೀಲು ಅತ್ಯಾಚಾರವಂತೂ ಬಿಜೆಪಿ ಸರ್ಕಾರದ ಆಧಾರಸ್ತಂಭಗಳ ಪೈಕಿ ಒಬ್ಬನಾದ ಕಲ್ಲಡ್ಕ ಭಟ್ಟನ ಮಾನಸ ಪುತ್ರರೇ ಎಸಗಿದ ಘೋರಕೃತ್ಯವಾಗಿತ್ತು, ಹೆಸರಿಗೆ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರೆಂಬುದನ್ನು ಬಿಟ್ಟರೆ ವಾಸ್ತವದಲ್ಲವರು ಬಿಜೆಪಿ ಕಾರ್ಯಕರ್ತರೆ. ಇಂಥ ಅಮಾನುಷ ಕೃತ್ಯದ ವಿರುದ್ಧ ಗೃಹಮಂತ್ರಿ ಅಶೋಕ್ ಪ್ರತಿಕ್ರಿಯಿಸಿದ್ದಕ್ಕೂ ಅಪ್ರಬುದ್ಧ ಬಾಲಕನೊಬ್ಬನ ವರ್ತನೆಗೂ ಏನು ವ್ಯತ್ಯಾಸವಿತ್ತು

ಮೊದಲು 'ಗಂಡಸರಾಗಿ ಹುಟ್ಟಿ ಇಂಥ ಕೆಲ ಮಾಡುವುದೇ ಹೇದಿತನ' ಎಂದು ವಿಕೃತ ಡೈಲಾಗ ಹೊಡೆದರು. ಆನಂತರ ಇದನ್ನು ಚಿತ್ರೀಕರಿಸಿದ ಟೀ ವರದಿಗಾರನ ಮೇಲೆ ಹರಿಹಾಯ್ದರು. ತದನಂತರ ರೆಸಾರ್ಟ ಕ್ಲಬ್ಬು, ಪಬ್‌ಗಳ ಮೇಲೆ ಕಿಡಿಕಾರಿದರು. ಕೃತ್ಯದ ಹಿಂದಿ ಹಿಂದೂ ಜಾಗರಣ ವೇದಿಕೆಯ ಜಗದೀಶ್ ಕಾರಂತ ಮೇಲಾಗಲಿ, ಇದೆಲ್ಲದರ ಮೂಲಪುರುಷ ಕಲ್ಲಡ್ಕ ಪ್ರಭಾಕ ಭಟ್ಟನ ಮೇಲಾಗಲಿ ಎಲ್ಲೂ ಚಕಾರವೆತ್ತಲಿಲ್ಲ, ದಾಳಿ ಬಲಿಯಾದ ಹೆಣ್ಣುಮಕ್ಕಳು, ಅವರ ತಂದೆ ತಾಯಂದಿರನ ಸೌಜನ್ಯಕ್ಕೂ ಸಂತೈಸಲಿಲ್ಲ, ತನ್ನದೇ ರಾಜಕೀಯ ಸಿದ್ಧಾಂತದ ವಾರಸುದಾರರಾದ ಮತಾಂಧರ ವಿರುದ್ಧ ಹೆಚ್ಚಿನ ಕಠಿ ಕ್ರಮಕ್ಕೂ ಮುಂದಾಗಲಿಲ್ಲ.

ಓರ್ವ ಗೃಹಮಂತ್ರಿಯಾಗಿ, ಕಾನೂನು ಸುವ್ಯವಸ್ಥೆಯ ಹೊಣೆ ಹೊತ್ತನಾಗಿ, ಜನರ ಮಾನ, ಪ್ರಾಣ ರಕ್ಷಿಸಬೇಕಾ ಅಶೋಕ್ ಈ ಪ್ರಕರಣಗಳಲ್ಲಿ ಏಕೆ ಜಾರಿಕೊಳ್ಳುವಂತ ಬದುವಿಲ್ಲದವರಂತೆ, ಇನ್ನೆಂಥದೋ ಕಾರು ಬಾರಿನ ಬಿಜಿಯಾಗಿರುವಂತೆ, ಮನಸ್ಸಿಲ್ಲದ ವರಂತೆ ಸಂವೇದನಾಹೀನರಂತೆ ಕಾಣಿಸುತ್ತಾರೆ? ಗಂಡಸರಾಗಿ ಹುಟ ಇಂಥ ಕೃತ್ಯ ಎಸಗಬಾರದು ಅಂದರೆ ಗಂಡಸಾದವರೆ ರೌಡಿಗಳಂತೆ ಬಡಿದಾಡಬೇಕೆ? ಅಥವಾ ಬಾಹುಬಲವೊಂದ ಪೌರುಷದ ಪ್ರತೀಕವೆ?

ಹಿಂದೆ ಎಂತೆಂಥವರೋ ಗೃಹಮಂತ್ರಿಗಳಾಗಿದ್ದಾ ಆದರೆ ಅಶೋಕ್‌ರಂತೆ ಯಾರು ಇಂಥ ಅಪ್ರಬುದ್ಧ ಡೈಲಾಗ ಹೊಡೆದಿರಲಿಲ್ಲ, ಇಷ್ಟೊಂದು ಹೊಣೆಗೇಡಿಯಾಗಿ ಯಾರು ವರ್ತಿಸಲಿಲ್ಲ, ಅಶೋಕ್ ಆಳ್ವಿಕೆಯಲ್ಲೇ ಬೆಂಗಳೂರ ಮಹಾನಗರ ಪಾಲಿಕೆಯ ಇಬ್ಬರು ಬಿಜೆಪಿಯೇತ ಕೌನ್ಸಿಲರ್‌ಗಳ ಹತ್ಯೆಯಾಯಿತು. ಬೆಂಗಳೂರು ಜಿಲ ಪಂಚಾಯ್ತಿಯ ವಿರೋಧ ಪಕ್ಷದ ನಾಯಕ ಭಿನ್ನಮಂಗ ಕೃಷ್ಣಪ್ಪರ ಪ್ರಾಣಕ್ಕೆ ಅಪಾಯವಿದ್ದದ್ದು ಗೊತ್ತಾಗಿಯ ಸರ್ಕಾರದಿಂದ ಅವರ ಪ್ರಾಣ ರಕ್ಷಿಸಲಾಗಲಿಲ್ಲ, ಬೆಂಗಳೂರಿ ಮಟ್ಟಿಗೆ ಇವತ್ತಿಗೂ ಅಂಡರ್‌ವರ್ಲ್ಡ್ ಅರ್ಭಟ ತಗ್ಗಿ ರೌಡಿಗಳ ನಿಗ್ರಹ ವಿಷಯದಲ್ಲಿ ಅಶೋಕ್ ಯಾವತ್ತಿಗ ತಲೆಕೆಡಿಸಿಕೊಳ್ಳಲಿಲ್ಲ, ಬೇರೆಲ್ಲ ಸರ್ಕಾರಗಳ ಅವಧಿ ಹೋಲಿಸಿದರೆ ಅಶೋಕ್ ಗೃಹಮಂತ್ರಿಯಾದ ಮೇಲೆ ಕ್ರೈಮ ಮತ್ತಷ್ಟು ಹೆಚ್ಚಿದೆಯೇ ಹೊರತು ತಗ್ಗಿಲ್ಲ;

ಇನ್ನು ಪೊಲೀಸ್ ಠಾಣೆಗಳ ವಿಷಯಕ್ಕೆ ಬಂದ ಪ್ರತಿ ಪೊಲೀಸ್ ಠಾಣೆಯೂ ಸುಲಿಗೆ ಕೇಂದ್ರವಾಗಿದೆಯೆ ಹೊರತು ಜನಸಾಮಾನ್ಯರ ದೂರೇ ದಾಖಲಾಗುತ್ತಿ ಮಹಿಳೆಯರ ವಿರುದ್ಧದ ಕ್ರೈಮಿನ ಕುರಿತಂತೆ ಗೃಹಮಂತ್ರಿಗ ಒಂದೇ ಒಂದು ಮೀಟಿಂಗ್ ನಡೆಸಿದ ಮಾಹಿತಿಯಿ ಸಂಚಾರಿ ತಾಪತ್ರಯದ ಬಗ್ಗೆ ಯಾವತ್ತಿಗೂ ತಲೆಕೆಡಿ ಕೊಂಡಿಲ್ಲ.

ಹಿಂದ್ಯಾವತ್ತೂ ಇಲ್ಲದಂತೆ ಚೈನ್‌ಸ್ನಾಚಿಂಗ್ ಭುಗಿಲೆದ್ದಿ ಮೀಟರ್ ಬಡ್ಡಿ ಹಾವಳಿ ವಿರುದ್ಧ ಎಷ್ಟೇ ಕ್ರ ಕೈಗೊಂಡರೂ ಅದು ಉಲ್ಬಣಿಸುತ್ತಿದೆ. ಪ್ರತಿ ಪೊಲೀ ಠಾಣೆಯ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಡಜನ್ ಇಸ್ಪೀ ಕ್ಲಬ್ಬುಗಳಿವೆ. ಲೈವ್‌ಬ್ಯಾಂಡ್ ನಿಂತಿಲ್ಲ, ಸ್ಕಿಲ್‌ಗೇಮ್‌ಗ ನಿರಾತಂಕ. ಇನ್ನು ಹೈಟೆಕ್ ವೇಶ್ಯಾವಾಟಿಕೆಗಳ ಲಂಗುಲಗಾಮು ಎಂಬುದೇ ಇಲ್ಲ, ವಿಶೇಷವೆಂದರೆ ವಿದ ಡ್ರಗ್ ರ್‍ಯಾಕೆಟ್ ಬೆಂಗಳೂರಿಗೆ ಕಾಲಿಕ್ಕಿದೆ. ಬಿಹಾರಿಗಳ ಆದ ಕ್ರೈಮ್ ಜಾಲ ಕೂಡ ರಾಜಧಾನಿಗೆ ಎಂಟ್ರಿ ಕೊಟ್ಟಿ

20 ಕೋಟಿಯ ಬಂಗಲೆ ಮತ್ತು 175 ಕೋಟಿಯ ಭೂ ಖರೀದಿ

ಗೃಹಮಂತ್ರಿಯಾದ ಮೇಲೆ ಅಶೋಕ್ ಮಹತ್ತರ ಸಾಧನೆ (?) ಮಾಡದೇ ಹೋದರೂ ಕದ್ದುಮುಚ್ಚಿ ಕೆಲವು ಡೀಲುಗಳನ್ನು ಪೂರೈಸಿದ್ದಾರೆ. ಈ ಪೈಕಿ ಮೊದಲನೆಯದು ಜಯನಗರದ 2.8 ಕೋಟಿಯ ಐಷಾರಾಮಿ ಬಂಗಲೆಯಾದರೆ, ಎರಡನೆಯದು ಕೊಡಿಗೆಹಳ್ಳಿಯ ಏಳೆಕರೆ ಒಂಬತ್ತು ಗುಂಟೆಯ 175 ಕೋಟಿ ರೂಪಾಯಿ ಬೆಲೆಬಾಳುವ ಭಾರೀ ಸೊತ್ತು. ಅಶೋಕ್‌ಗೆ ಈಗಾಗಲೇ ಜಾಲಹಳ್ಳಿಯಲ್ಲಿ ಪಿತ್ರಾರ್ಜಿತವಾದ ಸ್ವಂತ ಮನೆಯಿದೆ. ಪಕ್ಕದ ಸಿಂಗಾಪುರದಲ್ಲಿ 35 ಎಕರೆಯ ವಿಶಾಲ ತೋಟ ಮತ್ತು ಫಾರ್ಮ್ ಹೌಸಿದೆ. ಪದ್ಮನಾಭನಗರದಲ್ಲಿ ದೇವೇಗೌಡ ಪೆಟ್ರೋಲ್ ಬಂಕ್ ಹಿಂದೆ ಭವಾನಿ ಸೊಸೈಟಿಯಲ್ಲಿ 30 x40 ಸೈಟು ಖರೀದಿಸಿ ಗೃಹ ಪ್ರವೇಶವನ್ನೂ ಮುಗಿಸಿದ್ದಾರೆ. ಜಯನಗರದ ಸಂಜಯಗಾಂಧಿ ಆಸ್ಪತ್ರೆ ಹಿಂದಿನ ಸಾರಿಗೆ ಸಂಸ್ಥೆಯ ಬಂಗಲೆ, ಕುಮಾರ ಪಾರ್ಕಿನ ಮಂತ್ರಿ ನಿವಾಸ ಇತ್ಯಾದಿ ಸರ್ಕಾರಿ ಬಂಗಲೆಗಳಿದ್ದೂ ಮತ್ತೆ ಜಯನಗರ 8ನೇ ಬ್ಲಾಕಿನಲ್ಲೊಂದು ಭರ್ಜರಿ ಬಂಗಲೆ ಕಟ್ಟಿಸುತ್ತಿದ್ದಾರೆ!

ಸದ್ಯ ನಿರ್ಮಾಣ ಹಂತದಲ್ಲಿರುವ ನಂ.41/1 (ಹಳೇ ನಂಬರ್484/1) ಒಂದನೇ ಮುಖ್ಯ ರಸ್ತೆ ಜಯನಗರ 8ನೇ ಬ್ಲಾಕ್ ವಿಳಾಸದ ನಿವೇಶನದ ಸುತ್ತಳತೆಯೇ 120x80 ಅಡಿಗಳು. ಹೆಚ್ಚೂ ಕಮ್ಮಿ 10 ಸಾವಿರ ಅಡಿಗಳ ಈ ಪಾಟ ವಿಶಾಲ ಸೈಟಿನ ಸದ್ಯದ ಮಾರುಕಟ್ಟೆ ರೇಟೇ ಸರಿಸುಮಾರು 14 ಕೋಟಿಯಷ್ಟು. ಬಹುಶಃ ಕರ್ನಾಟಕದ ಯಾವೊಬ್ಬ ರಾಜಕಾರಣಿಯೂ ಇಷ್ಟೊಂದು ಬೆಲೆಬಾಳುವ ಐಷಾರಾಮಿ ಬಂಗಲೆ ಕಟ್ಟಿಸಿರಲಿಕ್ಕಿಲ್ಲ, ಮೂರಂತಸ್ತಿನ ಈ ಬಂಗಲೆಯಲ್ಲಿ ವಿಶಾಲ ಪಾರ್ಟಿ ಹಾಲ್, ಹೋಮ್ ಥಿಯೇಟರ್, ಸ್ಪೆಷಲ್ ಜಿಮ್, ಪ್ರತ್ಯೇಕ ಬಾರ್ ಕೌಂಟರ್, ಬ್ಯೂಟಿ ಪಾರ್ಲರ್ ಎಲ್ಲವೂ ಇದೆ.

ನಿವೇಶನದ ಮೌಲ್ಯವೇ 14 ಕೋಟಿಯಾದ ಮೇಲೆ ಇನ್ನು ಕಟ್ಟಡ, ಕಾಮಗಾರಿ, ಇಂಟೀರಿಯರ್, ಎಕ್ವಿಪ್‌ಮೆಂಟ್ ಎಲ್ಲ ಸೇರಿದರೆ ಬಂಗಲೆಯ ಒಟ್ಟು ಮೊತ್ತ 20 ಕೋಟಿಗೇರುತ್ತದೆ. ಇದಕ್ಕೆ ಅಶೋಕ್‌ರ ಅಧಿಪತ್ಯದ ಸಾರಿಗೆ ಇಲಾಖೆಯ ಭ್ರಷ್ಟ ಆರ್‌ಟಿಓಗಳೆಲ್ಲ ಸೇರಿ ನಿಧಿ ಸಂಗ್ರಹಿಸಿ ಕೊಟ್ಟಿದ್ದಾರಂತೆ. ವಿಶೇಷವೆಂದರೆ ಲೋಕಾಯುಕ್ತಕ್ಕೆ ಅಶೋಕ್ ಸಲ್ಲಿಸಿದ ಆಸ್ತಿ ವಿವರಣೆಯಲ್ಲಿ ಈ ಬಂಗಲೆಯ ಪ್ರಸ್ತಾಪವೇ ಇಲ್ಲ.

ಇದರ ಹೊರತಾಗಿ ಅಶೋಕ್ ಸದ್ದಿಲ್ಲದೇ 175 ಕೋಟಿ ರೂಪಾಯಿಗಳ ಮತ್ತೊಂದು ಲ್ಯಾಂಡ್ ಡೀಲನ್ನು ಯಶಸ್ವಿಯಾಗಿ ಪೂರೈಸಿದ್ದು ಇಲ್ಲಿಗೆ ತಿಂಗಳ ಹಿಂದೆ. ಯಲಹಂಕ ಸಮೀಪದ ಕೊಡಿಗೆಹಳ್ಳಿಯಲ್ಲಿ ಆರೆಸ್ಸೆಸ್ ಮೂಲದ ಲ್ಯಾಂಡ್ ಡೀಲರ್ ಓರ್ವ ಲೋಕಕಲ್ಯಾಣ ಪ್ರತಿಷ್ಠಾನದ ಹೆಸರಲ್ಲಿ 7 ಎಕರೆ 9 ಗುಂಟೆ ಜಮೀನನ್ನು ಖರೀದಿಸಿಟ್ಟುಕೊಂಡಿದ್ದ. ಈತ ಅಶೋಕ್‌ರ ಬೇನಾಮಿಗಳಾದ ಕ್ರೆಸೆಂಟ್ ರವಿ ಮತ್ತು ಲೋಕಿಯ ಪರಮಾಪ್ತ. ಇಂಥ ಬೃಹತ್ ಸೊತ್ತನ್ನು ಅಶೋಕ್ ತಮ್ಮ ಅಕ್ಕನ ಮಕ್ಕಳ ಹೆಸರಿಗೆ ವರ್ಗಾಯಿಸಿಕೊಂಡು ಆ ನಂತರ 175 ಕೋಟಿಗೆ ಆಂಧ್ರದ ಆಸಾಮಿಯೊಬ್ಬನಿಗೆ ಮಾರಿಬಿಟ್ಟರು. ಇದೊಂದೇ ಬಾಬತ್ತಿನಿಂದ ಅಶೋಕ್ ಗಳಿಸಿದ ಲಾಭವೇ ನೂರು ಕೋಟಿ. ಇಷ್ಟೆಲ್ಲಾ ದುಡ್ಡು ಗೃಹಮಂತ್ರಿಗೆ ಎಲ್ಲಿಂದ ಬಂತು? ಮಾರಿದ ದುಡ್ಡು ಏನಾಯ್ತು? ಜಯನಗರದ ಬಂಗಲೆಗೆ ಯಾವ್ಯಾವ ಪೊಲೀಸ್ ಅಧಿಕಾರಿಗಳಿಂದ ದುಡ್ಡು ಬಂತು? ಆರ್‌ಟಿಓ ವರ್ಗಾವರ್ಗಿಯಲ್ಲಿ ಅಶೋಕ್ ಕಮಾಯಿ ಎಷ್ಟು? ಬಸ್‌ಗಳ ಖರೀದಿ, ಬಸ್ ನಿಲ್ದಾಣಗಳ ಕಾಮಗಾರಿ, ಸಾರಿಗೆ ಸಂಸ್ಥೆಯ ಸೊತ್ತುಗಳ ಗುತ್ತಿಗೆ ವ್ಯವಹಾರ; ಇತ್ಯಾದಿಗಳ ಬಗ್ಗೆ ಯಾರೇ ಕೆದಕ ಹೊರಟರೂ ಅಶೋಕ್ ಆಮದನಿ ಮತ್ತು ಬ್ಲಾಕ್‌ಮನಿಗಳ ಅಂದಾಜು ಸಿಕ್ಕಿಬಿಡುತ್ತದೆ.

ಕ್ರೆಸೆಂಟ್ ಹೋಟೆ



...ದ್ಮನಾಭನಗರದಲ್ಲಿ ಪೊಲೀಸ್ ರಾಜ್ಯ

...ಲೀಸ್ ಪವರ್ ಬಳಸಿ ಅಶೋಕ್ ಮಟ್ಟಹಾಕಿದ್ದು ಒಬ್ಬಿಬ್ಬರನ್ನಲ್ಲ. ...ವಾರ್ಡಿಗೆ ನಿಂತಿದ್ದ ಅಶೋಕ್ ಛೇಲಾ ಎಂ.ಆರ್. ವೆಂಕಟೇಶ್‌ರ ...ೋಲಿಸಿದ್ದು ಕಾಂಗ್ರೆಸ್ಸಿನ ಜ್ಯೋತಿಶ್ರೀ ಹರಿರೆಡ್ಡಿ. ತನ್ನದೇ ಕ್ಷೇತ್ರದಲ್ಲಿ ...ಬಿ ಕಾಂಗ್ರೆಸ್ ಮುಖಂಡ ಬೆಳೆದುಬಿಟ್ಟರೆ ನಾಳೆ ಎಲ್ಲಿ ತನ್ನ ...ಗೆ ಏಟಾಗುತ್ತೋ ಎಂದು ಪೊಲೀಸರನ್ನು ಛೂಬಿಟ್ಟು ಹರಿರೆಡ್ಡಿಯ ... ಕ್ರಿಮಿನಲ್ ಕೇಸು ದಾಖಲಾಗುವಂತೆ ...ದರು.





ಸಿದ್ದಲಿಂಗ ಪ್ರಭು

... ಹರಿರೆಡ್ಡಿಯ ಮೇಲಿದ್ದ ಆರೋಪ ...ಾರೋ ಆತ್ಮಹತ್ಯೆ ಮಾಡಿಕೊಂಡವ ...ಣೆಯ ಗೋಡೆ ಮೇಲೆ ಹರಿರೆಡ್ಡಿ ...ರೆದಿತ್ತಂತೆ. ಅದನ್ನು ಪೊಲೀಸರೇ ... ಅಥವಾ ಯಾವ ಉದ್ದೇಶದಿಂದ ...ತ್ತೋ ಗೊತ್ತಿಲ್ಲ. ಅದೊಂದನ್ನೇ ನೆಪ ...ತ ಪೊಲೀಸರು ಕೌನ್ಸಿಲರ್ ಪತಿ ...ನ್ನು ಆತ್ಮಹತ್ಯೆಗೆ ಕಾರಣವಾದ ಕೇಸಿಗೆ ...ದರು. ವಿಧಿಯಿಲ್ಲದೇ ಹರಿರೆಡ್ಡಿ ಅಶೋಕ್ ಕಾಲಿಗೆ ಬಿದ್ದು "ಇನ್ನು ...ನೂ ಬಿಜೆಪಿ...!" ಎಂದು ಘೋಷಿಸಿಬಿಟ್ಟ.

...ತಂತ್ರವನ್ನು ಅಶೋಕ್ ಬಳಸಿದ್ದು ಗಣೇಶ್ ಮಂದಿರದ ಮತ್ತೊಬ್ಬ ...ೌನ್ಸಿಲರ್ ಗೋವಿಂದರಾಜು ವಿರುದ್ಧ. ಅಶೋಕ್‌ರ ನಂಬಿಕಸ್ತ ...ವರಾಜನನ್ನು ಸೋಲಿಸಿಯೇ ಗೋವಿಂದರಾಜು ಕೌನ್ಸಿಲರ್ ಆಗಿದ್ದ. ... ಅಶೋಕ್‌ರನ್ನು ಬಳಸಿಕೊಂಡು ಲೋಕಾಯುಕ್ತ ಪೊಲೀಸರನ್ನು ...ಂಚದ ಕೇಸಲ್ಲಿ ಗೋವಿಂದರಾಜುವನ್ನು ಜೈಲುಪಾಲು ಮಾಡಿದ. ...ತ್ತಿಗೆ ಪಾಲಿಕೆ ಅಧಿಕಾರಿಗಳನ್ನು ಛೂಬಿಟ್ಟು ...ರಾಜು ಒಡೆತನದ ಕಲ್ಯಾಣಮಂಟಪವನ್ನು ...ಳಿಸುವ ಕಾರ್ಯಾಚರಣೆಯೂ ಶುರುವಾಯ್ತು. ...ಂಚದ ಕೇಸು ಮತ್ತೊಂದೆಡೆ ಕಲ್ಯಾಣಮಂಟಪದ ...ಟಕ. ಹೆದರಿದ ಗೋವಿಂದರಾಜು ಕೂಡ ... ಶರಣಾಗುವ ಮೂಲಕ ಪದ್ಮನಾಭನಗರದ ...ಂಗ್ರೆಸ್ ಕೌನ್ಸಿಲರ್ ಕತೆಯೂ ಮುಗಿದಂತಾಗಿತ್ತು. ...ಕ್ ಕೆಂಗಣ್ಣಿಗೆ ಬಲಿಯಾದ ಪದ್ಮನಾಭನಗರದ ... ಕೌನ್ಸಿಲರ್ ಜೆಡಿಎಸ್‌ನ ದಿವಾನಾ ಅಲಿ.

ಬನಶಂಕರಿ ದೇವಸ್ಥಾನ ವಾರ್ಡಿನಿಂದ ಭಾರೀ ಅಂತರದಲ್ಲೇ ಗೆದ್ದ ದಿವಾನಾ ಅಲಿ ತನಗೆ ಪಾತಕಿ ಮಾಹಿನ್, ಹಂತಕ ಅಜಗರ್, ರೌಡಿಗಳಾದ ಟೈಲ್ ಜಿಯಾ, ನೀಲಸಂದ್ರದ ಅನ್ವರ್ ಮುಂತಾದವರಿಂದ ಪ್ರಾಣಭೀತಿ ಇದೆಯೆಂದು ರಕ್ಷಣೆ ಕೋರಿ ಪದೇ ಪದೇ ಅಶೋಕ್‌ಗೆ ಮನವಿ ಕೊಡುತ್ತಿದ್ದ. ಅಶೋಕ್‌ಗೆ ಇಷ್ಟೇ ಸಾಕಾಯಿತು. ಅಲಿಗಿದ್ದ ಕೊಲೆ ಬೆದರಿಕೆಯನ್ನೇ ಆತನನ್ನು ಮಟ್ಟಾ ಹಾಕಲು ಬಳಸಿಕೊಂಡರು. ಸಂಬಂಧವಿಲ್ಲದೇ ಹೋದರೂ ಅಲಿಯನ್ನು ಡಕಾಯಿತಿ ಕೇಸೊಂದಕ್ಕೆ ಸಿಲುಕಿಸಲಾಯ್ತು. ಇದನ್ನೇ ನೆಪ ಮಾಡಿಕೊಂಡು ರಕ್ಷಣೆಗಿದ್ದ ಬಂದೂಕುಧಾರಿ ಪೊಲೀಸರನ್ನು ವಾಪಸ್ಸು ಪಡೆಯಲಾಯ್ತು. ಇದನ್ನೇ ಕಾದಿದ್ದ ಅಜಗರ್ ಮತ್ತು ಮಾಹಿನ್ ಗ್ಯಾಂಗ್ ನಡುರಸ್ತೆಯಲ್ಲೇ ಅಲಿಯನ್ನು ಗುಂಡಿಟ್ಟು ಕೊಂದುಹಾಕಿತು.

ಬಿಬಿಎಂಪಿಯ ಕೌನ್ಸಿಲರ್ ದಿವಾನಾ ಅಲಿಯ ಹತ್ಯೆ ಮೇಲುನೋಟಕ್ಕೆ ಭೂಗತ ಜಿದ್ದಾಜಿದ್ದಿನಂತೆ ಕಂಡರೂ ಅದರ ಆಳದಲ್ಲಿ ಸರ್ಕಾರಿ ಷಡ್ಯಂತ್ರವಿತ್ತು. ಅಲಿಯನ್ನು ಕ್ರಿಮಿನಲ್ ಕೇಸೊಂದಕ್ಕೆ ಸಿಲುಕಿಸಿ, ರಕ್ಷಣೆಗಿದ್ದ ಪೊಲೀಸ್ ಬೆಂಗಾವಲನ್ನು ರದ್ದುಪಡಿಸಿ ಆತ ಕೊಲೆಯಾಗಲು ಅನುವು ಮಾಡಿಕೊಟ್ಟ ಪೊಲೀಸ್ ವ್ಯವಸ್ಥೆಯ ಹಿಂದೆ ಹೇಗೆ ಅಶೋಕ್ ತಲೆಗಾರಿಕೆಯಿತ್ತೋ ಹಾಗೆ ಅಶೋಕ್ ಛೇಲಾ ಬಸವರಾಜುನನ್ನು ಬನಶಂಕರಿ ದೇವಸ್ಥಾನ ವಾರ್ಡಿಗೆ ಕೌನ್ಸಿಲರ್ ಮಾಡುವ ಹುನ್ನಾರವೂ ಅಡಗಿತ್ತು.

ಅಲಿಯ ಹತ್ಯೆಗೂ ಮೊದಲೇ ಸರಿಸುಮಾರು 9 ಸಾವಿರ ಮುಸ್ಲಿಂ



ಶಿವಲಿಂಗ ಪ್ರಭುವಿನ ಪತ್ನಿ ಮತ್ತು ಮಗು

ಮತದಾರರನ್ನು ಮತಪಟ್ಟಿಯಿಂದ ತೆಗೆದುಹಾಕಿ 10 ಸಾವಿರದಷ್ಟು ಹಿಂದೂ ನಕಲಿ ಮತದಾರರನ್ನು ಸೇರಿಸಲಾಗಿತ್ತು!

ಹೀಗೆ ಮತಪಟ್ಟಿಗೆ ಸೇರ್ಪಡೆಯಾದ ನಕಲಿ ಮತದಾರರೆಲ್ಲ ಬಿಜೆಪಿ ಬೆಂಬಲಿಗರು ಮತ್ತು ಗಣೇಶ್ ಮಂದಿರದ ಮಾಜಿ ಕೌನ್ಸಿಲರ್ ಬಸವರಾಜನ ಬೆಂಬಲಿಗರು. ಇದರರ್ಥ ಕೌನ್ಸಿಲರ್ ಅಲಿ ಕೊಲೆಯಾಗುತ್ತಾನೆಂದೂ, ಅಲ್ಲಿಗೆ ಮತ್ತೆ ಉಪಚುನಾವಣೆ ಬರುತ್ತದೆಯೆಂದೂ, ಅಶೋಕ್ ಛೇಲಾ ಬಸವರಾಜುವೇ ಅಲ್ಲಿಗೆ ಅಭ್ಯರ್ಥಿಯಾಗುತ್ತಾನೆಂದೂ ಆತ ಗೆಲ್ಲಬೇಕೆಂದರೆ ಈ ಪಾಟಿ ನಕಲಿ ಮತದಾರರನ್ನು ಪಟ್ಟಿಗೆ ಸೇರಿಸಬೇಕೆಂಬುದೂ ಮಾನ್ಯ ಗೃಹ ಮಂತ್ರಿಗಳಿಗೆ ಕನಸು ಬಿದ್ದಿತ್ತೆ?

ದಿವಾನಾ ಅಲಿ ಹತ್ಯೆಯ ಬಗ್ಗೆ ಈಗಲೂ ಸಿಬಿಐ ತನಿಖೆಯಾದರೆ ಗೃಹಮಂತ್ರಿ ಅಶೋಕ್ ಉತ್ತರಿಸಬೇಕಾದ ಪ್ರಶ್ನೆಗಳದ್ದೇ ದೊಡ್ಡ ಪಟ್ಟಿಯಿದೆ. ಅಲಿಯ ಕೊಲೆಯಿಂದ ತೆರವಾದ ಬನಶಂಕರಿ ವಾರ್ಡಿಗೆ ಅಶೋಕ್‌ರ ಪಕ್ಕಾ ಛೇಲಾ ಬಸವರಾಜುವೇ ಗೆದ್ದಿದ್ದರ ಹಿಂದಿನ ಮರ್ಮವೇ ಬೇರೆಯಿದೆ. ತನ್ನ ಪಕ್ಕಾ ಬೆಂಬಲಿಗ ಇಟ್ಟುಮಡು ಬಾಬು ಹತ್ಯೆಗೆ ಪ್ರತೀಕಾರವಾಗಿ ಹಂತಕ ಪರಂಧಾಮನನ್ನು ಎನ್‌ಕೌಂಟರ್ ಮಾಡಿಮುಗಿಸಿದ ಅಶೋಕ್ ಇದೇ ಮಾನದಂಡವನ್ನು ಭಿನ್ನಮಂಗಲ ಕೃಷ್ಣಪ್ಪರ ಹತ್ಯೆ ವಿಷಯದಲ್ಲಿ ಏಕೆ ಮರೆಯುತ್ತಾರೆ? ತಮ್ಮದೇ ಪಕ್ಷದ, ಲಿಂಬಾವಳಿಯ ಬೆಂಬಲಿಗರಾಗಿದ್ದ ಕೆಂಪಾಪುರ ಮೂರ್ತಿ ಎಂಬ ದಲಿತನಾಯಕನ ಕೊಲೆಯಲ್ಲಿ ಶಾಸಕ ನಂದೀಶ್ ರೆಡ್ಡಿಯ ಕೈವಾಡದ ಆರೋಪವಿದ್ದರೂ ಅದನ್ನೇಕೆ ನಿರ್ಲಕ್ಷಿಸುತ್ತಾರೆ? ಜೆಡಿಎಸ್ ಕಾರ್ಯಕರ್ತ ಮತ್ತು ನೈಸ್ ವಿರೋಧಿ ಹೋರಾಟಗಾರ ಸೋಂಪುರದ ಸಿದ್ಧಲಿಂಗ ಪ್ರಭು ಕೊಲೆಗೆ ನೈಸ್ ಖೇಣಿ ಮತ್ತು ಬಿಜೆಪಿ ಲೀಡರ್ ಎಂ.ರುದ್ರೇಶನೇ ಕಾರಣರೆಂದು ಹತನ ಸಂಬಂಧಿಗಳೇ ದೂರು ಕೊಟ್ಟರೂ ಏಕೆ ತಲಘಟ್ಟಪುರ ಪೊಲೀಸರು ತನಿಖೆ ಮಾಡುವುದಿಲ್ಲ?


ಅಶೋಕ್‌ರ ಹೋಮ್ ಮಿನಿಸ್ಟರ್‌ಗಿರಿಯೆಂಬುದು ಹೇಗೆ ಇಂಥ ಕ್ಷುಲ್ಲಕ, ಹಂತಕ, ಕ್ರಿಮಿನಲ್ ಕಾರಸ್ಥಾನಗಳಿಗಷ್ಟೇ ಸೀಮಿತಗೊಂಡಿದೆಯಲ್ಲವೇ?




ಬಸವರಾಜು



ದಿವಾನಾ ಅಲಿ



ಗೋವಿಂದರಾಜು



ಜ್ಯೋತಿಶ್ರೀ

...ರ್ಕಾರಗಳಿಗೆ ಹೋಲಿಸಿದರೆ ಬಿಜೆಪಿ ಮತ್ತು ...ಗೃಹಸಚಿವಗಿರಿಯ ಅವಧಿಯಲ್ಲೇ ರಿಯಲ್ ...ಸಂಬಂಧಿ ದೂರು ಹಿಂಸಾಚಾರಗಳು ಹೆಚ್ಚು ...ಯಾರೂ ಗಮನಿಸದ ಸೂಕ್ಷ್ಮವೆಂದರೆ ಮಹಿಳೆಯರ ...ದೌರ್ಜನ್ಯಗಳು, ಸಣ್ಣಪುಟ್ಟ ವ್ಯಾಜ್ಯಗಳು ಮತ್ತು ... ದಲಿತರ ಮೇಲೆ ನಡೆಯುವ ಹಿಂಸಾಚಾರಗಳ





...ಬೆಂಗಳೂರು ಮತ್ತು ಸುತ್ತಮುತ್ತಲ ಬಹುತೇಕ ... ಠಾಣೆಗಳು ತಮ್ಮ ಹೊಣೆಗಾರಿಕೆಯನ್ನೇ ...ಟ್ಟಿವೆ.

...ಿನ ಸರ್ಕಾರಗಳ ಅವಧಿಯಂತೆ ಈಗ ಸಣ್ಣಪುಟ್ಟ ...ಗಳನ್ನು ಪೊಲೀಸರು ಗಂಭೀರವಾಗಿ ಪರಿಗಣಿಸು ...ಷ್ಟೋ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ...ಸುವುದಿರಲಿ ದೂರನ್ನೂ ಸ್ವೀಕರಿಸುವುದಿಲ್ಲ. ಹಿಂದಿನ ...ೃಹಮಂತ್ರಿಗಳು ಕನಿಷ್ಠ ಆರು ತಿಂಗಳಿ...ಗಾದರೂ ದಲಿತರ ಮೇಲಿನ ದೌರ್ಜನ್ಯಗಳ ...ಪೊಲೀಸ್ ವರಿಷ್ಠಾಧಿಕಾರಿಗಳ ರಿವ್ಯೂ ಮೀಟಿಂಗ್ ...ದ್ದರು. ಅಂಥ ಒಂದೇ ಒಂದು ಸಭೆಯನ್ನು ... ಕರೆದಿಲ್ಲ. ಬೆಂಗಳೂರು ಭೂಗತ ಜಗತ್ತು ಮತ್ತು ... ತಡೆ ಸಂಬಂಧ ಹಿಂದಿದ್ದ ಬಹುತೇಕ ...ಗಳು ಪದೇ ಪದೇ ಪೊಲೀಸ್ ಕಮೀಷನರ್ ... ಹಿರಿಯ ಅಧಿಕಾರಿಗಳ ಸಭೆ ಕರೆದು ರೌಡಿಗಳ ...ಕ್ಕೆ ವಿಶೇಷ ಮುತುವರ್ಜಿ ವಹಿಸುತ್ತಿದ್ದರು. ... ತನಕ ಅಶೋಕ್ ಇಂಥ ಒಂದೇ ಒಂದು ... ಕರೆದಿಲ್ಲ. ಕಾನೂನು ಸುವ್ಯವಸ್ಥೆ ಪಾಲನೆ ಕುರಿತಂತೆ ...ಕ್ಕೆ ಒಂದೆರಡು ಸಭೆ ನಡೆಸಿದ್ದು ಬಿಟ್ಟರೆ ...ಗೆ ರಾಜ್ಯದ ಜನರ ಮಾನ-ಪ್ರಾಣ ರಕ್ಷಣೆ ಕುರಿತಂತೆ ...ಕೊಳ್ಳಲು ಬಿಡುವೇ ಇಲ್ಲ.

...ಗಾದರೆ ಅಶೋಕ್ ಇಷ್ಟ್ಯಾವುದರಲ್ಲಿ ...ರೆ? ಏಕೆ ... ಕಾರ್ಯವೈಖರಿ ... ?

ಸೌಲಭ್ಯ, ಸಾಧ್ಯತೆಗಳಿದ್ದೂ ಏಕೆ ಯಾವುದರ ಬಗ್ಗೆಯೂ ಆಸಕ್ತಿ ವಹಿಸುತ್ತಿಲ್ಲ?

ಒಮ್ಮೆ ಬೆಂಗಳೂರಿನ ಪದ್ಮನಾಭನಗರ ಸುತ್ತಿ ಬಂದರೆ ಅಶೋಕ್ ವೈಫಲ್ಯ, ಅಪ್ರಬುದ್ಧತೆ ಮತ್ತು ನಿರಾಸಕ್ತಿಗೆ ಉತ್ತರ ಸಿಕ್ಕಿಬಿಡುತ್ತದೆ. ಅಶೋಕ್‌ರ ಹೋಮ್‌ಮಿನಿಸ್ಟರ್‌ಗಿರಿ, ಉಪಮುಖ್ಯಮಂತ್ರಿಗಿರಿ, ಅಧಿಕಾರ, ಅಂತಸ್ತು ಎಲ್ಲವೂ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಪದ್ಮನಾಭನಗರಕ್ಕೇ ಸೀಮಿತಗೊಂಡಿವೆ. ಸಣ್ಣಪುಟ್ಟ ಗಲ್ಲಿ ಕಾರ್ಯಕ್ರಮಗಳು, ಮೋರಿ ಉದ್ಘಾಟನೆ, ಅಣ್ಣಮ್ಮ, ಗಣೇಶ ಆರ್ಕೆಸ್ಟ್ರಾಗಳು ಅವರ ಸ್ವಕ್ಷೇತ್ರ ಪದ್ಮನಾಭನಗರದ ವ್ಯಾಪ್ತಿಗೊಳಪಟ್ಟಿದ್ದರೆ ಅಶೋಕ್ ತಪ್ಪದೇ ಹಾಜರಾಗುತ್ತಾರೆ. ವಾರದ ಐದೂ ದಿನಗಳ ಕಾಲ ಜಯನಗರದ ಕೆಎಸ್ಆರ್‌ಟಿಸಿ ಗೆಸ್ಟ್‌ಹೌಸಿನಲ್ಲಿ ಕೂತು ಕ್ಷೇತ್ರದ ಪುಢಾರಿಗಳ ಇಷ್ಟಾನಿಷ್ಟ ಆಲಿಸುವುದೇ ಅಶೋಕ್ ಪಾಲಿಗೆ ಅಚ್ಚುಮೆಚ್ಚು.

ಮಿಕ್ಕಂತೆ ಬಿಬಿಎಂಪಿಗೆ ಯಾವ ವಿಭಾಗಕ್ಕೆ ಯಾವ ಇಂಜಿನಿಯರ್ ನೇಮಿಸಬೇಕು, ಯಾರನ್ನು ಕಿತ್ತು ಯಾರನ್ನು ಹಾಕಬೇಕು, ಪಾಲಿಕೆಯ ಯಾವ ವಾರ್ಡಿಗೆ ಯಾವ್ಯಾವ ಅಧಿಕಾರಿಯನ್ನು ತರಬೇಕು ಎಂಬುದರಲ್ಲೇ ಅಶೋಕ್ ಬಿಜಿಯಾಗಿದ್ದಾರೆ. ಅವರದ್ದು ಶುದ್ಧ ರಿಯಲ್ ಎಸ್ಟೇಟ್ ಕಾರ್ಯವೈಖರಿ. ಈ ಹಿಂದೆ ರಿಯಲ್ ಎಸ್ಟೇಟ್ ದಂಧೆಯಲ್ಲಿದ್ದು ಕಂಡೋರ ಸೈಟಿಗೆ ಬೇಲಿ ಹಾಕಿಸುವುದು, ರೌಡಿಗಳನ್ನು ಛೂಬಿಟ್ಟು ಡೀಲು ಕುದುರಿಸುವುದು, ರೌಡಿಗಳಿಂದಾಗಿ ಡೀಲಿಗೆ ಅಡೆತಡೆಯಾಗಿದ್ದರೆ ಪೊಲೀಸರನ್ನು ಬಿಡುವುದು ಇತ್ಯಾದಿ ಮಾಡಿಕೊಂಡಿದ್ದ ಅಶೋಕ್ ಕನಿಷ್ಠ ಆರೆಸ್ಸೆಸ್ ಸಿದ್ಧಾಂತಗಳನ್ನೂ ಮೈಗೂಡಿಸಿಕೊಳ್ಳಲಿಲ್ಲ. ಯಾವೊಂದು ವೈಚಾರಿಕತೆ, ಹೋರಾಟ, ಓದು, ಚಿಂತನೆ ಇತ್ಯಾದಿ ನಾಗರಿಕ ಜಗತ್ತಿನ ಏನೊಂದೂ ಅಶೋಕ್‌ಗೆ ಗೊತ್ತಿಲ್ಲ.

ಸದ್ಯ ಅಶೋಕ್ ಪರ ಇಡೀ ಗೃಹಖಾತೆಯನ್ನು ...ಭಾಯಿಸುತ್ತಿರುವುದು ಮೂವರು ರಿಯಲ್ ಎಸ್ಟೇಟ್ ಖದೀಮರು. ಈ ಪೈಕಿ ಅಶೋಕ್ ಸಹೋದರ ರವಿ ಈ ಹಿಂದೆ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ನಿಂತು ಕೃಷ್ಣಭೈರೇಗೌಡರ ವಿರುದ್ಧ ಸೋತ. ವರಸೆಯಲ್ಲಿ ಅಶೋಕ್ ಚಿಕ್ಕಪ್ಪನ ಮಗ. ಈತನದ್ದು ಫುಲ್‌ಟೈಮ್ ರಿಯಲ್ ಎಸ್ಟೇಟ್ ದಂಧೆ. ಎರಡನೆಯವನು ಕ್ರೆಸೆಂಟ್ ರವಿ ಎಂಬ ಲ್ಯಾಂಡ್ ಡೀಲರ್. ಕುಮಾರ ಪಾರ್ಕ್ ಏರಿಯಾದ ಮಲ್ಲಿಗೆ ನರ್ಸಿಂಗ್ ಹೋಮ್ ಎದುರಿಗಿರುವ '37 ಕ್ರೆಸೆಂಟ್' ಎಂಬ ಐಷಾರಾಮಿ ಹೋಟೇಲಿಗೆ ಈತನೇ ಮಾಲಿಕ. ಬಲ್ಲ ಮೂಲಗಳ ಪ್ರಕಾರ ಮಂತ್ರಿ ಅಶೋಕ್ ಕೂಡ ಈ ಹೋಟೇಲಿಗೆ ಪಾಲುದಾರರು!

ಸದ್ಯ ಡಾಲರ್ಸ್ ಕಾಲೋನಿಯ ನಿವಾಸಿಯಾದ ಕ್ರೆಸೆಂಟ್ ರವಿ ಮೂಲತಃ ಆಂಧ್ರದ ರಾಜೂ ಕ್ಷತ್ರಿಯ. ಹೈದರಾಬಾದ್, ವಿಶಾಖಪಟ್ಟಣ, ಕರ್ನೂಲುಗಳಲ್ಲಿ ರಿಯಲ್ ಎಸ್ಟೇಟ್, ಮೈನಿಂಗ್, ಹೋಟೇಲುಗಳನ್ನು ನಡೆಸುತ್ತಾನೆ. ಆಂಧ್ರ ಮೂಲದ ಈತ ಅದ್ಹೇಗೆ ಅಶೋಕ್‌ಗೆ ಪರಮಾಪ್ತನಾದ? ಏಕೆ ಅಶೋಕ್ ಈತನನ್ನು ಆಪಾಟಿ ಜೊತೆಗಿಟ್ಟುಕೊಳ್ಳುತ್ತಾರೆಂಬುದೇ ನಿಗೂಢ. ಬಹುಶಃ ಅಶೋಕ್‌ರ ಅಕ್ರಮ ಖಮಾಯಿಯನ್ನೆಲ್ಲ ವ್ಯವಸ್ಥಿತವಾಗಿ ಆಂಧ್ರದಲ್ಲಿ ತೊಡಗಿಸುತ್ತಿರುವುದೇ ಕ್ರೆಸೆಂಟ್ ರವಿ!

ಹೀಗೆ ಅಶೋಕ್ ಅಂತಃಪುರದ ಅತ್ಯಂತ ಪರಮಾಪ್ತ ಮತ್ತು ನಂಬಿಕಸ್ಥ ಭಟ್ಟಂಗಿಗಳ ಪೈಕಿ ಮೂರನೆಯವನು ಮತ್ತು ಅತ್ಯಂತ ಪ್ರಭಾವಿ ಆಸಾಮಿಯೇ ಲೋಕಿ ಅಲಿಯಾಸ್ ಲೋಕೇಶ. ಈತ ನಟೋರಿಯಸ್ ಲ್ಯಾಂಡ್ ಗ್ರಾಬರ್ ಮತ್ತು ನಿಷ್ಣಾತ ಡೀಲರ್. ಅಶೋಕ್ ಎಮ್ಮೆಲ್ಲೆಯಾಗುವುದಕ್ಕೂ ಮೊದಲೇ ಅವರ ರಿಯಲ್ ಎಸ್ಟೇಟ್ ದಂಧೆಯ ಪಾಲುದಾರನಾಗಿದ್ದ ಲೋಕಿಗೆ ಆ ಕಾಲಕ್ಕೇ ಬೆಂಗಳೂರಿನ ಪೊಲೀಸ್ ಅಧಿಕಾರಿಗಳು ಮತ್ತು ಇನ್ಸ್‌ಪೆಕ್ಟರ್‌ಗಳ ಒಡನಾಟವಿತ್ತು. ಯಾವ್ಯಾವ ಪೊಲೀಸರನ್ನು ಹೇಗೆ ನಿಭಾಯಿಸಬೇಕು, ದೌರ್ಬಲ್ಯಗಳೇನು ಇತ್ಯಾದಿ ಪ್ರತಿಯೊಂದನ್ನು ಚೆನ್ನಾಗಿ ಬಲ್ಲ ಲೋಕಿ ಅಶೋಕ್‌ರ ರಿಯಲ್ ಎಸ್ಟೇಟ್ ದಂಧೆಯನ್ನು ಸಂಭಾಳಿಸುತ್ತಾನೆ.



ಕಜಿನ್ ರವಿ, ಕ್ರೆಸೆಂಟ್ ರವಿ ಮತ್ತು ಲೋಕಿ ಎಂಬ ರಿಯಲ್ ಎಸ್ಟೇಟ್ ತ್ರಿಮೂರ್ತಿಗಳೇ ಇವತ್ತು ಇಡೀ ಗೃಹ ಇಲಾಖೆಯನ್ನು ನಿಯಂತ್ರಿಸುತ್ತಿದ್ದಾರೆ. ಯಾರೇ ಪೊಲೀಸ್ ಪೇದೆಯೊಬ್ಬನಿಗೆ ಉಪ್ಪಾರಪೇಟೆ, ಚಿಕ್ಕಪೇಟೆ, ಮಾರ್ಕೆಟ್, ಕಮರ್ಷಿಯಲ್ ಸ್ಟ್ರೀಟ್‌ನಂಥ ಫಲವತ್ತು ಪೊಲೀಸ್ ಠಾಣೆಗೆ ಹಾಕಿಸಿಕೊಳ್ಳಬೇಕೆಂದರೆ ಕನಿಷ್ಠ 50 ಸಾವಿರದಿಂದ 1 ಲಕ್ಷ ಕೊಡಬೇಕು. ಅಶೋಕ್ ಕಜಿನ್ ರವಿಯದ್ದೇ ಇದರ ... ಸಿಂಹಪಾಲು. ಎಎಸ್‌ಐ ಅಂದರೆ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್‌ಗೆ ಲಾಭದಾಯಕ ಪೊಲೀಸ್ ಠಾಣೆ ಕಲ್ಪಿಸಬೇಕೆಂದರೆ ಅದಕ್ಕೂ 1 ರಿಂದ 1.5 ಲಕ್ಷ ಬಿಚ್ಚಬೇಕು. ಅದೇ ಎಸ್.ಐ. ಹುದ್ದೆಗೆ ಮಿನಿಮಮ್ ಎರಡೂವರೆ ಲಕ್ಷ ತೆರಬೇಕು. ಇನ್ನು ಇನ್ಸ್‌ಪೆಕ್ಟರ್ ಹುದ್ದೆಗಳ ವರ್ಗಾವರ್ಗಿಯ ಖದರ್ರೇ ಬೇರೆಯಿದೆ. ಉಪ್ಪಾರಪೇಟೆ, ಚಿಕ್ಕಪೇಟೆ, ಮಾರ್ಕೆಟ್, ಕಲಾಸಿಪಾಳ್ಯ, ಅತ್ಯಧಿಕ ಲೈವ್ ಬ್ಯಾಂಡುಗಳಿರುವ ಅಶೋಕ್‌ನಗರ, ದೋನಂಬರ್ ದಂಧೆಗಳೇ ವಿಪರೀತವಾಗಿರುವ ಕಮರ್ಷಿಯಲ್ ಸ್ಟ್ರೀಟ್‌ನಂಥ ಪೊಲೀಸ್ ಠಾಣೆಗಳಿಗೆ ಕನಿಷ್ಠ 15ರಿಂದ 25 ಲಕ್ಷ. ಉಳಿಕೆ ಸಾಮಾನ್ಯ ಪೊಲೀಸ್ ಠಾಣೆಗಳಿಗೆ ಕನಿಷ್ಠ 5ರಿಂದ 10 ಲಕ್ಷದ ಮಾರ್ಕೆಟ್ ರೇಟನ್ನು ಮಂತ್ರಿ ಅಶೋಕ್ ಬಂಟರೇ ನಿಗದಿಪಡಿಸಿದ್ದಾರೆ.

ಹೀಗೆ ನಿಗದಿಯಾದ ಮೊತ್ತ ಪಾವತಿಸಿದರೇನೇ ಬೇಕಾದ ಪೊಲೀಸ್ ಠಾಣೆ ಸಿಗುತ್ತದೆ. ಮಿಕ್ಕಂತೆ ಜಾತಿ ಲಾಬಿಗಳು, ಬಿಜೆಪಿ ನಾಯಕರು, ರೌಡಿಗಳು, ಲ್ಯಾಂಡ್ ಡೀಲರುಗಳೆಲ್ಲ ತಮಗೆ ಬೇಕಾದವರನ್ನೇ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹಾಕಿಸಿಕೊಂಡಿದ್ದಾರೆ. ಆಯಾ ಠಾಣೆಗಳಿಗೆ ನೇಮಕಾತಿ ಮತ್ತು ವರ್ಗಾವಣೆಗೆ ದುಡ್ಡೇ ಮಾನದಂಡವಾದ ಮೇಲೆ ಜನಸಾಮಾನ್ಯನೊಬ್ಬ ಹೇಗೆ ನ್ಯಾಯ ಪಡೆಯಲು ಸಾಧ್ಯ.

ಇವತ್ತು ಬೆಂಗಳೂರು, ಮಂಗಳೂರಷ್ಟೇ ಅಲ್ಲ ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಕಾನೂನು ಸುವ್ಯವಸ್ಥೆ ಹದಗೆಡಲು ಇದೇ ಕಾರಣ. ಪ್ರತಿ ನಿತ್ಯ ರಾಜಧಾನಿಯಲ್ಲಿ ಕೊಲೆ ಸುಲಿಗೆಗಳು ನಡೆಯುತ್ತಿದ್ದರೂ ಕೂಡ ಪೊಲೀಸ್ ಕಮೀಷನರ್ ಮಿರ್ಜಿ ಸಾಹೇಬರು ಮೂಕಪ್ರೇಕ್ಷಕನಂತೆ ನಿರ್ಲಿಪ್ತರಾಗಿರುತ್ತಾರೆ. ಬಿಜೆಪಿ ಬೆಂಬಲಿತ ರೌಡಿಗಳದ್ದೇ ಒಂದು ತಂಡವಾದರೆ ಬಿಜೆಪಿ ನಾಯಕರಿಗೆ ಬಲಿಯಾದ ಪಾತಕಿಗಳದ್ದು ನಾಯಿಪಾಡು. ಬಿಜೆಪಿ ಕಾರ್ಯಕರ್ತರು, ನಾಯಕರು ರೌಡಿಜಮ್ಮೇ ಮಾಡಲಿ, ಕೊಲೆಯನ್ನೇ ಮಾಡಿಸಲಿ ಅದು ಅಲ್ಲಲ್ಲಿಗೇ ಮುಚ್ಚಿಹೋಗುತ್ತದೆ. ಆದರೆ ಕಾಂಗ್ರೆಸ್, ಜೆಡಿಎಸ್, ದಲಿತ ಸಂಘಟನೆಗಳ ಬೆಂಬಲಿಗರು ತಪ್ಪಾಗಿದ್ದರೂ ಕೆದಕೆದಕಿ ಕೇಸು ಜಡಿಯಲಾಗುತ್ತದೆ (ಉದಾಹರಣೆಗೆ ಬಾಕ್ಸ್‌ಗಳನ್ನು ನೋಡಿ). ರಾಜಕೀಯವಾಗಿ ಬಲಾಢ್ಯರಾಗಿದ್ದರೆ ಅವರು ಪಾಲಿಕೆ ಸದಸ್ಯರಾಗಿದ್ದರೂ ಪೊಲೀಸರನ್ನ ಛೂಬಿಟ್ಟು ಮಟ್ಟಾ ಹಾಕಲಾಗುತ್ತದೆ.

ಅಶೋಕ್‌ರ ಗೃಹಮಂತ್ರಿಗಿರಿಯೆಂಬುದು ಅಕ್ಷರಶಃ ರಿಯಲ್ ಎಸ್ಟೇಟ್ ವೈಖರಿಯಲ್ಲೇ ನಡೆಯುತ್ತದೆಯಾದ್ದರಿಂದ ಬೆಂಗಳೂರಿನ ಬಹುತೇಕ ಪೊಲೀಸ್ ಠಾಣೆಗಳೂ ರಿಯಲ್ ಎಸ್ಟೇಟ್ ... ಯನ್ನೇ ಮೈಗೂಡಿಸಿಕೊಂಡಿವೆ.

● ರಾ. ಸೋಮನಾಥ್

ಪ್ರವಾದಿಗಳ ಮಾನವೀಯತೆ ಈಗೆಲ್ಲಿ!

ಮುಸ್ಲಿಂ ಹೆಣ್ಣುಮಕ್ಕಳು ಮನೆಯಿಂದ ಹೊರಬಂದೊಡನೆ ಅವರ ಮೇಲೆ ಧರ್ಮದ ಹೆಸರಿನಲ್ಲಿ ನೂರಾರು ನಿಯಮಗಳನ್ನು ಹೇರಿ ಶಿಕ್ಷಣದ ಕುರಿತ ಅವರ ಆಸಕ್ತಿಗೆ ತಣ್ಣೀರೆರಚಲಾಗುತ್ತಿದೆ. ಈ ನಿಯಮಗಳ ಹೇರಿಕೆಯಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಳ್ಳುವವರು ಸಮಾಜದ ಕೆಲವು ಮೂಲಭೂತವಾದಿ ಸಂಘಟನೆಗಳೇ ಹೊರತು ಈ ಹೆಣ್ಣುಮಕ್ಕಳ ಹೆತ್ತವರಿಗೆ ಆ ಕುರಿತು ವಿಶೇಷವಾದ ಆಸಕ್ತಿಯೇನೂ ಇರಲಾರದು.


ಇತ್ತೀಚೆಗೆ ಮುಸ್ಲಿಂ ಹೆಣ್ಣುಮಕ್ಕಳು ತಲೆಗೆ ಸ್ಕಾರ್ಫ್ ಸುತ್ತಿಕೊಳ್ಳಬೇಕೆಂಬ ಕುರಿತು ಹೋರಾಟ ಪ್ರಾರಂಭವಾಗಿದೆ. ಮನೆಯೊಳಗೆ ಕೂಡಾ ತಲೆಗೆ ಸ್ಕಾರ್ಫ್ ಸುತ್ತಿಕೊಳ್ಳಬೇಕೆಂದು ಹೇಳಲಾರಂಭಿಸಿದ್ದಾರೆ. ಧಾರ್ಮಿಕ ನಿಯಮಗಳೆಲ್ಲವನ್ನೂ ಅನುಸರಿಸಬೇಕಾದವರು ಮಹಿಳೆಯರು ಎಂಬುದನ್ನು ಮತ್ತೆಮತ್ತೆ ಒತ್ತಿ ಹೇಳಲಾಗುತ್ತಿದೆ. ಇದಕ್ಕೆ ಬಹಳ ಮುಖ್ಯವಾದ ಒಂದು ಕಾರಣ ಇಂದಿನ ಕೋಮುವಾದವನ್ನಬೇಕಾಗಿದೆ. ಮುಸ್ಲಿಮರನ್ನು ಮೂಲೆಗೊತ್ತರಿಸಲು ಹಿಂದೂಗಳು ಪ್ರಯತ್ನಿಸುತ್ತಾರೆ ಎಂಬ ಒಂದು ಮನೋವ್ಯಥೆ ಮುಸ್ಲಿಮರನ್ನು ಕಾಡುತ್ತಿರುತ್ತದೆ. ಅದಕ್ಕೆ ಸಮನಾಗಿ ಈ ಮೂಲಭೂತವಾದಿಗಳು ಬಡ, ಅಮಾಯಕ, ಅನಕ್ಷರಸ್ಥ ಮುಸ್ಲಿಮರ ಮೆದುಳು ತೊಳೆಯುವ ಕೆಲಸವನ್ನು ಮಾಡುತ್ತಿರುತ್ತಾರೆ. ಅದರಂತೆ ನಮ್ಮ ನಿಯಮವನ್ನು ನಾವು ಅನುಸರಿಸುತ್ತೇವೆ' ಎಂದು ಮುಸ್ಲಿಮರು ಹಠ ಮಾಡಿದೊಡನೆ, "ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ನಮ್ಮ ನಿಯಮಗಳಿಗನುಸಾರವಾಗಿ ನೀವು ನಡೆದುಕೊಳ್ಳಬೇಕು." ಎಂಬಂತೆ ಏನಾದರೊಂದು ನಿಯಮವನ್ನು ಕಡ್ಡಾಯಗೊಳಿಸುತ್ತಾರೆ. ಈ ಹಗ್ಗಜಗ್ಗಾಟದಲ್ಲಿ ಮುಸ್ಲಿಂ ಹೆಣ್ಣುಮಕ್ಕಳು ನಲುಗುತ್ತಾರೆ.

ಮಹಿಳೆಯರ ವಸ್ತ್ರಧಾರಣೆಯ ಕುರಿತು ಪ್ರವಾದಿಗಳು ಏನು ಹೇಳಿದ್ದಾರೆ ಎಂಬುದರತ್ತ ಮೊಟ್ಟಮೊದಲು ಗಮನ ಹರಿಸೋಣ. ಈ ಕುರಿತು ನಾನು ಈ ಹಿಂದೆಯೂ ಬರೆದಿದ್ದೇನೆ. ಅತ್ಯಧಿಕ ತಾಪಮಾನವಿರುವ ಮರುಭೂಮಿಯಾದ ಅರೇಬಿಯಾ ದೇಶದಲ್ಲಿ ಇಂದಿನಂತೆ ಯಾವುದೇ ಆಧುನಿಕ ಸೌಲಭ್ಯವಿಲ್ಲದ ಕಾಲದಲ್ಲಿ ಮನುಷ್ಯರು ಮೈತುಂಬಾ ಬಟ್ಟೆ ಧರಿಸಿ ಓಡಾಡುವುದು ಬಹಳ ಕಷ್ಟದ ಕೆಲಸವೇ ಆಗಿತ್ತು, ಮಾತ್ರವಲ್ಲ ಅನಾಗರಿಕರಾದ ಅರಬರು ಹೊರಗೆ ಕಂಡ ಮಹಿಳೆಯರ ಮೇಲೆ ದೌರ್ಜನ್ಯವೆಸಗುವುದು ತೀರಾ ಸಾಮಾನ್ಯವಾಗಿತ್ತು. ಮರುಭೂಮಿಯ ಸಂಚಾರಿಗಳಾದ ಈ ಜನರು, ಹೆಣ್ಣು ಗಂಡುಗಳೆಲ್ಲರೂ ತಲೆಯ ಮೇಲೆ ಬಿಳಿ ಬಟ್ಟೆಯನ್ನು ಹಾಕಿಕೊಳ್ಳುವುದು ಅನಿವಾರ್ಯವಾಗಿತ್ತು. ಮರುಭೂಮಿಯಲ್ಲಿ ಓಡಾಡುವಾಗ, ಭೀಕರ ಬಿರುಗಾಳಿ ಬೀಸಿ ಮರುಭೂಮಿಯ ಮರಳು ಕಣ್ಣು ಮೂಗು ಮತ್ತು ಕಿವಿಗಳಲ್ಲಿ ತುಂಬಿಕೊಳ್ಳುವುದನ್ನು ತಡೆಯಲು ಅವರು ತಲೆಯ ಮೇಲಿನ ಈ ಬಟ್ಟೆಯಿಂದ ಮುಖ ಮುಚ್ಚಿಕೊಂಡು ಮರಳಿನಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಮೈಮೇಲೆ ಸಮನಾಗಿ ಬಟ್ಟೆಯೂ ಇಲ್ಲದೆ ಓಡಾಡುವ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಯಲು ಪ್ರವಾದಿಗಳು ಮಹಿಳೆಯರೊಡನೆ, "ನಿಮ್ಮ ಮೇಲೆ ಪುರುಷರಿಂದ ಆಕ್ರಮಣವಾಗುವುದನ್ನು ತಡೆಯಲು ನೀವು ಹೊರಬರುವಾಗ ನಿಮ್ಮ ರಕ್ಷಣೆಗಾಗಿ ನಿಮ್ಮ ಸೌಂದರ್ಯವನ್ನು ಆದಷ್ಟು ಮರೆಮಾಡಿಕೊಳ್ಳಿ. ನಿಮ್ಮ ತಲೆಯ ಮೇಲಿನ ಬಟ್ಟೆಯನ್ನು ಎದೆಯ ಮೇಲೆ ಎಳೆದುಕೊಳ್ಳಿರಿ" ಎಂದು ಹೇಳಿದರು. ತಲೆಯ ಮೇಲಿನ ಬಟ್ಟೆ ಕಡ್ಡಾಯವಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಮುಂದೆ ಪುರೋಹಿತರು ಶರಿಯತ್ ಕಾನೂನನ್ನು ರಚಿಸುವಾಗ ಸ್ತ್ರೀಯರ ಸೌಂದರ್ಯ ಆಕೆಯ ತಲೆಗೂದಲಲ್ಲೂ ಅಡಗಿದೆಯೆಂದು ತೀರ್ಮಾನಿಸಿ ಸ್ತ್ರೀಯರು ತಮ್ಮ ತಲೆಗೂದಲನ್ನೂ ಕೂಡಾ ಮರೆಮಾಡಿಕೊಳ್ಳಬೇಕೆಂಬ ನಿಯಮವನ್ನು ಜಾರಿಗೆ ತಂದಿರಬಹುದು. ಆದರೆ ಸ್ತ್ರೀಯರ ಕಣ್ಣೂ ಕೂಡಾ ಸುಂದರವಾಗಿಯೇ ಇರುತ್ತದೆಯೆಂದು ಕಣ್ಣಿಗೂ ಗಾಂಧಾರಿಯಂತೆ ಬಟ್ಟೆ ಕಟ್ಟಿಕೊಳ್ಳಬೇಕೆಂದು ಮಾತ್ರ ಹೇಳಲಿಲ್ಲ! ಗಂಡನ ಚಾಕರಿ ಮಾಡಲು ಮಹಿಳೆಯರಿಗೆ ಕಣ್ಣು ಸಮನಾಗಿ ಕಾಣಿಸಲೇಬೇಕಲ್ಲ? ಇತ್ತೀಚೆಗೆ ಕಣ್ಣುಗಳ ರೆಪ್ಪೆಯವರೆಗೂ ಕಟ್ಟಿಕೊಳ್ಳಬೇಕೆಂದು ಹೆಣ್ಣುಮಕ್ಕಳನ್ನು ಒತ್ತಾಯಿಸಲಾಗುತ್ತಿದೆ. ಇದು ಕಳೆದ ಹತ್ತು ವರ್ಷಗಳಿಂದಾದ ಬೆಳವಣಿಗೆ. ಹಜ್ ಯಾತ್ರೆಗೆ ಹೋಗುವ ಮಹಿಳೆಯರು ಮುಖವನ್ನು ಮರೆ ಮಾಡಲೇಬಾರದು ಎಂಬುದೂ ಕೂಡಾ ಕಡ್ಡಾಯವಾಗಿದೆ!

ಮಹಿಳೆಯರಿಗೆ ಶಿಕ್ಷಣವೂ ಬೇಕಾಗಿಲ್ಲ ಎಂದೇ ಪುರೋಹಿತರು ಬೋಧಿಸುತ್ತಿದ್ದರು. ಹೆಣ್ಣುಗಂಡುಗಳೆಲ್ಲರೂ ಶಿಕ್ಷಣಕ್ಕಾಗಿ ಚೀನಾದವರೆಗೆ ಪ್ರಯಾಣ ಮಾಡಿ ಶಿಕ್ಷಣ ಪಡೆಯಬೇಕೆಂಬುದು ಪ್ರವಾದಿಗಳ ಬೋಧನೆಯಾಗಿತ್ತು, ಈ ಬೋಧನೆಯನ್ನು ಹೆಣ್ಣುಮಕ್ಕಳಿಂದ ಮರೆಮಾಚಲಾಗಿತ್ತು. 1940 ರ ದಶಕದಲ್ಲೇ ಕೇರಳದಲ್ಲಿ ಮುಸ್ಲಿಂ ಹೆಣ್ಣುಮಕ್ಕಳು ಶಾಲೆ ಪ್ರವೇಶಿಸಿದರು. (ಸರ್ ಸಯ್ಯದ್ ಸಹೋದರರ ಪ್ರಭಾವವಿರಬಹುದು). ತಿರುವನಂತಪುರದ ಫಾತಿಮಾ ಬೀವಿ ಎಂಬವರು ಶಾಲೆ ಪ್ರವೇಶಿಸಿ ನ್ಯಾಯವಾದಿಗಳಾಗಿ, ಸುಪ್ರೀಂಕೋರ್ಟಿನಲ್ಲಿ ನ್ಯಾಯಾಧೀಶೆಯಾಗಿ ಬಳಿಕ ತಮಿಳ್ನಾಡಿನ ರಾಜ್ಯಪಾಲರಾಗಿ ನಿವೃತ್ತರಾಗುವವರೆಗೂ ನಮ್ಮ ಜಿಲ್ಲೆಯ ಗ್ರಾಮಾಂತರ ಪ್ರದೇಶದ ಮುಸ್ಲಿಂ ಹೆಣ್ಣುಮಕ್ಕಳು ಶಾಲೆಯ ಮುಖ ನೋಡಿದ್ದೇ ಅಪರೂಪವೆಂಬಂತಾಗಿತ್ತು, ಈ ಶತಮಾನದ ಆರಂಭದಲ್ಲಷ್ಟೇ ಈ ಹೆಣ್ಣುಮಕ್ಕಳು ಕಾಲೇಜಿನ ಮುಖ ಕಾಣತೊಡಗಿದರು. ಹೆಣ್ಣುಮಕ್ಕಳು ಮನೆಯಿಂದ ಹೊರಬರಲಾರಂಭಿಸಿದೊಡನೆ ಅವರ ಮೇಲೆ ಹಲವು ವಿಧದ ನಿರ್ಬಂಧಗಳನ್ನೂ ಹೇರಲಾಯಿತು. ಅದರ ಪರಿಣಾಮವಾಗಿ ಕಣ್ಣುಗಳನ್ನು ಹೊರತುಪಡಿಸಿ, ತಲೆ ಹಾಗೂ ಮುಖವನ್ನೂ ಮರೆಮಾಡುವಂತಹ ವಸ್ತ್ರಧಾರಣೆಯನ್ನು ಕಡ್ಡಾಯಗೊಳಿಸಲಾರಂಭಿಸಲಾಯಿತು. ಕೇರಳದಲ್ಲಿ ಯಾವ ಶಾಲೆ, ಕಾಲೇಜುಗಳಲ್ಲೂ ಈ ಬಗೆಯ ಘರ್ಷಣೆ ಪ್ರಾರಂಭವಾಗಿಲ್ಲ, ಬುರ್ಖಾ ಹಾಕಲು ಊರವರು ಒತ್ತಾಯ ಮಾಡಿದರೆಂದು ಅವರ ವಿರುದ್ಧ ಹೆಣ್ಣುಮಗಳೋರ್ವಳು ಕೇರಳದ ಹೈಕೋರ್ಟ್ ಮೆಟ್ಟಿಲೇರಿದ್ದು ಉಲ್ಲೇಖಾರ್ಹವಾಗಿದೆ. ನ್ಯಾಯಾಲಯ ಆಕೆಗೆ ಪೊಲೀಸ್ ರಕ್ಷಣೆಯನ್ನೂ ನೀಡಿತ್ತು!

ಹೆಣ್ಣುಮಕ್ಕಳು ಮತ್ತು ಅವರ ಹೆತ್ತವರು ಕೆಲವು ವಿಷಯಗಳೆಡೆಗೆ ಗಮನ ಹರಿಸಬೇಕು. ಇಂದಿನ ದಿನಗಳಲ್ಲಿ ವೈವಾಹಿಕ ಬದುಕು ಖಾಯಂ ಅಲ್ಲ. ಸುಲಭದ ವಿವಾಹ ವಿಚ್ಛೇದನ ಪದ್ಧತಿ ಮತ್ತು ಬಹುಪತ್ನಿತ್ವ ಪದ್ಧತಿಯಿಂದಾಗಿ ಮುಸ್ಲಿಂ ಹೆಣ್ಣು ಮಕ್ಕಳು ಕೆಲವೊಮ್ಮೆ ಬಹಳ ತೊಂದರೆಗೊಳಗಾಗುತ್ತಾರೆ. ಹೀಗಾಗಿ ಹೆಣ್ಣು ಮಕ್ಕಳು ಆರ್ಥಿಕ ಸ್ವಾವಲಂಬನೆಯ ಹಾದಿ ಕಂಡುಕೊಳ್ಳುವುದು ಬಹಳ ಮುಖ್ಯವಾಗಿದೆ. ಸಮನಾದ ಶಿಕ್ಷಣ ಮತ್ತು ಪದವಿ ಇದ್ದರೆ ಮಾತ್ರ ಏನಾದರೊಂದು ಉದ್ಯೋಗ ದೊರೆತು ಆರ್ಥಿಕವಾಗಿ ಸದೃಢರಾಗಲು ಸಾಧ್ಯ. ಹೀಗಾಗಿ ಹೆಣ್ಣುಮಕ್ಕಳು ಶಿಕ್ಷಣಕ್ಕೆ ಆದ್ಯತೆ ನೀಡಬೇಕೇ ಹೊರತು ಮುಷ್ಕರ, ಬಂದ್ ಮುಂತಾದ ವಿಷಯಗಳೆಡೆಗೆ ಗಮನಹರಿಸಿ ತಮ್ಮ ಭವಿಷ್ಯದನ್ನು ತಾವೇ ಚಿವುಟಿ ಹಾಕುವುದು ಒಳ್ಳೆಯ ಕ್ರಮವಲ್ಲ.

ಸ್ಕಾರ್ಫ್, ಬುರ್ಖಾ ಮುಂತಾದ ವಿಷಯಗಳ ಕುರಿತು ಚಿಂತಿಸದೆ ಕಾಸರಗೋಡಿನ ಮುಸ್ಲಿಂ ಕುಟುಂಬದ ಹೆಣ್ಣು ಮಗಳೋರ್ವಳು ದೆಹಲಿಯಲ್ಲಿ ಅತ್ಯುತ್ತಮ ಶಿಕ್ಷಣ ಪಡೆದು ಯುಪಿಎಸ್‌ಸಿ ಪರೀಕ್ಷೆಗೆ ಕುಳಿತು ಪ್ರಥಮ 100 ರ್‍ಯಾಂಕ್‌ನ ಒಳಗಿನ ಶ್ರೇಣಿಯಲ್ಲಿ ತೇರ್ಗಡೆಯಾಗಿ ಐಎಫ್‌ಎಸ್ ಪದವಿ ಪಡೆದು ವಿದೇಶ ವ್ಯವಹಾರ ಇಲಾಖೆ (External Affairs Ministry) ಸೇರಿಕೊಂಡಳು. ಅವಳು ಕಳೆದ 20 ವರ್ಷಗಳಿಂದ ಈ ಇಲಾಖೆಯಲ್ಲಿದ್ದು ಫ್ರಾನ್ಸ್, ನೇಪಾಳ, ಶ್ರೀಲಂಕಾ ದೇಶಗಳಲ್ಲಿ ಇಂಡಿಯಾದ ದೂತಾವಾಸಗಳಲ್ಲಿ ಸೇವೆ ಸಲ್ಲಿಸಿದ್ದು ಈಗ ಎರಡು ವರ್ಷಗಳಿಂದ ಥಾಯ್‌ಲ್ಯಾಂಡಿನ ಬ್ಯಾಂಕಾಕ್‌ನಲ್ಲಿ ಇಂಡಿಯಾದ ದೂತಾವಾಸದಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಳೆ.





ಈಗ ಆಕೆಗೆ ಪ್ರಮೋಷನ್ ಆಗಿ ಮುಂದಿನ ತಿಂಗಳು ಟ್ಯುನಿಷಿಯಾ ದೇಶಕ್ಕೆ ಭಾರತದ ರಾಯಭಾರಿಯಾಗಿ ಹೋಗಲಿದ್ದಾಳೆ. ಈಕೆಯ ಹೆಸರು ಫಾತಿಮ್ಮಾ ನಗ್ಮಾ ಎಂದಿದ್ದು ಫರೀದ್ ಮಲಿಕ್ ಎಂಬವರು ಈಕೆಯ ಗಂಡನಾಗಿದ್ದು ಇಬ್ಬರು ಮಕ್ಕಳ ತಾಯಿಯೂ ಆಗಿದ್ದಾಳೆ. ಇವಳ ತಂದೆ (ನನ್ನ ಹಿರಿಯ ಅಣ್ಣ) ಮುಹಮ್ಮದ್ ಎಂಬವರು ದೆಹಲಿಯಲ್ಲಿ ಇಂಜಿನಿಯರ್ ಆಗಿದ್ದು ಈಗ ನಿವೃತ್ತರಾಗಿದ್ದಾರೆ. ನಮ್ಮ ಹೆಣ್ಣುಮಕ್ಕಳ ಮೇಲೆ ಏನೇನೊ ನಿರ್ಬಂಧಗಳನ್ನು ಹೇರದೆ ಉತ್ತಮ ಶಿಕ್ಷಣ ನೀಡಿ ಸಮನಾಗಿ ಮಾರ್ಗದರ್ಶನ ಮಾಡಿದರೆ ಅವರು ಯಾವ ಎತ್ತರಕ್ಕೂ ಏರಬಲ್ಲರು ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ. ನಮ್ಮ ದೇಶದಿಂದ ಭಾರತದ ರಾಯಭಾರಿಯಾಗಿ (Ambassador) ವಿದೇಶಕ್ಕೆ ಹೋಗುತ್ತಿರುವ ಪ್ರಥಮ ಮುಸ್ಲಿಂ ಮಹಿಳೆ ಎಂಬ ಹೆಸರು ಪಡೆದಿದ್ದಾಳೆ. ಇವಳಿಗಿನ್ನೂ 44 ವರ್ಷ ಪ್ರಾಯ. ನನ್ನ ಮೊಮ್ಮಗಳು ಇಂಜಿನಿಯರಿಂಗ್ ಪದವಿ ಪಡೆದು ಈಗ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಾಕ್ಕೆ ಹೋಗಿದ್ದಾಳೆ. ಕ್ಷುಲ್ಲಕ ಕಾರಣ ನೀಡಿ ಮುಷ್ಕರ, ಬಂದ್‌ಗಳೆಡೆಗೆ ಗಮನಹರಿಸುವುದಕ್ಕಿಂತ ಇಂತಹ ಕನಸುಗಳನ್ನಿಟ್ಟುಕೊಂಡು ಭವಿಷ್ಯದ ಕುರಿತು ನಮ್ಮ ಹೆಣ್ಣುಮಕ್ಕಳು ಚಿಂತಿಸಲಿ ಎಂಬುದಕ್ಕಾಗಿ ಈ ವಿಷಯಗಳನ್ನು ಬರೆದೆ.

ಪ್ರವಾದಿಗಳು ಬೋಧಿಸಿದ ಯಾವ ನಿಯಮವೂ ಇಂದು ಸಮನಾದ ರೀತಿಯಲ್ಲಿ ಅನುಷ್ಠಾನದಲ್ಲಿಲ್ಲ ಅಥವಾ ಅವರು ಬೋಧಿಸಿದ ನಿಯಮಗಳಿಗೂ ಈಗ ಬಳಕೆಯಲ್ಲಿರುವ ನಿಯಮಗಳಿಗೂ ಸಂಬಂಧವೇ ಇಲ್ಲದಂತಾಗಿದೆ. ಪ್ರವಾದಿಗಳ ಬೋಧನೆ (ಕುರಾನ್ ವಾಕ್ಯಗಳು) ಅವರ ನಡವಳಿಕೆ ಹಾಗೂ ಅವರೊಡನೆ ನಡೆದ ಪ್ರಶ್ನೋತ್ತರಗಳನ್ನೆತ್ತಿಕೊಂಡು ಶರಿಯತ್ (ಧಾರ್ಮಿಕ) ನಿಯಮಗಳನ್ನು ರಚಿಸಲಾಗಿದೆ. "ಹದೀಸ್" ಎಂಬ ಈ ಪ್ರಶ್ನೋತ್ತ... ಪ್ರವಾದಿಗಳ ಮರಣಾನಂತರ ಸುಮಾರು ಇನ್ನೂರು ಅಥವಾ ಇನ್ನೂ... ವರ್ಷಗಳ ಬಳಿಕ ರಚಿಸಲಾಗಿದೆ. ರಷ್ಯಾ ದೇಶದ ಬುಖಾರಾ ಎಂ... ಬುಖಾರಿ ಎಂಬವರು (9 ನೇ ಶತಮಾನದಲ್ಲಿ ಹುಟ್ಟಿದವರು) ಮೆಕ್ಕಾ... ಮದೀನಾ ನಗರಗಳಿಗೆ ಬಂದು ಪ್ರವಾದಿಗಳು ಜನಸಾಮಾನ್ಯರೊಡನೆ... ಪ್ರಶ್ನೋತ್ತರಗಳನ್ನು ದಾಖಲಿಸಿಕೊಂಡರು. ಅಂದರೆ ಪ್ರವಾದಿಗಳ ... ಬದುಕಿದ್ದವರ ಸುಮಾರು ಏಳೆಂಟು ತಲೆಮಾರುಗಳ ಬಳಿಕ ಹುಟ್ಟಿದವ... ಈ ಪ್ರಶ್ನೋತ್ತರಗಳನ್ನು ನಡೆಸಲಾಗಿದೆ! ಈ ಪ್ರಶ್ನೋತ್ತರಗಳ ವಿಶ್ವಾಸಾರ್ಹ... ಇಂದಿನವರು ಪ್ರಶ್ನಿಸಲಾರಂಭಿಸಿದ್ದಾರೆ.

ಹೆಣ್ಣುಮಕ್ಕಳಿಗೆ ಪ್ರವಾದಿಯವರು ನೀಡಿದ ಹಲವು ಸೌಲಭ್ಯಗಳ... ಮಾಡಲಾಗಿದೆ. ಹೆತ್ತವರ ಆಸ್ತಿಯಲ್ಲಿ ಗಂಡುಮಕ್ಕಳಿಗೆ ಎರಡು ಪಾ... ಹೆಣ್ಣುಮಕ್ಕಳಿಗೆ ಒಂದು ಪಾಲು ನೀಡಬೇಕೆಂಬುದು ಧಾರ್ಮಿಕ ನಿ... ಆದರೆ ಇಂದು ಎಷ್ಟು ಜನ ಹೆತ್ತವರು ಕಡ್ಡಾಯವಾದ ಈ ನಿಯಮ... ಪಾಲಿಸುತ್ತಾರೆ? ಅದ್ದೂರಿಯಾಗಿ ಹೆಣ್ಣುಮಕ್ಕಳ ಮದುವೆ ಮಾಡಿ ಕೈತೊ... ಕೊಂಡು ಉಳಿದುದೆಲ್ಲವನ್ನೂ ಗಂಡು ಮಕ್ಕಳಿಗೆ ನೋಂದಣಿ ಮಾಡ... ತಂದೆಯೋರ್ವನು ಬದುಕಿದ್ದು ಮದುವೆಯಾಗಿ ಹೆಂಡತಿ ಮಕ್ಕಳಿರುವ ... ಮೃತಪಟ್ಟರೆ ಆ ಸೊಸೆ ಮತ್ತು ಮೊಮ್ಮಕ್ಕಳು ಅನಾಥರಾಗಿ ... ಸೇರಬೇಕಾಗುತ್ತದೆ. ಈ ಅಜ್ಜನ ಆಸ್ತಿಯಿಂದ ಯಾವ ಪಾಲೂ ದೊರೆ...

ವಿಚ್ಛೇದಿತ ಮಹಿಳೆಗೆ ಮತಾಃ (ಆಕೆಯ ಮುಂದಿನ ಬ... ತೊಂದರೆಯಾಗದಂತೆ ಒಂದೇ ಮೊತ್ತದಲ್ಲಿ ಜೀವನಾಂಶ ನೀಡುವುದು) ನೀ... ಎಂಬುದು ಕುರಾನ್ ವಾಕ್ಯ (2:240) ಆದರೆ ಪುರುಷ ಪ್ರಧಾನ ... ಜಾರಿಗೆ ತಂದ ಹೊಸ ನಿಯಮ (ವಿಚ್ಛೇದಿತ ಮುಸ್ಲಿಂ ಮಹಿಳೆಯರ ... ರಕ್ಷಣಾ ಮಸೂದೆ)ದಲ್ಲಿ ಈ ವಾಕ್ಯವನ್ನು ಉದ್ದೇಶಪೂರ್ವಕವಾ... ಮರೆಮಾಚಲಾಗಿದೆ. ಗಂಡನೋರ್ವನು ಎರಡನೇ ಮದುವೆಯಾಗಬೇಕಾ... ಮೊದಲ ಹೆಂಡತಿಯ ಅನುಮತಿ ಪಡೆಯಬೇಕೆಂಬುದು ಧಾರ್ಮಿಕ ನಿ... ಹೆಂಡತಿಗೆ ತಲಾಖ್ ನೀಡಬೇಕಾದರೂ ಎಷ್ಟೋ ನಿಯಮಗಳೂ ನಿರ್ಬಂಧ... ಇವೆ. ಆದರೆ ಇಂದು ಇಂತಹ ಯಾವ ನಿಯಮವನ್ನಾ... ಪಾಲಿಸಲಾಗುತ್ತಿದೆಯೇ? ಯಾವುದೋ ಒಂದು ಬೇನಾಮಿ ಪತ್ರ ದೊರೆತ... ಮುಂಬೈಯಿಂದಲೋ, ಕೊಲ್ಲಿಯಿಂದಲೋ ಹೆಂಡತಿಗೆ ತಲಾಖ್ ಕಳುಹಿ... ಹೆಣ್ಣು ಬಾಳು ಪೂರ್ತಿ ನರಳುವಂತೆ ಮಾಡಲಾಗುತ್ತದೆ.

ಹೆಣ್ಣಿನ ಕುರಿತು ಪ್ರವಾದಿಗಳು ಎಷ್ಟೊಂದು ಉದಾರಿಗಳೂ, ಕ್ಷಮಾಶೀ... ಆಗಿದ್ದರೆಂಬುದಕ್ಕೆ ಒಂದೇ ಒಂದು ಉದಾಹರಣೆ ನೀಡು... ಹೆಂಡತಿಯೋರ್ವಳು ಗಂಡನನ್ನು ಬಿಟ್ಟು ಬೇರೊಬ್ಬ ಪುರುಷನೊಡನೆ ಹೋ... ಕೆಲವು ಸಮಯದ ಬಳಿಕ ಆಕೆ ತಪ್ಪೊಪ್ಪಿಕೊಂಡು ಬಂದು, ಮುಂದೆ... ಅಂತಹ ಅಪರಾಧವೆಸಗುವುದಿಲ್ಲವೆಂದು ಆ ಗಂಡನ ಕ್ಷಮೆ ಕೇಳಿದ... ಗಂಡನು ಆಕೆಯನ್ನು ಕ್ಷಮಿಸಿ, ಆಕೆಯನ್ನು ಮರಳಿ ಸ್ವೀಕರಿಸಬೇಕು. ಮಾತ್ರವಲ್ಲ ಮತ್ತೆಂದೂ ಆ ವಿಷಯವನ್ನೆತ್ತಿಕೊಂಡು ಆಕೆಯನ್ನು ನೋಯಿಸಬ... ಎಂಬುದು ಪ್ರವಾದಿಗಳು ಬೋಧಿಸಿದ ಧರ್ಮ, ಆದರೆ ಇಂದು ಏನಾಗು... ಮಹಿಳೆಯೋರ್ವಳು ವ್ಯಭಿಚಾರ ಮಾಡಿದಳೆಂದು ಆಕೆಯನ್ನು ನಡುಬೀದಿ... ಗುಂಡಿಟ್ಟು ಕೊಲ್ಲಲಾಗುತ್ತದೆ! ಪ್ರವಾದಿಗಳು ತೋರಿದ ಮಾನವೀಯತೆ ಎಲ್ಲಾ... ಕಾಣಸುತ್ತಿದೆಯೇ?

ಪ್ರವಾದಿವರ್ಯರು ಮಹಿಳೆಯರಿಗೆ ನೀಡಿದ ಈ ಎಲ್ಲಾ ಸೌಲಭ್ಯಗಳ... ಹೋರಾಡದೆ ಕಡ್ಡಾಯವಲ್ಲದ ಸ್ಕಾರ್ಫ್ ಧರಿಸಲು ಅನುಮತಿ ನೀಡಬೇ... ಮುಷ್ಕರ, ಪ್ರತಿಭಟನೆ ಮಾಡುವುದು ಎಷ್ಟು ಉಚಿತವೆಂದು ಎಲ್ಲ ಹೆಣ್ಣುಮ... ಚಿಂತಿಸಬೇಕು. ತಲೆಯ ಮೇಲೆ ಬಟ್ಟೆ ಇರಲೇಬೇಕೆಂದರೆ ಕೇರಳೀಯ... ಸೀರೆಯ ಸೆರಗನ್ನು ತಲೆಯ ಮೇಲೆ ಎಳೆದುಕೊಳ್ಳಬಹುದು. ಅಥವಾ ಚೂಡಿ... ಶಾಲನ್ನೂ ತಲೆಯ ಮೇಲೆಳೆದುಕೊಳ್ಳಬಹುದು. ಇಂಡಿಯಾದ ಸೀರೆ ಹ... ಚೂಡಿದಾರ್ ಎಲ್ಲ ರೀತಿಯಿಂದಲೂ ಮಹಿಳೆಯ ದೇಹಕ್ಕೆ ರಕ್ಷಣೆ ನೀಡುವ... ಸಭ್ಯ ಉಡುಗೆಯಾಗಿದೆ.

ಇತ್ತೀಚೆಗೆ ಮಲಯಾಳದಲ್ಲಿ ಗದ್ದಾಮ (ಗುಲಾಮ) ಎಂಬ ಸಿ... ಬಂದಿದೆ. ಸಾಧ್ಯವಾದರೆ ಎಲ್ಲರೂ ಆ ಚಿತ್ರವನ್ನೊಮ್ಮೆ ನೋಡಬೇಕು. ಪ್ರವಾದಿ... ಹುಟ್ಟಿ ಇಸ್ಲಾಂ ಧರ್ಮ ಬೋಧಿಸಿದ ಅರೇಬಿಯಾ ದೇಶದಲ್ಲಿ ಇಂದು ... ದೇಶದಿಂದ ಮನೆಗೆಲಸಕ್ಕೆ ಹೋಗುತ್ತಿರುವ ಮಹಿಳೆಯರ ಬದುಕು ಏನ... ಎಂಬುದನ್ನು ನೋಡಿರಿ. ನನ್ನ 'ಮುಂಬೆಳಕು' ಎಂಬ ಅನುವಾದಿತ ಕೃತಿಯ... ಇಂತಹ ಕೆಲವು ಚಿತ್ರಣಗಳಿವೆ.

● ಸಾರಾ ಅಬೂಬಕ...

ೀವಾದಕ್ಕೆ ಮಂಜುಳಾ ಒಂದು ಕಳಂಕ

ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇ'ನಲ್ಲಿ ಹುಟ್ಟು ಹಬ್ಬಾಚರಣೆಯಲ್ಲಿ ಇದ್ದ ಯುವಪೀಳಿಗೆಯನ್ನು ಜಾಗರಣಾ ವೇದಿಕೆಯ ಸದಸ್ಯರು ಹಿಗ್ಗಾಮುಗ್ಗ . ಅವಾಚ್ಯ ಪದಗಳಿಂದ ನಿಂದಿಸಿ, ಅವರ ನ್ನೆಲ್ಲ ಕಿತ್ತಾಡಿ. ನಾಗರಿಕ ಜನತೆ ಅಪಮಾನದಿಂದ ನತೆ ಮಾಡಿದ ಘಟನೆಗೆ ಒಂದು ವಾರ ತುಂಬುತ್ತ ಕೋವಿನ ಅಂಧಕಾರದೊಳಗೂ ಒಂದು ಬೆಳಕಿನ ಸ್ಥಳೀಯ ಯುವಪೀಳಿಗೆ ತುಂಬ ಸ್ಪಷ್ಟವಾಗಿ ಟ್ಟಿಯಾಗಿ ಸಂಸ್ಕೃತಿ ರಕ್ಷಕರೆಂಬ ಜಾಗರಣಾ ಗೂಂಡಾಗಳ ವಿರುದ್ಧ ದನಿ ಎತ್ತಿದ್ದಾರೆ. ಕ ಮತ್ತು ಬಹಿರಂಗ ಸಭೆಗಳು ಜರುಗದಂತೆ ಇಲಾಖೆ ಸೆಕ್ಷನ್ ಜಾರಿಗೆ ತಂದು ಸಾರ್ವಜನಿಕರನ್ನು ದರೂ, ವಿದ್ಯಾರ್ಥಿಗಳ ಸಮೂಹ ತಮ್ಮತಮ್ಮ ಗಳ ಆವರಣದೊಳಗೇ ಪ್ರತಿಭಟನೆ ತೋರಿದ್ದಾರೆ. ಕರು ಕೂಡ ಮೈಚಳಿ ಬಿಟ್ಟವರಂತೆ ಯುವದನಿಗೆ ನಿಗಳನ್ನು ಜೋಡಿಸಿದ್ದಾರೆ. ಆಘಾತ ಮತ್ತು ಕ್ಕೆ ಒಳಗಾದ ಯುವಜನತೆಯ ಹೆತ್ತವರು ಕೆಲವ ಮಾಧ್ಯಮಗಳ ಮುಂದೆ ತಮ್ಮ ಅಳಲು, ಆಕ್ರೋಶ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇಷ್ಟೆಲ್ಲ ಪುಟ್ಟಪುಟ್ಟ ಏಳಲು ಕಾರಣವೂ ಇದೆ. ಜನರ ಖಾಸಗಿ ಮೇಲೆ, ಚಲನ-ವಲನಗಳ ಮೇಲೆ, ಇಷ್ಟಾನಿಷ್ಟಗಳ ಆಹಾರ-ಪಾನೀಯಗಳ ಕುರಿತು, ಉಡುಗೆ- ಕ ನೆಪದಲ್ಲಿ ಹಲ್ಲೆ ನಡೆಸುವುದು ತಮ್ಮ ಆಜನ್ಮಸಿದ್ಧ ಬ ತಲೆತಿರುಕ ಜನರ ಗುಂಪು ಕ್ರಿಯಾಶೀಲ ದು ಈ ಅವಳಿ ಜಿಲ್ಲೆಯಲ್ಲಿ ಮಾತ್ರ ಎನಿಸುತ್ತದೆ.

ಅವಿಭಜಿತ ದಕ್ಷಿಣಕನ್ನಡ ಜಿಲ್ಲೆ ಹೀಗಿತ್ತೇ?


ಸು ನಾವು ಎಳೆಯರು ದಕ್ಷಿಣ ಕನ್ನಡದ ಕುರಿತು ಕರ್ನಾಟಕದಲ್ಲಿ ರಾಯಭಾರಿಗಳ ಹಾಗೆ ಕೆಲಸ ದ್ದೆವು. "ಅಲ್ಲಿ ಕಳ್ಳರೇ ಇಲ್ಲ. ಮನೆಬಾಗಿಲಿಗೆ ಚಿಲಕ ೇ ಮಲಗಿದರೂ ಏನೂ ಆಗಲ್ಲ. ಮನೆಯಂಗಳ ತಹ ಬೆಲೆಬಾಳುವ ವಸ್ತುಗಳಿದ್ದರೂ, ಕದಿಯುವ ಕದಿಯುವುದು ಅಪಮಾನವೆಂಬ ಸ್ವಾಭಿಮಾನಿ ಇನ್ನು ರಾತ್ರಿ-ಅಪರಾತ್ರಿ ಎಷ್ಟು ಹೊತ್ತಿಗೂ ಗಳಲ್ಲಿ ನಿರ್ಭಯವಾಗಿ ಜನರು ಓಡಾಡಬಹುದು. ಹೆಣ್ಣುಮಕ್ಕಳು ಕೆಲಸದ ನಿಮಿತ್ತ ಒಬ್ಬೊಬ್ಬರೇ ವ ಸೊಗಸು ನೀವು ನೋಡಿ ಬದಲಾಗಬೇಕು. ಖಾಸಗಿ ಬದುಕಿನಲ್ಲಿ ನಿಮ್ಮಂತೆ ಅನಗತ್ಯ ರಿಸಿ, ಉಪದೇಶ ಮಾಡೋದೋ, ಬ ಹೆಗ್ಗಳಿಕೆ ಮೆರೆಯೋದೋ ಇಲ್ಲವೇ" ಹೀಗೆ ಹತ್ತಾರು ವಿಚಾರಗಳ ಕುರಿತು ಕನ್ನಡದ ಜನರ ಬದುಕನ್ನು ಉತ್ತರ ಕಡೆ ಮಂದಿಗೆ ಹೆಮ್ಮೆಯಿಂದ ದ್ದೆವು; ಅವರ ಬೆರಗುಗಣ್ಣು ಕಂಡು ಸುತ್ತಿದ್ದೆವು.

ಅದೇ ದಕ್ಷಿಣ ಕನ್ನಡದವರು ನಾವು ದನಿಯೇ ಏಳುವುದಿಲ್ಲ. ಹಾಗೆ ಹೇಳಿ ಬವರೆಲ್ಲ "ಓ....ಆ ಕೋಮು ಗಲಭೆಗಳ ಇದ್ದೀರಾ? ನಿಮ್ಮಲ್ಲಿ ಹುಡುಗ-ಹುಡುಗಿ ಗಿ ಮಾತನಾಡುವಂತಿಲ್ಲವಂತೆ ಹೌದಾ? ಒಟ್ಟಾಗಿ ೋ ಹೋಟೆಲಿಗೋ ಕೊನೆಗೆ ಕಾಲೇಜನ್ನು ಲು ಪರ ಊರಿಗೆ ಹೋದದ್ದು ಕಂಡರೆ ಅವರ ಹಲ್ಲೆ ನಡೆಸುತ್ತಾರಂತೆ ಹೌದಾ? ಅದು ಹ್ಯಾಗೆ ರಿ, ಇದ್ದು ಬದುಕಿದ್ದೀರಿ" ಎಂದು ಕೇಳಿಯಾರೋ ಗಿಲು ಈಗ ನನ್ನನ್ನು ಕಾಡುತ್ತದೆ.

ಜಿಲ್ಲೆಯಲ್ಲಿ ಕೋಮುಸೂಕ್ಷ್ಮ ಪ್ರದೇಶಗಳು ಟ್ಟಿನಂತೆ ಅಲ್ಲೊಂದು ಇಲ್ಲೊಂದು ಇದ್ದ ಕಾಲ ಸಹಜ ಜನಜೀವನದ ತಾಣಗಳು ಅಷ್ಟು ಲ್ಲವೇನೋ ಎಂಬ ಭುಗಿಲು ಮನಸ್ಸನ್ನು ೂಡಿದೆ. 2009ರಲ್ಲಿ ಅಮ್ನೇಶಿಯಾ ಪಬ್ ಮೇಲೆ ದಾಳಿ, ಯುವಜನತೆಯ ಭಾವನೆ, ಕನಸು, ಸ್ವಾತಂತ್ರ ಹಾಸಗಳನ್ನು ಹೊಸಕಿಹಾಕಿದ ಘಟನೆ ಇನ್ನೂ ತಿಯಿಂದ ಮರೆಯಾಗಿಲ್ಲ. ಆ ದುಷ್ಕೃತ್ಯ ಎಸಗಿದವರು ವಾಗಿ ತಿರುಗಾಡುತ್ತಿದ್ದಾರೆ. ಅದರಲ್ಲಿ ಾರಿಯೂ ಪ್ರಧಾನ ಪಾತ್ರಧಾರಿಯೂ ಆಗಿದ್ದ ಪಟೀಲ್ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇ ದಾಳಿಯ ನೇತೃತ್ವ ವಹಿಸಿದ್ದಾನೆ. ಅಂದು ಸೆಗೆ ತನ್ನನ್ನು ಉಳಿಸಿಕೊಳ್ಳಲು ಆತನನ್ನು ತನ್ನ ಯಿಂದ ಒದ್ದರೆ, ಹಿಂದೂ ಜಾಗರಣ ವೇದಿಕೆ ದು ಆತ ಅದನ್ನೇ ಮುಂದುವರಿಸಿದ್ದಾನೆ. ಇನ್ನು ನಾರು ಒದ್ದರ ಮತ್ತೊಂದು ಬಲಪಂಥೀಯ ದ ಕೊಂಬೆಯಲ್ಲಿ ಸೇರಾದಿ ದುರ್ಘಟನ ಸುವುದರಲ್ಲಿ ಇಲ್ಲಿನ ನಾಗರಿಕರಿಗೆ ಅವಮಾನವೇ



ಪ್ರೇಮಿಗಳ ದಿನಾಚರಣೆ ಬಂತೆಂದರೆ ಒಂದು ಕಿಸೆಯಲ್ಲಿ ತಾಳಿ ಇನ್ನೊಂದರಲ್ಲಿ ರಾಖಿ ಹಿಡಿದು ತಿರುಗುವ ಸಂಸ್ಕೃತಿ ರಕ್ಷಕರ ಪಡೆ, ಹುಡುಗ-ಹುಡುಗಿಯರು ಜೊತೆಯಾಗಿ ನಕ್ಕುನಲಿದರೆ ಅವರ ಕುಲ-ಗೋತ್ರ ಪತ್ತೆಹಚ್ಚಿ ಅವರನ್ನು ಚೆಂಡಾಡುವ ಪಡೆ, ಬೀದಿಯಲ್ಲೂ ಬೇಡ, ಹೋಟೆಲ್ಲೂ ಬೇಡ, ಖಾಸಗಿ ಆವರಣದಲ್ಲಿ ಆಚರಿಸೋಣವೆಂದರೆ, ಅಲ್ಲಿಗೂ ಬೆಂಬಿಡದ ಬೇತಾಳನಂತೆ ನುಗ್ಗಿ ದುಂಡಾವರ್ತಿ ಮತ್ತು ಪೈಶಾಚಿಕತೆ ಮೆರೆಯುವ ಪಡೆ-ಒಂದೇ ಎರಡೇ? ಎಲ್ಲಿಗೆ ಬಂತು ಯಾರಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ಎಂದು ದಮನಿತರ ಪರವಾಗಿ ನುಡಿದಂತೆ ಈಗ ಸಾರ್ವಜನಿಕರ ಪರವಾಗಿ ಯುವಜನತೆಯ ಪರವಾಗಿ ಕೇಳಬೇಕಾಗಿದೆ. ಎಲ್ಲರೂ ಸಂಸ್ಕೃತಿ ರಕ್ಷಕರೆಂದು ಸ್ವಘೋಷಿತ ಸಂಸ್ಥೆಗಳನ್ನು ಮೊತ್ತಮೊದಲಾಗಿ ಕೇಳಬೇಕಾದ ಮತ್ತು ಕೇಳುವ ಪ್ರಶ್ನೆ-ವ್ಯಕ್ತಿಗಳ ಖಾಸಗಿ ಬದುಕಿನ ಮೇಲೆ ಹಲ್ಲೆ ನಡೆಸಲು ನೀವು ಯಾರು? ಅವರ ರೀತಿ-ರಿವಾಜುಗಳನ್ನು ನಿರ್ದೇಶಿಸಲು ನೀವು ಯಾರು? ಸಂವಿಧಾನದತ್ತವಾಗಿ ದೇಶದ ಪ್ರತಿಯೋರ್ವರ ಖಾಸಗಿ ಬದುಕನ್ನು ಸಾರ್ವಜನಿಕಗೊಳಿಸುವ ಅಧಿಕಾರ, ತನಗೆ ಸಂಬಂಧವೇ ಇಲ್ಲದ ವ್ಯಕ್ತಿ/ಗುಂಪಿನ ಮೇಲೆ ದೈಹಿಕ ಹಲ್ಲೆ ನಡೆಸುವ ಅಧಿಕಾರ ಯಾರಿಗೂ ಇಲ್ಲ. ಸಂಸ್ಕೃತಿ ರಕ್ಷಕರೆಂದೋ ನೈತಿಕ ಪೊಲೀಸರೆಂದೋ





ಕರೆಯುತ್ತಿರುವ ಈ ಗುಂಪಿನ ದುರ್ವರ್ತನೆ ನಮ್ಮನ್ನು ಮಾತ್ರವಲ್ಲ, ರಾಜ್ಯಮಟ್ಟದಲ್ಲಿ ನಾವು, ದೇಶದ ಮಟ್ಟದಲ್ಲಿ ಕರ್ನಾಟಕವೂ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಇಡೀ ದೇಶವೇ ಲಜ್ಜೆಯಿಂದ ತಲೆತಗ್ಗಿಸುವಂತೆ ಮಾಡಿದೆ.

ಹಿಂಸೆ ಮತ್ತು ಕ್ರೌರ್ಯಗಳು ಬಲಿಪಶುವಾದವರನ್ನು ಇಬ್ಬಗೆಯಲ್ಲಿ ಘಾಸಿಗೊಳಿಸುತ್ತವೆ. ಒಂದು ದೈಹಿಕ ಹಿಂಸೆ. ಇದು ಕೆಲವೇ ಸಮಯದಲ್ಲಿ ವಾಸಿಯಾಗಬಹುದು. ಒಂದಿಷ್ಟು ಕಲೆಗಳು ಉಳಿದರೆ ಕಹಿನೆನಪನ್ನು ಅಷ್ಟುಕಾಲ ಉಳಿಸಿಕೊಂಡೀತು. ಆದರೆ ಮಾನಸಿಕ ಹಿಂಸೆ ದೀರ್ಘಕಾಲೀನ ಪರಿಣಾಮವನ್ನು ಹೊಂದಿರುವಂಥದ್ದು. ಇಂಥ ಹಲ್ಲೆಗೆ ತುತ್ತಾದ ವ್ಯಕ್ತಿಗೆ ಮುಂದೆ ಚೇತರಿಸಿಕೊಳ್ಳಲು ಅಗಾಧವಾದ ಇಚ್ಛಾಶಕ್ತಿ ಮತ್ತು ಇತರರ ನೈತಿಕ ಬೆಂಬಲ ಅಗತ್ಯವಾಗಿರುತ್ತದೆ. ಅದೊಂದು ದಿನ ಕೋಮುಹಿಂಸೆಯ ಪರಿಣಾಮಗಳ ಕುರಿತು ತರಗತಿಯಲ್ಲಿ ಪ್ರಸ್ತಾಪಿಸುತ್ತಿದ್ದಂತೆ ಒಬ್ಬ ಹುಡುಗಿ ಥರಥರನೆ ನಡುಗತೊಡಗಿದಳು; ಅವಳ ನಿಯಂತ್ರಣ ಮೀರಿ ಬಿಕ್ಕು ಅವಳಿಂದ ಹೊರಚೆಲ್ಲಿತು. ಅವಳ ಸಹಪಾಠಿಗಳಿಗೆ ಅದು ವಿಚಿತ್ರವೆನಿಸಿದರೆ, ಅವಳಿಗೋ ಅದು ತನ್ನ ಬದುಕಿನಲ್ಲಿ ಮರೆಯಲು ಸಾಧ್ಯವಾಗದ ಕಹಿಘಟನೆಯಾಗಿತ್ತು. ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇನಲ್ಲಿ ನೈತಿಕ ಪೊಲೀಸರ ದಾಳಿಗೆ ಸಿಲುಕಿ ನಲುಗಿದ ಆ ತರುಣಿಯರ ಸ್ಥಿತಿಯನ್ನು ಒಂದಿಷ್ಟು ಚಿಂತಿಸಿದರೆ, ದನಿ ಉಡುಗುತ್ತದೆ. ಒಂದು ಪುಟ್ಟಮಗುವಿಗೂ ಅನ್ಯರ ಎದುರಲ್ಲಿ ಗದರಿದರೆ, ಆದರ ಸ್ವಾಭಿಮಾನಕ್ಕೆ ಪೆಟ್ಟಾದಂತೆ ಪ್ರತಿರೋಧ ತೋರುತ್ತದೆ. ಹೀಗಿರುವಾಗ, ನೈತಿಕ ಪೊಲೀಸರ ದಾಳಿಗೆ ಸಿಲುಕಿದವರ ಮನಃಸ್ಥಿತಿಯ ಸಂಕೀರ್ಣತೆಯನ್ನು ಅರ್ಥೈಸಿಕೊಳ್ಳಬೇಕಿದೆ.

ಈ ಘಟನೆ ಕೇವಲ ಅಲ್ಲಿನ್ನ ಯುವಪೀಳಿಗೆಯ ಸಮಸ್ಯೆಯಲ್ಲ; ಒಟ್ಟು ಯುವ ಜನಾಂಗದ ಮುಂದಿರುವ ಪ್ರಶ್ನೆ; ಒಟ್ಟು ಯುವ ಪೀಳಿಗೆಯ ಎಲ್ಲ ಹೆತ್ತವರನ್ನು ಕಾಡುತ್ತಿರುವ ಸಮಸ್ಯೆ. ಮತ್ತೆ ಅದೇ ಎದುರಾಗುವ ಪ್ರಶ್ನೆ-ನಮ್ಮ ಮಕ್ಕಳ ಮೇಲೆ ಕೈಮಾಡಲು, ಹಲ್ಲೆ ನಡೆಸಲು ಇವರ್‍ಯಾರು? ಪಿತೃಪ್ರಧಾನ ಸಮಾಜದಲ್ಲಿ ಪುರುಷರು ಎಲ್ಲೆಲ್ಲಿ ಕೀಳರಿಮೆಯಿಂದ ನರಳುತ್ತಾರೋ ಅಲ್ಲಲ್ಲಿ ಹಿಂಸೆಗಳು, ಕುಣಿದಾಡತೊಡಗುತ್ತವೆ. ಎಲ್ಲೆಲ್ಲಿ ಕ್ಷುದ್ರ ಮನಸ್ಸು ಮತ್ತು ಚಿಂತನೆಗಳು ಕೆಲಸವಿಲ್ಲದೆ ವರ್ಗವನ್ನು ಪ್ರವೇಶಿಸುತ್ತವೋ ಅಲ್ಲಿ ಕ್ರೌರ್ಯ ಹುಚ್ಚೆದ್ದು ಕುಣಿಯುತ್ತದೆ. ಅದರ ಫಲವನ್ನು ಈ ಜಿಲ್ಲೆಯಲ್ಲಿ ಬದುಕುತ್ತಿರುವ ತಪ್ಪಿಗೆ ನಾವು ನೋಡಬೇಕಿದೆ, ಉಣ್ಣಬೇಕಾಗಿದೆ.

ಇಡೀ ವಿದ್ಯಮಾನವನ್ನು ಸಂಪ್ರದಾಯವಾದಿಗಳು ಮತ್ತು ದಾಳಿಕೋರರು ನೋಡುತ್ತಿರುವ ಕ್ರಮವೂ ಚಿಂತನಾರ್ಹವಾಗಿದೆ. ಹೋಂ ಸ್ಟೇಗೆ ಲೈಸೆನ್ಸ್ ಇದೆಯಾ? ಅದರ ಬಾಡಿಗೆ ಎಷ್ಟು? ಅಷ್ಟು ಹಣ ತೆತ್ತು ಅಲ್ಲಿಗೆ ಯಾಕೆ ಹೋದರು? ಅಲ್ಲಿದ್ದವರು ನಿಜವಾಗಿಯೂ ಕಾಲೇಜು ವಿದ್ಯಾರ್ಥಿಗಳಾ? ಅಲ್ಲಿ ಏನೇನು ವಸ್ತುಗಳು ಸಿಕ್ಕಿದವು? ಅಲ್ಲಿ ನಿಜವಾಗಿಯೂ ಹುಟ್ಟುಹಬ್ಬದ ಆಚರಣೆ ಇತ್ತೇ? ಅಥವಾ ಅದು ರೇವ್ ಪಾರ್ಟಿಯೇ? ಇತ್ಯಾದಿ ವಿಷಯವನ್ನು ಮುನ್ನೆಲೆಯಲ್ಲಿಟ್ಟು ಚರ್ಚಿಸುವುದೇ ತಪ್ಪು. ಅವುಗಳಲ್ಲಿ ಏನೇ ಇದ್ದರೂ ಅವು ಯಾವುವೂ ನೈತಿಕ ಪೊಲೀಸರಿಗೆ ಹೊಡೆಯುವ ಅಧಿಕಾರವನ್ನು ನೀಡುವುದಿಲ್ಲ ಎಂಬುದು ಸ್ಪಷ್ಟ. ಅಕ್ರಮ ದನ ಸಾಗಣಿಕೆ ಮಾಡುತ್ತಿದ್ದಾರೆ ಎಂದೋ, ಅಕ್ರಮ ಕಸಾಯಿಖಾನೆ ಇದು ಎಂದೋ ದಾಂಧಲೆ ನಡೆಸಿ, ಜನರನ್ನು ವಶಕ್ಕೆ ತೆಗೆದುಕೊಂಡು, ಅಮಾನವೀಯವಾಗಿ ದಂಡಿಸುವ ಈ ಗುಂಪಿನ ಮೇಲೆ ಕಾನೂನು ಮತ್ತು ಪೊಲೀಸ್ ಇಲಾಖೆಗಳು ಶಿಸ್ತಿನ ಕ್ರಮ ಕೈಗೊಂಡಿದ್ದಲ್ಲಿ ಮೇಲೆ ಸೂಚಿಸಿದ ಪ್ರಕರಣಗಳು ಹೆಚ್ಚುತ್ತಿರಲಿಲ್ಲ.

ಮಹಿಳೆಯರ ಮೇಲಿನ ಹಲ್ಲೆಗಳು ಬಹುಮುಖ್ಯವಾಗಿ ಎರಡು ನೆಲೆಯಲ್ಲಿ ಮಹಿಳಾ ಹೋರಾಟಕ್ಕೆ ಹಿನ್ನಡೆಯಾಗಿವೆ. ಮೊದಲನೆಯದು ಹೆಣ್ಣು ಎಳವೆಯಲ್ಲಿ ತಂದೆಯ, ಯೌವನದಲ್ಲಿ ಗಂಡನ ಮತ್ತು ವೃದ್ಧಾಪ್ಯದಲ್ಲಿ ಮಗನ ಆಶ್ರಯದಲ್ಲೇ ಇರಬೇಕು, ಅದು ಅವಳಿಗೆ ಸುರಕ್ಷಿತ ಎಂಬ ಸನಾತನ ಚಿಂತನೆಯನ್ನು ಹೊಸದಾಗಿ ಬಿತ್ತುತ್ತ ಸಬಲತೆಯತ್ತ ಹೆಜ್ಜೆ ಇರಿಸಿದ ಮಹಿಳಾ ಸಮುದಾಯವನ್ನು (ಹೊರಗೆ ಅಪಾಯವಿದೆ ಎನ್ನುತ್ತ ಮನೆಗೆ ನಿರ್ಬಂಧಿಸುತ್ತದೆ, ಅವಳ ಪರವಾಗಿ ಪುರುಷರೇ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರವನ್ನು ಒಮ್ಮತದಿಂದ ನೀಡುತ್ತದೆ ಹಾಗೂ ಅವಳನ್ನು) ಮತ್ತೆ ಪರಾವಲಂಬಿಯಾಗುವಂತೆ ಪ್ರಚೋದಿಸುತ್ತದೆ. ಆ ಮೂಲಕ ಒಟ್ಟು ಸಮಾಜವೇ ಪಾರ್ಶ್ವವಾಯುಪೀಡಿತವಾಗುವಂತೆ ಮಾಡುತ್ತದೆ. ಅನಾರೋಗ್ಯಕರ ಸಮಾಜದ ಫಲವನ್ನು ಅಂತಿಮವಾಗಿ ಅಲ್ಲಿನ ಎಲ್ಲ ಪ್ರಜೆಗಳೂ ಉಣ್ಣುವಂತಾಗುತ್ತದೆ. ಎರಡನೆಯದು, ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಈಗಾಗಲೇ ಹೆಣ್ತನದ ಪರಿಯಟ್ಟಿಗೆ ತಮ್ಮನ್ನು ಒಗ್ಗಿಸಿಕೊಂಡವರು ಒಪ್ಪಿತ ಯಾಜಮಾನ್ಯಕ್ಕೆ ತುತ್ತುಕೊಂಡವರು.


ಅವರುಗಳು ತಮ್ಮ ಅಂತಹ ಸ್ವನಿರ್ಬಂಧದ ಸಂಕೋಲೆಯನ್ನು ಬಿಡಿಸಿಕೊಂಡು, ಸಾರಾಸಾರ ವಿವೇಚನೆ ಮಾಡುವ ಅರಿವನ್ನು ಹೊಂದುವುದು, ಸ್ತ್ರೀವಿರೋಧೀ ಮೌಲ್ಯಗಳನ್ನು ಮೀರಲು ನಡೆಸುವ ಹೋರಾಟ ಪ್ರಯಾಸದ್ದು. ಅಂತಹ ಹಾದಿಯ ಪೀಳಿಗೆಯೊಂದನ್ನು ನೈತಿಕ ಪೊಲೀಸಿಂಗ್ ವ್ಯವಸ್ಥೆ ಹಲವು ಶತಮಾನಗಳಷ್ಟು ಹಿಂದಕ್ಕೆ ಜಗ್ಗುತ್ತದೆ.

ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷರು "ಇನ್ನು ಮುಂದೆ ಇಂತಹ ಪಾರ್ಟಿಗಳಿಗೆ ಹೋಗುವ ಮೊದಲು ಹೆಣ್ಣುಮಕ್ಕಳು ಪೊಲೀಸರಿಗೆ ತಿಳಿಸುವುದು ಸೂಕ್ತ" ಎಂದು ನುಡಿದಿರುವುದಾಗಿ ವರದಿಯಾಗಿದೆ (ಪ್ರಜಾವಾಣಿ 2.08.12). ಇದು ನಿಜವೇ ಆದಲ್ಲಿ ಬಾಣಲೆಯಿಂದ ಸೀದಾ ಬೆಂಕಿಗೇ ಹಾಕಿದಂಥ ಸ್ಥಿತಿ ಇಲ್ಲಿಯ ನಾಗರಿಕರದ್ದು ಆದೀತು. ಲಿಂಗತಾರತಮ್ಯ ನೀತಿಯನ್ನು ಒಂದೆಡೆ ವಿರೋಧಿಸುತ್ತಲೇ ಅದನ್ನೇ ಹೊಸರೂಪದಲ್ಲಿ ಕಾರ್ಯರೂಪಕ್ಕೆ ತರುವಂಥ ಮಾತುಗಳನ್ನು ಆಯೋಗದ ಅಧ್ಯಕ್ಷರು ಮಾತಾಡುತ್ತಿರುವುದೇ ಸೋಜಿಗದ ಸಂಗತಿ. ಎಲ್ಲ ಕಾಲೇಜಿನ ಪ್ರಾಂಶುಪಾಲರ ಸಭೆ ಕರೆಯಲು ಅವರು ಉದ್ದೇಶಿಸಿದ್ದಾರೆ. ಅದರರ್ಥ ಮತ್ತೆ ಹುಡುಗಿಯರಿಗೆ ನೀತಿಪಾಠವನ್ನು ಹೇಳುವುದು ಎಂದು ಬಿಡಿಸಿ ಹೇಳಬೇಕೇ? ನೀತಿನಿರೂಪಣೆಯ ಸ್ಥಾನದಲ್ಲಿ ಇರುವವರೇ ಲಿಂಗಸೂಕ್ಷ್ಮತೆಯನ್ನು ಹೊಂದಿಲ್ಲದಿದ್ದರೆ ಅವರಿಂದ ಜನರು ಭದ್ರತೆ ಮತ್ತು ನೆಮ್ಮದಿಯನ್ನು ನಿರೀಕ್ಷಿಸುವುದಾದರೂ ಹೇಗೆ?

ಕಾವಿಧಾರಿಗಳನ್ನೂ ಒಳಗೊಂಡಂತೆ ಎಲ್ಲ ಬಲಪಂಥೀಯರಿಗೂ ಈ ಹೋಂ ಸ್ಟೇ ದಾಳಿ ಘಟನೆ ನುಂಗಲಾರದ ತುತ್ತಾಗಿದೆ. 'ಮಹಿಳೆಯರ ಮೇಲೆ ಹೀಗೆ ದಾಳಿ ಮಾಡುವುದು ಕೈ ಮಾಡುವುದು ಸರಿಯಲ್ಲ' ಎಂದು ಹೇಳಿದರೂ ಮರುಕ್ಷಣವೇ 'ಆದರೆ ಅವರಿಗೆ (ದಾಳಿಕೋರರಿಗೆ) ಬೇರೆ ಯಾವ ದಾರಿಯಿತ್ತು?' ಎಂಬ ಪ್ರಶ್ನೆಯನ್ನು ಮರಳಿ ಎಸೆಯುತ್ತಿದ್ದಾರೆ. ಎಂದರೆ ಅವರ ಇಂತಹ ಮಾತುಗಳೇ ಮಹಿಳೆಯರ ಮೇಲೆ ಬಲಪ್ರದರ್ಶನ ತಪ್ಪಲ್ಲ; ಮಹಿಳೆಯರು ಅಂಥ ಬಲಪ್ರದರ್ಶನವನ್ನು ಒಪ್ಪಿಕೊಳ್ಳಬೇಕು; ಅದಕ್ಕವರು ಅರ್ಹರು ಎಂಬ ನಿಲುವು ಖಚಿತವಾಗಿ ಒಡಮೂಡಿದೆ. ಎಂದರೆ ಮಹಿಳೆಗೆ ನಮ್ಮ ಸಂಸ್ಕೃತಿಯಲ್ಲಿ ಗೌರವದ ಸ್ಥಾನವಿದೆ; ಪೂಜನೀಯ ಸ್ಥಾನವಿದೆ ಎಂದು ಯಾರು ಘೋಷಿಸುತ್ತಿದ್ದಾರೋ ಅವರೇ ಅದು ಉದ್ಧರಿಸಲು ಮಾತ್ರ ಸೀಮಿತ, ಕಾರ್ಯಕ್ಕೆ ಅನ್ವಯವಾಗದು ಎಂಬ ಇಬ್ಬಗೆಯ ನೀತಿಯನ್ನು ಮುಂದಿಡುತ್ತಿದ್ದಾರೆ. ಈ ಬಲಪಂಥೀಯ ವಿಚಾರಗಳ ಮಂಡಕರು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು, "ಅಲ್ಲಿ ರೇವ್ ಪಾರ್ಟಿ ನಡೀತಿತ್ತು; ಅಲ್ಲಿ ಇದ್ದವರು ವಿದ್ಯಾರ್ಥಿಗಳೇ ಅಲ್ಲ; ಹುಡುಗಿಯರಿಗೆ ಪಾರ್ಟಿ ನಡೆಯುತ್ತಿದ್ದ ಜಾಗ ಯಾವುದೆಂದು ಗೊತ್ತೇ ಇರಲಿಲ್ಲ; ಯಾರೋ ಹುಡುಗಿಯರನ್ನು ದಾರಿ ತಪ್ಪಿಸುತ್ತಿದ್ದಾರೆ, ಹುಡುಗಿಯರ ಭವಿಷ್ಯದ ಭಯದಿಂದ ಹೆತ್ತವರು ಕಣ್ಣೀರಿಡುತ್ತಿದ್ದಾರೆ..." ಎಂಬಿತ್ಯಾದಿ ಹತ್ತು ಹಲವು ಸುಳ್ಳುಗಳನ್ನು ಹೊಸಹೊಸದಾಗಿ ಸೃಷ್ಟಿಸುತ್ತಿದ್ದಾರೆ. ಆ ಮೂಲಕ ಸಾಮಾಜಿಕರ ಸಹಾನುಭೂತಿಯನ್ನು; ಒಪ್ಪಿಗೆಯನ್ನು ತಮ್ಮೆಡೆಗೆ ಸೆಳೆಯುವ ಹುನ್ನಾರ ಮಾಡುತ್ತಿದ್ದಾರೆ. ಅದೇನೇ ಇರಲಿ, ಈ ಬಗೆಯ ಹಲ್ಲೆ, ದೊಂಬಿ, ಕ್ರೌರ್ಯ ನಡೆಸಲು ಅವರಿಗೆ, ಗುಂಪಿಗೆ ಯಾವ ಸಂವಿಧಾನ ಅಧಿಕಾರ ನೀಡಿದೆ ಎಂದು ಅವರು ಹೇಳಬೇಕಿದೆ.

ಮಂಗಳೂರಿನ ಎಲ್ಲ ಪ್ರಜ್ಞಾವಂತರು, ವಿವೇಚನಾಶೀಲರು, ಸ್ವಾತಂತ್ರ್ಯಪ್ರಿಯರು 'ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇ' ಮೇಲಿನ ಹಿಂದೂ ಜಾಗರಣ ವೇದಿಕೆಯ ಸದಸ್ಯರ ದಾಳಿಯನ್ನು ತೀವ್ರವಾಗಿ ಖಂಡಿಸುತ್ತಾರೆ. ಇಲ್ಲಿ ಪೊಲೀಸ್ ವ್ಯವಸ್ಥೆಯ ನಿಷ್ಕ್ರಿಯತೆ ದೃಶ್ಯ ಮಾಧ್ಯಮದ ಮೂಲಕ ಮತ್ತು ಪ್ರತ್ಯಕ್ಷದರ್ಶಿಗಳ ಹೇಳಿಕೆಯ ಮೂಲಕ ಬಯಲಾಗಿದೆ. ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು, ದಾಳಿಕೋರರು ಯಾವ ಸಂಘಟನೆಗೆ ಸೇರಿದವರು ಎಂಬುದನ್ನು ಎಫ್.ಐ.ಆರ್.ನಲ್ಲಿ ದಾಖಲಿಸಿಲ್ಲ ಎಂಬ ಹೊಸ ಸತ್ಯವನ್ನು ಅರುಹಿದ್ದಾರೆ (ಪ್ರಜಾವಾಣಿ; 3.8.12). ಸುಭಾಷ್ ಪಡೀಲ್ ತಾನು ಹಿಂದೂ ಜಾಗರಣ ವೇದಿಕೆಯವನು ಎಂದು ಒಪ್ಪಿಕೊಂಡರೂ ಪೊಲೀಸರು ಮತ್ತು ಆಯೋಗದ ಅಧ್ಯಕ್ಷರು ಅದಿನ್ನೂ ತನಿಖೆ ಆಗಬೇಕಾದ ವಿಚಾರ ಎನ್ನುವುದೇ ಅವರು ಈ ವಿಷಯದಲ್ಲಿ ಯಾರ ಪರ ಮತ್ತು ಯಾವುದರ ಪರ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹುಟ್ಟುಹಬ್ಬ ಆಚರಿಸುತ್ತಿದ್ದ ಸಂಜನಾಳನ್ನೇ ಭೇಟಿ ಆಗದೆ, ದೈಹಿಕವಾಗಿ ತೀವ್ರ ಹಲ್ಲೆಗೆ ಒಳಗಾದ ವಿಜಯ್ ಕುಮಾರ್‌ನನ್ನೂ ಭೇಟಿ ಮಾಡದೆ ಹಿಂದಿರುಗಿದ ಆಯೋಗದ ಅಧ್ಯಕ್ಷರ ನೀತಿ ಖಂಡನಾರ್ಹ. ಇದು ಫೆಮಿನಿಸಂನ ಮೂಲತತ್ವಕ್ಕೆ ತದ್ವಿರುದ್ಧ ನಿಲುವು. ಆಯೋಗದ ಆಶಯವನ್ನು ಹೀಗೆ ಅವರು ಸಂಕುಚಿತಗೊಳಿಸಿ ಸ್ತ್ರೀವಾದಕ್ಕೆ ಕೆಟ್ಟ ಹೆಸರನ್ನು ತಂದಿರುವುದು ವಿಷಾದನೀಯ.

• ಸಬಿತಾ ಭೂಮೀಗೌಡ



ಕೊಡಗು ಭೂಗಳ್ಳರ ನಾಡಲ್ಲ...

ಕೊಡಗಿನ ಜನತೆ ಮತ್ತು ಕೊಡಗಿನ ಶಾಸಕರುಗಳು ಪಶ್ಚಿಮಘಟ್ಟವನ್ನು ವಿಶ್ವಪಾರಂಪರಿಕ ತಾಣದ ಪಟ್ಟಿಗೆ ಸೇರ್ಪಡೆಗೊಳಿಸಿರುವುದನ್ನು ವಿರೋಧಿಸಿದ್ದಕ್ಕೆ ರಾಜ್ಯದ ಪರಿಸರ ಸಂರಕ್ಷಣೆಯ ಗುತ್ತಿಗೆಯನ್ನು ಪಡೆದವರಂತೆ ನಟಿಸುವ ಢೋಂಗಿ ಪರಿಸರವಾದಿಗಳು ಆಕಾಶವೇ ಕಳಚಿ ಬಿದ್ದಂತೆ ವರ್ತಿಸುತ್ತಿದ್ದಾರೆ. ಕೊಡಗಿನ ಶಾಸಕರು ವಿಧಾನಸಭೆಯಲ್ಲಿ ಇದರ ವಿರುದ್ಧ ನಿರ್ಣಯ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎನ್ನುವುದರ ಜೊತೆಗೆ ಇವರೆಲ್ಲ ಟಿಂಬರ್ ಲಾಬಿಗೆ ಶರಣಾಗಿದ್ದಾರೆ ಮತ್ತು ಅರಣ್ಯ ಭೂಮಿಯನ್ನು ಅತಿಕ್ರಮಣಗೊಳಿಸಿದವರು ಕೊಡಗಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರೆಲ್ಲ ಇದನ್ನು ವಿರೋಧಿಸುತ್ತಿದ್ದಾರೆ ಎಂದು ಅಪಪ್ರಚಾರ ನಡೆಯುತ್ತಿದೆ. ಶಾಸಕರುಗಳಿಗೆ ಈ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎನ್ನುವುದರ ಜೊತೆಗೆ ಇಂತಹ ಒಂದು ನಿರ್ಣಯವನ್ನು ಕೈಗೊಳ್ಳುವ ಮುನ್ನ ಇದು ಸಾರ್ವಜನಿಕವಾಗಿ ಚರ್ಚೆಗೆ ಒಳಪಡಬೇಕಾಗಿತ್ತು ಎಂಬ ವಾದವನ್ನು ಪರಿಸರವಾದಿಗಳು ಈಗ ಮುಂದಿಟ್ಟಿದ್ದಾರೆ.

ವಿಧಾನಸಭೆಯಲ್ಲಿ ಸರ್ವಾನುಮತದಿಂದ ಈ ನಿರ್ಣಯವನ್ನು ಕೈಗೊಳ್ಳುವಾಗ ಸುಮಾರು ಹದಿನೈದಕ್ಕೂ ಹೆಚ್ಚು ವಿವಿಧ ರಾಜಕೀಯ ಪಕ್ಷಗಳ ಶಾಸಕರು ಮತ್ತು ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುವವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಪರಿಸರವಾದಿಗಳ ಪ್ರಕಾರ ಇವರೆಲ್ಲರೂ ಮುಠ್ಠಾಳರು ಮತ್ತು ಟಿಂಬರ್ ಹಾಗೂ ಭೂಮಾಫಿಯಾಕ್ಕೆ ಶರಣಾಗತರಾದವರು. ಪರಿಸರವಾದಿಗಳು ಮಾತ್ರ ಸಾಚಾಗಳು. ನಿರ್ಣಯ ಕೈಗೊಳ್ಳುವ ಮುನ್ನ ಸಾರ್ವಜನಿಕ ಚರ್ಚೆ ಆಗಬೇಕು ಎನ್ನುವವರಿಗೆ, ಪಶ್ಚಿಮಘಟ್ಟವನ್ನು ವಿಶ್ವಪಾರಂಪರಿಕ ತಾಣಕ್ಕೆ ಸೇರ್ಪಡೆಗೊಳಿಸುವ ಮುನ್ನ ಸಾರ್ವಜನಿಕವಾಗಿ ಚರ್ಚೆಯಾಗಬೇಕು, ಎಲ್ಲಾ ಗ್ರಾಮ ಪಂಚಾಯತಿಗಳು ಇದಕ್ಕೆ ಒಪ್ಪಿಗೆ ನೀಡಬೇಕು, ಜಿಲ್ಲಾ ಪಂಚಾಯತಿ ಸೇರಿದಂತೆ ರಾಜ್ಯ ಸರ್ಕಾರದ ಗಮನಕ್ಕೆ ತಂದು ಇದನ್ನು ಅನುಷ್ಠಾನಗೊಳಿಸಬೇಕು ಎಂದು ಅನಿಸಲಿಲ್ಲ. ಈಗ ಏಕಾಏಕಿ ಇವರಲ್ಲಿ ಸಾರ್ವಜನಿಕ ಪ್ರಜ್ಞೆ ಜಾಗೃತವಾಗಿರುವುದು ಆಶ್ಚರ್ಯಕರ.


ಕೊಡಗಿನ ಮಟ್ಟಿಗೆ ವ್ಯಾಪಕವಾದ ಒಂದು ಅಪಪ್ರಚಾರ ಇದೆ. ಅರಣ್ಯ ಪ್ರದೇಶವನ್ನು ಸ್ಥಳೀಯರು ಕಬಳಿಸಿ, ಕಾಫಿತೋಟಗಳನ್ನು ಮಾಡಿಕೊಂಡು ಶ್ರೀಮಂತರಾಗಿದ್ದಾರೆ; ಅವರೇ ಈಗ ಇಂತಹ ಯೋಜನೆಗಳಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂಬುದು ಇವರುಗಳ ಆರೋಪ. ಕೊಡಗಿನ ಭೂಪ್ರದೇಶ ವಿಚಿತ್ರವಾದ ಭೂ ನಿಬಂಧನೆಗಳನ್ನು ಹೊಂದಿರುವ ಪ್ರದೇಶ. ಇವುಗಳ ಪೈಕಿ ಪ್ರಮುಖವಾದದ್ದು ಬಾಣೆ ಜಮೀನು. ಹಿಂದೆ ವರ್ಗ ಜಮೀನು ಅಂದರೆ ಗದ್ದೆಗಳಿಗೆ ಮಾತ್ರ ಪ್ರಾಶಸ್ತ್ಯವಿತ್ತು, ಗದ್ದೆಯ ಒತ್ತಿನಲ್ಲಿರುವ ಬಾಣೆ ಜಮೀನಿಗೆ ಯಾವುದೇ ಪ್ರಾಶಸ್ತ್ಯವಿರಲಿಲ್ಲ, ಅಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತಿರಲಿಲ್ಲ. ಹಾಗಾಗಿ ಪ್ರತಿಯೊಂದು ವರ್ಗ ಜಮೀನು ನೀಡುವ ವೇಳೆಯಲ್ಲಿ ಅದರ ಉಪಯೋಗಕ್ಕಾಗಿ ಬಾಣೆ ಜಮೀನನ್ನು ಮಂಜೂರು ಮಾಡಲಾಗಿತ್ತು, ಆ ಪ್ರದೇಶವು ಮರಗಿಡಗಳಿಂದ ಕೂಡಿದ್ದ ಕಾರಣ ಅದನ್ನು 'ಆರಣ', ಎಂದು ಸಂಬೋಧಿಸಲಾಗುತ್ತಿತ್ತು, ಆದರೆ ಈ ಪ್ರದೇಶವು ಮೀಸಲು ಅರಣ್ಯದಲ್ಲಾಗಲಿ, ರಕ್ಷಿತಾರಣ್ಯದಲ್ಲಾಗಲಿ ಅಥವಾ ಸರಕಾರ ಆರಣ್ಯವೆಂದು ಘೋಷಿಸಿರುವ ಯಾವುದೇ ವರ್ಗದ ಆರಣ್ಯದಲ್ಲಾಗಲಿ ಒಳಪಡುತ್ತಿರಲಿಲ್ಲ, ಕ್ರಮೇಣ ಈ ಜಮೀನು ಕಾಫಿ ಕೃಷಿಗೆ ಒಳಪಟ್ಟನಂತರ ವರ್ಗ ಜಮೀನಿನಿಂದ ಬೇರ್ಪಟ್ಟಿತ್ತು, ಈ ಪೈಕಿ ಜಮ್ಮಾ ಬಾಣೆ ಎಂಬುದು ಕೊಡಗಿನ ಪ್ರಮುಖವಾದ ಭೂ ನಿಬಂಧನೆಯಾಗಿದ್ದು ರಾಜರುಗಳ ಕಾಲದಲ್ಲಿ ತಮ್ಮ ಪ್ರಜೆಗಳನ್ನು ತಮ್ಮ ಹಿಡಿತದಲ್ಲಿಯೇ ಇಟ್ಟುಕೊಳ್ಳುವ ಸಲುವಾಗಿ ಈ ಜಮೀನನ್ನು ಮಾರಾಟ ಮಾಡುವ ಹಕ್ಕನ್ನು ನೀಡಿರಲಿಲ್ಲ, ನಿರ್ದಿಷ್ಟ ಕುಟುಂಬದ ಒಳಗೆ ಇದು ಬಟಾವಡೆ ಆಗುತ್ತಾ ಬಂದಿತ್ತು, ಹಾಗಾಗಿ ಕುಟುಂಬದೊಳಗೆ ಬಲಾಢ್ಯರು ಬಲಹೀನರನ್ನು ಶೋಷಣೆ ಮಾಡುವ ವ್ಯವಸ್ಥೆ ಇತ್ತು,

ವಿಚಿತ್ರವೆಂದರೆ ಕೊಡಗು 1956ರಲ್ಲಿ ಕರ್ನಾಟಕ ರಾಜ್ಯದಲ್ಲಿ (ಹಿಂದಿನ ಮೈಸೂರು ರಾಜ್ಯ) ವಿಲೀನಗೊಂಡಿದ್ದರೂ, 1964ರಲ್ಲಿ ಕರ್ನಾಟಕ ರಾಜ್ಯಕ್ಕೆ ಒಂದು ಸಮಗ್ರವಾದ ಭೂಕಂದಾಯ ಕಾಯ್ದೆ ಜಾರಿಗೆ ಬಂದಿದ್ದರೂ, ಕೊಡಗಿನಲ್ಲಿ ಮಾತ್ರ 1899ರ ಕೊಡಗು ಭೂಕಂದಾಯ ಕಾಯ್ದೆ ಜಾರಿಯಲ್ಲಿ ಇತ್ತು, ಹಾಗಾಗಿ ರಾಜ್ಯದ ಎಲ್ಲಾ ಭಾಗದಲ್ಲಿ ಆರ್.ಟಿ.ಸಿ. ವ್ಯವಸ್ಥೆ ಇದ್ದರೆ ಕೊಡಗಿನಲ್ಲಿ ಮಾತ್ರ ಜಮಾಬಂಧಿ ಎಂಬ ವ್ಯವಸ್ಥೆ ಇತ್ತು, 1993ರಲ್ಲಿ ಚೆಕ್ಕೇರ ಪೂವಯ್ಯ ಕಾರ್ಯಪ್ಪ ಎಂಬವರು ಬಾಣೆ ಜಮೀನಿಗೆ ಸಂಬಂಧಪಟ್ಟಂತೆ ಖಾತೆ ವರ್ಗಾವಣೆಗೆ ಅನುಮತಿ ದೊರೆಯದಾಗ ಎ.ಕೆ. ಸುಬ್ಬಯ್ಯನವರ ಮೂಲಕ ರಾಜ್ಯ ಉಚ್ಚ ನ್ಯಾಯಾಲಯದಿಂದ ವರ್ಗಾವಣೆಗೆ ಅನುಮತಿಯನ್ನು ಪಡೆದಿದ್ದರು. ರಾಜ್ಯ ಉಚ್ಚ ನ್ಯಾಯಾಲಯ ಕೊಡಗಿನ ಮಟ್ಟಿಗೆ ನೀಡಿದ ಐತಿಹಾಸಿಕ ತೀರ್ಪು ಇದಾಗಿತ್ತು, ಬಾಣೆ ಜಮೀನು ಸರಕಾರದ್ದೆಂದು ಅಲ್ಲಿಯವರೆಗೆ ವಾದಿಸುತ್ತಿದ್ದವರಿಗೆ ಹಿನ್ನಡೆಯಾಗಿತ್ತು. ಹಿಡುವಳಿಯ ಹಕ್ಕನ್ನು ಉಚ್ಚ ನ್ಯಾಯಾಲಯ ದೃಢೀಕರಿಸಿತ್ತು, ಇದರ ಆಧಾರದಲ್ಲಿ 1999ರಲ್ಲಿ ಕೊಡಗಿನಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ಜಾರಿಗೆ ಬಂತು. ಆದರೆ ಇಂದಿಗೂ ಕೂಡ ವಿಚಿತ್ರವೆನ್ನುವಂತೆ ಕೊಡಗಿನ ಭೂಮಾಲೀಕನಿಗೆ ತನ್ನ ಜಮೀನಿನಲ್ಲಿ ತಾನು ಬೆಳೆದ ಮರದ ಹಕ್ಕು ಇಲ್ಲ, ಇದಕ್ಕೆಲ್ಲಾ ಕಾರಣ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭ್ರಷ್ಟ ಅರಣ್ಯ ಅಧಿಕಾರಿಗಳು ಮತ್ತು ಅವರೊಂದಿಗೆ ಕೈಜೋಡಿಸಿರುವ ಢೋಂಗಿ ಪರಿಸರವಾದಿಗಳು.

ಈಗಲೂ ಇದೇ ಜಮೀನನ್ನು ಅರಣ್ಯ ಅತಿಕ್ರಮಣ ಎಂದು ಹೇಳುತ್ತಿದ್ದಾರೆ. ವಾಸ್ತವತೆಯ ಅರಿವು ಹೊರಗಿನವರಿಗೆ ಇಲ್ಲ, ಅರಣ್ಯ ಅಧಿಕಾರಿಗಳು ದಿಕ್ಕುತಪ್ಪಿಸುತ್ತಾರೆ. ಕೊಡಗಿನ ಕಾಫಿತೋಟಗಳನ್ನು ಗಮನಿಸಬೇಕು. ಅರಣ್ಯದ ಎಲ್ಲಾ ಲಕ್ಷಣಗಳು ಕಾಫಿ ತೋಟದಲ್ಲಿ ಇದೆ. ಕಾಫಿ ನೆರಳಿನಲ್ಲಿ ಬೆಳೆಯುವ ಬೆಳೆಯಾದ ಕಾರಣ ಮರಗಳನ್ನು ನೆಟ್ಟು ಸಂರಕ್ಷಿಸಲಾಗುತ್ತಿದೆ. ಹಾಗಾಗಿ ವನ್ಯ ಪ್ರಾಣಿಗಳು, ಅದರಲ್ಲೂ ವಿಶೇಷವಾಗಿ ಆನೆಗಳು, ಅರಣ್ಯಕ್ಕಿಂತ ಖಾಸಗಿ ತೋಟಗಳೇ ತಮ್ಮ ವಾಸಕ್ಕೆ ಯೋಗ್ಯ ಸ್ಥಳವೆಂದು ಇತ್ತೀಚಿನ ದಿನಗಳಲ್ಲಿ ಅಲ್ಲಿ ಬೀಡು ಬಿಟ್ಟಿವೆ. ಪರಿಸರವಾದಿಗಳು ಎನ್ನುವವರು ವಿದೇಶಿ ಹಣಕ್ಕಾಗಿ ತಮ್ಮನ್ನು ಮಾರಿಕೊಂಡು ಈ ಜಮೀನನ್ನು ಅರಣ್ಯ ಎಂದು ಹೇಳುತ್ತಿದ್ದಾರೆ. ಅವರಿಗೆ ಕೊಡಗಿನ ರೈತಾಪಿ ವರ್ಗದ ಜೀವನದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ, ಅವರಿಗೆ ತಮ್ಮ ಬದುಕು ಮಾತ್ರ ಪ್ರಶ್ನೆಯಾಗಿದೆ: ರೈತರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ.

ಕೊಡಗಿನ ಜನತೆ ದೇಶದ ಗಡಿ ಕಾಪಾಡಿದವರು. ಫೀ! ಮಾ! ಕಾರ್ಯಪ್ಪ, ಜನರಲ್ ತಿಮ್ಮಯ್ಯನವರಂತಹ ಸಾವಿರಾರು ವೀರಸೇನಾನಿಗಳನ್ನು ದೇಶದ ರಕ್ಷಣೆಗೆ ನೀಡಿದ ಜಿಲ್ಲೆ ಕೊಡಗು. ಅದೇರೀತಿ ದೇಶದ ಸ್ವಾತಂತ್ರ್ಯದ ಚಳವಳಿಯಲ್ಲಿಯೂ ಪಂದ್ಯಂಡ ಬೆಳ್ಯಪ್ಪನವರಂತಹ ನಿಸ್ವಾರ್ಥಿಗಳ ಕೊಡುಗೆ ಅಪಾರವಾದದ್ದು. ಇಂತಹ ಖ್ಯಾತಿಯ ಕೊಡಗು ಜಿಲ್ಲೆಯ ಬಗ್ಗೆ ಢೋಂಗಿ ಪರಿಸರವಾದಿಗಳು ಅರಣ್ಯ ಪ್ರದೇಶವನ್ನು ಅತಿಕ್ರಮಣ ಮಾಡಿಕೊಂಡಿರುವವರು ಎಂಬ ಹಣೆಪಟ್ಟಿಯನ್ನು ಲಗತ್ತಿಸಿರುವುದು ಒಂದು ದುರಂತವೇ ಸರಿ. ಕೊಡಗಿನಲ್ಲಿ ಶೇ: 33ಕ್ಕೂ ಹೆಚ್ಚು ಅರಣ್ಯ ಪ್ರದೇಶವಿದೆ. ಇದು ಸರಕಾರದ ನಿಯಮಕ್ಕಿಂತಲೂ ಹೆಚ್ಚಿನ ಪ್ರದೇಶ. ಜೊತೆಗೆ ಶೇ. 65ಕ್ಕೂ ಹೆಚ್ಚು ಹಸಿರು ಪ್ರದೇಶ ಕೊಡಗಿನಲ್ಲಿದೆ.

ಕೊಡಗಿನ ಶಾಸಕರುಗಳು ಇಲ್ಲಿಯ ಜನಪ್ರತಿನಿಧಿಗಳಾದ ಕಾರಣ ಅವರಿಗೆ ತಮ್ಮ ಜಿಲ್ಲೆಯ ಜನರ ಬದುಕನ್ನು ಸಂರಕ್ಷಿಸುವ ಅಗತ್ಯತೆ ಇದ್ದು ಅವರು ವಿಶ್ವಪಾರಂಪರಿಕ ಪಟ್ಟಿಗೆ ಪಶ್ಚಿಮಘಟ್ಟವನ್ನು ಸೇರ್ಪಡೆಗೊಳಿಸುವುದನ್ನು ವಿರೋಧಿಸಿರುವುದು ಸತ್ಯ. ಆ ಸಂದರ್ಭದಲ್ಲಿ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಆಡಿದ ಮಾತುಗಳಿಗೆ ವಿಶೇಷ ಅರ್ಥವನ್ನು ಕಲ್ಪಿಸಲಾಗಿತ್ತು, ಕೊಡಗು ಪ್ರತ್ಯೇಕ ಕೊಡಿ ಎಂದು ಅವರು ಕೇಳುವ ಮೂಲಕ ಅಪರಾಧವನ್ನು ಮಾಡಿದ್ದಾರೆ ಎಂದು ಬಿಂಬಿಸಲು ಪ್ರಯತ್ನಿಸಲಾಗಿತ್ತು. ಕೊಡಗಿನ ಅರಣ್ಯ ಪ್ರದೇಶವನ್ನು ನಿಮ್ಮಿಂದ ಸಂರಕ್ಷಿಸಲು ಸಾಧ್ಯವಿಲ್ಲದಿದ್ದರೆ ಬಿಟ್ಟುಬಿಡಿ, ನಾವು ಅದನ್ನು ಸಂರಕ್ಷಿಸಿಕೊಳ್ಳುತ್ತೇವೆ ಎನ್ನುವ ಮಾತುಗಳನ್ನಷ್ಟೇ ಅವರು ಆಡಿದ್ದರು. ಇದಕ್ಕೆ ವಿಶೇಷ ಅರ್ಥವೇನು ಇರಲಿಲ್ಲ.



'ಪ್ರಜಾವಾಣಿ'ಯಂತಹ ಪ್ರಮುಖ ಪತ್ರಿಕೆ ಕೊಡಗಿನ ಜನತೆ ಇದನ್ನು ವಿರೋಧಿಸುತ್ತಿರುವುದಕ್ಕೆ ಕಾರಣ ಇಲ್ಲಿ ನೆಲಗಳ್ಳರು ಮತ್ತು ಮರಗಳ್ಳರ ಹಾವಳಿ ಎಂದಿದೆ. ವಿಧಾನಸಭಾಧ್ಯಕ್ಷರು ಪ್ರಚೋದನಾಕಾರಿ ಹೇಳಿಕೆ ನೀಡಿರುವುದು ಮತ್ತು ಶಾಸಕರು ವಿರೋಧಿಸುತ್ತಿರುವುದು ಮೂರ್ಖತನದ ಪರಮಾವಧಿ ಎಂದಿದೆ. ಇದು ಕೊಡಗಿನ ಜನತೆಗೆ ಆ ಪತ್ರಿಕೆ ಮಾಡಿರುವ ಅಪಮಾನ.

ಮಾನ್ಯತೆಯಿಂದ ಆಗುವ ಲಾಭವೇನು?

'ಪಶ್ಚಿಮಘಟ್ಟವನ್ನು ವಿಶ್ವಪಾರಂಪರಿಕ ಪಟ್ಟಿಗೆ ಸೇರ್ಪಡೆಗೊಳಿಸಿರುವುದು ಹೆಮ್ಮೆಯ ವಿಚಾರ" ಎಂದು ಪ್ರತಿಪಾದಿಸಲಾಗುತ್ತಿದೆ. 'ಇದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಗೌರವ ಹೆಚ್ಚಾಯಿತು' ಎಂಬ ಲೇಖ
ಸರಮಾಲೆಯೇ ಬರುತ್ತಿದೆ. ಹಾಗಾದರೆ ಹಿಂದೆ
ಗೌರವ ಕಡಿಮೆ ಇತ್ತೇ? ವಿಶೇಷವೆಂದರೆ ಈ ಬಗ್ಗೆ ಚರ್ಚೆ
ಆಗುತ್ತಿಲ್ಲ, ಮಾಧ್ಯಮಗಳು ಇದರ ವಿರು
ಅಭಿಪ್ರಾಯಗಳನ್ನು ಪ್ರಕಟಿಸದೇ ಇರುವುದು ದೊಡ್ಡ ದು
ಗಿರಿಜನರಿಗೆ ಅವರ ಹಕ್ಕು ನೀಡಿರುವುದು ಕೂಡ
ಎಂಬ ವ್ಯಾಖ್ಯಾನವನ್ನು ಮಾಡಲಾಗುತ್ತಿದೆ. 'ವಿಶ್ವಪಾರಂ
ತಾಣವೆಂದು ಘೋಷಣೆಯಾದರೆ, ಮುಂದಿನ ದಿನ
ಈ ಪ್ರದೇಶಗಳಲ್ಲಿ ಅರಣ್ಯ ವಿರೋಧಿ ಚಟುವಟಿಕೆ
ಅಂದರೆ ಸೇತುವೆ ನಿರ್ಮಾಣ, ಕಿರುಜಲ ವಿದ
ಯೋಜನೆಗಳು, ರಸ್ತೆಗಳ ನಿರ್ಮಾಣ, ರೈಲ್ವೆ ಸಂ
ಯಾವುದೂ ಆಗುವುದಿಲ್ಲ' ಎಂದು ಒಂದು
ವಾದಿಸಿದರೆ, ಮತ್ತೊಂದು ಕಡೆ 'ಅಭಿವೃದ್ಧಿ ಕಾರ್ಯ
ಕಡಿವಾಣವನ್ನು ಹಾಕಲಾಗುತ್ತದೆ' ಎಂದು ಹೇಳು
'ಅರಣ್ಯ ಕಬಳಿಕೆಗೂ ನಿಯಂತ್ರಣವ
ಹೇರಲಾಗುತ್ತದೆ' ಎಂಬುದು ಅವರ ವಾ

ಇದರ ಜೊತೆಯಲ್ಲಿ 'ಪ್ರವಾಸೋದ್ಯ
ಬೆಳವಣಿಗೆಗೆ ಈ ಪಟ್ಟ ಅನುಕೂಲಕರ' ಎ
ಸಮರ್ಥಿಸುತ್ತಿದ್ದಾರೆ. ಇವರು ಎಂತಹ ವಿ
ಮತ್ತು ವಿತ್ತಂಡವಾದಗಳನ್ನು ಮಂಡಿಸುತ್ತಿ
ಎಂಬುದನ್ನು ಗಮನಿಸಬೇಕು. ಒಂದು
ಅರಣ್ಯ ಪ್ರದೇಶವನ್ನು ಅರಣ್ಯೇ
ಚಟುವಟಿಕೆಗಳಿಗೆ ಬಳಸುತ್ತಿರುವುದೇ ಅ
ಇಲಾಖೆ. ನಾಗರಹೊಳೆ ಪ್ರದೇಶದಲ್ಲಿ ಸುಮ
20 ಸಾವಿರ ಹೆಕ್ಟೇರ್ ಪ್ರದೇಶದಷ್ಟು ತೇ
ಮರವನ್ನು ನೆಡಲಾಗಿದೆ. ವನ್ಯಜೀವಿಗ
ಆಹಾರವನ್ನು ಒದಗಿಸುವ ಮರಗಳ ಸ್ಥಳಗ
ವನ್ಯಜೀವಿಗಳು ಸುಲಭವಾಗಿ ಸಂಚರಿಸ
ಸ್ಥಳಗಳಲ್ಲಿ ಈ ತೇಗದಮರಗಳನ್ನು ನೆಡಲಾ
ಹಾಗಾಗಿ ವನ್ಯಜೀವಿಗಳ ಪ್ರಥಮ ಶತ್ರು ಅರಣ್ಯ ಇಲಾಖೆ
ಏನು ಶ್ರೀಸಾಮಾನ್ಯನಂತೂ ಅಲ್ಲ, ಇದರ ಜೊತೆ
ಇಲ್ಲಿ ಪ್ರಾಣಿಗಳಿಗೆ ಆಹಾರ ಪದಾರ್ಥ ಸಿಗುವ ಬದ
ಗಾಂಧಿ ಗುಲಾಬಿಯಂತಹ ಕಳೆ ಗಿಡಗಳು ಹೆಚ್ಚಾಗಿ
ಯಾವುದೇ ರೀತಿಯಲ್ಲಿ ಪ್ರಾಣಿಗಳಿಗೆ ಆಹಾರ ಸಿಗು
ಮತ್ತೊಂದು ಕಡೆ 'ಜಾನುವಾರುಗಳು ಮೇಯ
ಅರಣ್ಯದೊಳಗೆ ಹೋಗುವುದರಿಂದ ಅಲ್ಲಿಯ
ಪ್ರದೇಶವು ಗಟ್ಟಿಯಾಗಿ ಫಲವತ್ತತೆ ಕಡಿಮೆಯಾಗು
ಎಂದು ಹೇಳುತ್ತಾರೆ. ಒಂದು ಕಡೆ ಜಾನುವಾರುಗಳ ಸ
ಕಡಿಮೆಯಾಗುತ್ತಿದೆ ಎಂಬುದು ಅಂಕಿಅಂಶಗಳ
ಮನದಟ್ಟಾಗುತ್ತಿದೆ. ಮತ್ತೊಂದು ಕಡೆ ಜಾನುವಾರು
ಕಾಡಿಗೆ ಹೋದರೆ ಆ ಪ್ರದೇಶವನ್ನು ಜಾನುವಾರು
ಮೆಟ್ಟುವುದರಿಂದ ಫಲವತ್ತತೆ ಕಡಿಮೆಯಾಗುತ್ತದೆ ಎಂದಾ
ಆನೆಯಂತಹ ವನ್ಯಪ್ರಾಣಿ ಕಾಡಿನೊಳಗೆ ಸಂಚರಿಸುವುದರಿ
ಏನಾಗುತ್ತದೆ ಎಂಬ ಬಗ್ಗೆ ಅವರು ಉತ್ತರಿಸುವರೇ? ಜೊ
ಜಾನುವಾರು ಕಾಡಿಗೆ ಹೋಗುವುದರಿಂದ ಆನೆ ಮ
ಜಾನುವಾರುಗಳ ನಡುವೆ ಆಹಾರಕ್ಕಾಗಿ ಸ್ಪರ್ಧೆ ನಡೆಯು
ಎಂಬ ಹಾಸ್ಯಾಸ್ಪದ ಹೇಳಿಕೆಯನ್ನು ನೀಡುತ್ತಾರೆ.

ಅರಣ್ಯ ಪ್ರದೇಶ ಖಾಸಗಿಯವರಿಂ
ಕಬಳಿಕೆಯಾಗಿರುವುದು ಕೊಡಗಿನಲ್ಲಂತೂ ಶೇ. 0.02
ಕಡಿಮೆ ಪ್ರಮಾಣದಲ್ಲಿ ಇರಬಹುದು. ಆದರೆ ಅರ
ಪ್ರದೇಶವನ್ನು ಅರಣ್ಯ ಇಲಾಖೆಯೇ ಸಂರಕ್ಷಿಸದೇ ಇರುವು
ಎಷ್ಟು ಎಂಬುದರ ಬಗ್ಗೆ ಯಾರೂ ಮಾತನಾಡು
ಕೊಡಗು ಜಿಲ್ಲೆಯೊಂದರಲ್ಲೇ ಸುಮಾರು 6 ಸಾವಿರ ಎ
ಮೀಸಲು ಅರಣ್ಯವನ್ನು ರಬ್ಬರ್ ಬೆಳೆಸಲು ನಾಲ್ಕು ಖಾ
ಕಂಪನಿಗಳಿಗೆ 99 ವರ್ಷಕ್ಕೆ ಗುತ್ತಿಗೆ ನೀಡಲಾಗಿದೆ. ಅವರಿ
ಇಲ್ಲಿಯವರೆಗೆ ಗುತ್ತಿಗೆಯ ಶುಲ್ಕವನ್ನು ಅರಣ್ಯ ಇಲಾ
ಪಡೆದಿಲ್ಲ, ಗುತ್ತಿಗೆಯ ಅವಧಿ ಮುಗಿದಿದೆ. ಈ ಪ್ರದೆ
ಮೀಸಲು ಅರಣ್ಯವಾದರೂ ಇದನ್ನು ಖಾಸಗಿ ಪ್ರದೇಶವೆಂ
ಖಾತೆ ವರ್ಗಾವಣೆ ಮಾಡಿಕೊಂಡ ದಾಖಲೆಗಳೂ ಇ
ಸ್ಪಷ್ಟವಾಗಿ ಗುತ್ತಿಗೆಯ ಶರತ್ತು ಉಲ್ಲಂಘನೆಯಾಗಿದ್ದರ
ಅರಣ್ಯ ಇಲಾಖೆ ಕ್ರಮ ತೆಗೆದುಕೊಂಡಿಲ್ಲ, ಪಕ್ಕದ ಸುಳ್ಯದ
ಅರಣ್ಯವನ್ನು ರಬ್ಬರ್ ಮಂಡಳಿಗೆ ರಬ್ಬರ್ ಬೆಳೆಸ

ಕಾಡನ್ನು ಕಬಳಿಸಿದ ಒಂದು ಪ್ರಕರಣ

ಕೊಡಗು-ದಕ್ಷಿಣ ಕನ್ನಡ ಭಾಗದಲ್ಲಿ ಮೂರು ರಬ್ಬರ್ ತೋಟಗಳು ಇವೆ. ಈ ಪೈಕಿ ಥೋಮಸ್ ಕಂಪನಿ ಎಂಬ ಒಂದು ತೋಟವು ಇತ್ತು, ಇದನ್ನು ಕೇರಳದ ಕೊಚ್ಚಿನ್ ಮೂಲದ ಫೆಡರಲ್ ಬ್ಯಾಂಕಿನಲ್ಲಿ ಅಡವಿಟ್ಟು ಸಾಲ ಪಡೆಯಲಾಗಿತ್ತು, ಸಾಲ ಮರುಪಾವತಿಸದೇ ಇದ್ದದ್ದರಿಂದ ಇದು ಹರಾಜಿಗೆ ಒಳಪಟ್ಟಿತ್ತು, ಥಾಮಸನ್' ಕಂಪನಿ ಎಂಬವರು ಇದನ್ನು ಹರಾಜಿನಲ್ಲಿ ಪಡೆದುಕೊಂಡರು. ಅವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡಬೇಕೆಂದು ಆದೇಶಿಸಲಾಯಿತು.

ಮಡಿಕೇರಿಯಲ್ಲಿದ್ದ ಪ್ರಾಮಾಣಿಕ ಸಬ್ ರಿಜಿಸ್ಟ್ರಾರ್‌ರೊಬ್ಬರು "ಇದು ಮೀಸಲು ಅರಣ್ಯ, ಹಾಗಾಗಿ ಖಾತೆ ವರ್ಗಾವಣೆ ಮಾಡಲು ಸಾಧ್ಯವಿಲ್ಲ" ಎಂದು ತಿಳಿಸಿದರು. ಆದರೆ ಮತ್ತೆ ಹರಾಜು ನಡೆಸಿದ ಟ್ರಿಬ್ಯೂನಲ್ ಯಾವುದೇ ಶುಲ್ಕವನ್ನು ಸಹ ಪಡೆಯದೆ ವರ್ಗಾವಣೆ ಮಾಡಬೇಕೆಂದು ಆದೇಶಿಸಿತು. ಇದನ್ನು ಸಬ್ ರಿಜಿಸ್ಟ್ರಾರ್‌ರವರು ನಿರಾಕರಿಸಿದಾಗ ಕರ್ನಾಟಕದ ಉಚ್ಚ ನ್ಯಾಯಾಲಯವು ಟ್ರಿಬ್ಯೂನಲ್ ಆದೇಶವನ್ನು ಪಾಲಿಸುವಂತೆ ಆದೇಶಿಸಿತು. ಇದರಿಂದ ವಿಚಲಿತರಾದ ಸಬ್ ರಿಜಿಸ್ಟ್ರಾರ್‌ರವರು "ಇದು ಮೀಸಲು ಅರಣ್ಯವಾದ ಕಾರಣ ವರ್ಗಾವಣೆ ಮಾಡುವುದು ಸರಿಯಲ್ಲ ಮತ್ತು ವರ್ಗಾವಣೆ ಮಾಡುವುದಾದರೂ ಇದಕ್ಕೆ ಸುಮಾರು 85 ಲಕ್ಷ ರೂಪಾಯಿ ಶುಲ್ಕವನ್ನು ಪಾವತಿಸಬೇಕಾಗಿದೆ. ಆದ್ದರಿಂದ ಕರ್ನಾಟಕದ ಕಾನೂನು ಇಲಾಖೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು" ಎಂದು ಪತ್ರ ಬರೆದರು. ಕಾನೂನು ಇಲಾಖೆ ಈ ಪತ್ರವನ್ನು ಕಸದಬುಟ್ಟಿಗೆ ಹಾಕಿತು. ಫಲವಾಗಿ ಆರು ತಿಂಗಳ ನಂತರ ಖರೀದಿದಾರರು ಸಬ್ ರಿಜಿಸ್ಟ್ರಾರ್ ಮೇಲೆ ನ್ಯಾಯಾಲಯ ನಿಂದನೆ ಮೊಕದ್ದಮೆ ಹೂಡಿದರು. ಸಬ್ ರಿಜಿಸ್ಟ್ರಾರ್‌ರವರು ತೆಪ್ಪಗೆ ಖಾತೆಯನ್ನು ವರ್ಗಾವಣೆ ಮಾಡಿ ಕೈತೊಳೆದುಕೊಂಡರು.

ಅರಣ್ಯ ಇಲಾಖೆ, ಕಾನೂನು ಇಲಾಖೆ ಮತ್ತು ಪರಿಸರವಾದಿಗಳಿಗೆ ಇದರ ಬಗ್ಗೆ ಏನೂ ಅನ್ನಿಸಲಿಲ್ಲ, ಪರಿಸರ ಸಂರಕ್ಷಣೆ ಹೀಗೆ ಅವರುಗಳಿಂದ ಆಗುತ್ತದೆ.

ಮತ್ತೊಂದು ವಿಶೇಷವೆಂದರೆ ಇಲ್ಲಿ ಸಾಲ ಪಡೆದವರು, ಸಾಲ ನೀಡಿದವರು ಮತ್ತು ಹರಾಜಿನಲ್ಲಿ ಪಡೆದವರು ಎಲ್ಲರೂ ಒಬ್ಬರೇ. ಮೀಸಲು ಅರಣ್ಯವನ್ನು ಕಬಳಿಸಿದ ಒಂದು ಕುತಂತ್ರವಿದು.

...ೆ. ಕೊಡಗು-ಕೇರಳದ ಗಡಿಭಾಗದಲ್ಲಿ ಅರಣ್ಯ ...ಶವಾಗಿ ನಡೆಯುತ್ತಿದೆ.

...ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ಯ ...ತ ಹಲವರು. ಈಗ ಎನ್.ಜಿ.ಓ.ಗಳನ್ನು ...ದ್ದಾರೆ. ಇಲಾಖೆಯಲ್ಲಿದ್ದ ವೇಳೆಯಲ್ಲಿ ಇವರ ...ಗಳಿಂದ ಅರಣ್ಯ ನಾಶವಾಗಿತ್ತು. 'ವೃದ್ಧನಾರಿ ...ನ್ನುವಂತೆ ಇಲಾಖೆ ಬಿಟ್ಟ ನಂತರ ಇವರುಗಳು ...ಗ್ಗೆ ಅಪಾರ ಕಾಳಜಿ ತೋರುತ್ತಾರೆ. ಈ ಪೈಕಿ ...ಕೂಡ ಒಬ್ಬರು. ಅವರು ಬರೂಕ ಸಂಸ್ಥೆಗೆ ...ಜಲಪಾತದ ಬಳಿ ಕಿರುಜಲ ವಿದ್ಯುತ್ ... ಅನುಮತಿ ನೀಡಬೇಕೆಂದು ಬ್ರಹ್ಮಗಿರಿ ...ಅರಣ್ಯ ಪ್ರದೇಶದ ಡಿ.ಸಿ.ಎಫ್.ಆಗಿ ಕಾರ್ಯ ...ದ್ದ ಅಣ್ಣಯ್ಯ ಎಂಬವರ ಮೇಲೆ ಒತ್ತಡ ... ಅಣ್ಣಯ್ಯನವರು ಶಿಫಾರಸ್ಸು ಮಾಡಲು ...ರಿಂದ ಅಣ್ಣಯ್ಯನವರ ಮೇಲೆ ಲೋಕಾಯುಕ್ತದ ...ಳ್ಳು ಮೊಕದ್ದಮೆಯನ್ನು ದಾಖಲಿಸಲಾಗುವುದು ...ಕೆಯನ್ನು ಹಾಕಿದ್ದರು ಎಂಬ ಅಂಶವನ್ನು ... ಅರಣ್ಯ ಸಚಿವರಿಗೆ ಬರೆದ ಪತ್ರದಲ್ಲಿ ...ಗಿತ್ತು. ಆಗ ಲೋಕಾಯುಕ್ತದಲ್ಲಿ ಕಾರ್ಯ ...ದ್ದ ಡಾ.ಸುದರ್ಶನ್‌ರವರು ಎಲ್ಲಪ್ಪರೆಡ್ಡಿಯವರ ...ದುನರಾಗಿದ್ದರು ಎಂಬ ಅಂಶವನ್ನು ಕೂಡ ಆ ...ಳಿಸಲಾಗಿದೆ. ಈಗ ಪಶ್ಚಿಮಘಟ್ಟ ಪ್ರದೇಶದಲ್ಲಿ ... ಚಟುವಟಿಕೆ ಆಗಬಾರದು ಎನ್ನುವವರಲ್ಲಿ ...ಕೂಡ ಪ್ರಮುಖರು.

...ಸ್ಕೋ ಯಾವುದೇ ಶರತ್ತುಗಳನ್ನು ಹಾಕುವುದಿಲ್ಲ. ... ಕಾನೂನುಗಳಲ್ಲದೆ ಬೇರೆ ಏನೂ ಇರುವುದಿಲ್ಲ' ... ಸಮರ್ಥಕರ ವಾದ. ಸರಿ, ಹಾಗಿದ್ದರೆ ...ದವರ ಪೌರೋಹಿತ್ಯ ನಮಗೇಕೆ ಎಂಬುದರ ... ಬಳಿ ಉತ್ತರವಿಲ್ಲ. 'ಈ ಪ್ರದೇಶವು ವಿಶ್ವದ ...ಯುವುದರಿಂದ ಪ್ರವಾಸೋದ್ಯಮ ಬೆಳೆಯುತ್ತದೆ' ...ಳುತ್ತಾರೆ. ಇತ್ತೀಚೆಗಷ್ಟೇ ಸರ್ವೋಚ್ಚ ನ್ಯಾಯಾಲಯ ...ಹುಕ್ಷ್ಮ ವಲಯದಲ್ಲಿ ಪ್ರವಾಸೋದ್ಯಮ ...ಕೆಂದು ಆದೇಶಿಸಿದೆ. ಪ್ರವಾಸೋದ್ಯಮದಿಂದ ...ಪು ಏನು ಎಂಬುದು ಎಲ್ಲರಿಗೂ ತಿಳಿದಿದೆ. ...ಸತೆ ಇತ್ತ ಮುಖ ಮಾಡುತ್ತಾರೆ ಎಂದರೆ ... ವರ್ಗಕ್ಕೆ ಬೇಕಾದ ಚಟುವಟಿಕೆ ನಡೆಯುತ್ತಿದೆ. ...ಜಿಗಾಗಿ ನಮ್ಮ ಸಂಸ್ಕೃತಿ, ಆಚಾರ-ವಿಚಾರಗಳು ...ದಂತಹ ಪರಿಸ್ಥಿತಿ ಎದುರಾಗುತ್ತದೆ.

...ಲ್ಲಿನ ಇತರೇ ಸ್ಮಾರಕಗಳನ್ನು ವಿಶ್ವಪಾರಂಪರಿಕ ...ೇರ್ಪಡೆಗೊಳಿಸುವುದಕ್ಕೂ ಪಶ್ಚಿಮಘಟ್ಟವನ್ನು ...ಳಿಸುವುದಕ್ಕೂ ವ್ಯತ್ಯಾಸವಿದೆ. ಉದಾಹರಣೆಗೆ ...ಲ್ ಸೇರ್ಪಡೆಗೊಂಡರೆ ಏನೂ ನಷ್ಟವಿಲ್ಲ, ಅದು ...ಪ್ರವಾಸಿತಾಣ. ಮತ್ತಷ್ಟು ಪ್ರವಾಸಿಗರು ಅಲ್ಲಿಗೆ ... ಆದರೆ ಪಶ್ಚಿಮಘಟ್ಟ ಎನ್ನುವುದು ಸುಮಾರು ...ಮೀ. ಉದ್ದಕ್ಕೆ ಐದು ರಾಜ್ಯಗಳ ನಡುವೆ ಇರುವ ...ಲ್ಲಿ ಜನಜೀವನ ಇದೆ. ಅವರ ಬದುಕಿನ ಬಗ್ಗೆ ... ಮಾತು ಸಮರ್ಥಕರಿಂದ ಬರುವುದಿಲ್ಲ, ಕೇವಲ ...ರಕ್ಷಣೆ ಮತ್ತು ಪ್ರವಾಸೋದ್ಯಮದ ಬೆಳವಣಿಗೆಯ ...ನ್ನು ಆಡುತ್ತಾರೆ. ಹಾಗಾದರೆ ಇಲ್ಲಿಯವರೆಗೆ ...ಘಟ್ಟವನ್ನು ಸಂರಕ್ಷಿಸಿಕೊಂಡು ಬಂದವರು ಯಾರು ...ಪ್ರಶ್ನೆಗೆ ಮೌನ ತಳೆಯುತ್ತಾರೆ. ಇವತ್ತು ...ಪರಿಕ ಪಟ್ಟಿಗೆ ಸೇರ್ಪಡೆಗೊಳಿಸಬೇಕು ಎನ್ನುವ ... ಈ ಅರಣ್ಯ ಪ್ರದೇಶ ಇದೆ ಎಂದಾದರೆ, ...ಗಿಯೂ ಇದು ಸ್ಥಳೀಯರು ಉಳಿಸಿಕೊಂಡು ...ಕೃತಿಯೇ ವಿನಃ ಢೋಂಗಿ ಪರಿಸರವಾದಿಗಳು ...ಕ್ಕೆ ಅರಣ್ಯ ಅಧಿಕಾರಿಗಳು ಉಳಿಸಿದ ಅರಣ್ಯವಲ್ಲ ...ಷ್ಟಿ ಮನಗಾಣುವುದು ಅಗತ್ಯ.


... ಗಮನಿಸಬೇಕಾದ ಮತ್ತೊಂದು ಅಂಶವಿದೆ. ...ಟ್ಟ ಪ್ರದೇಶವನ್ನು ಸೂಕ್ಷ್ಮ ಪರಿಸರ ವಲಯ ...ಘೋಷಿಸುವ ಚಟುವಟಿಕೆಯೂ ನಡೆಯುತ್ತಿದ್ದು ...ನೇತೃತ್ವವನ್ನು ಮಾಧವ ಗಾಡ್ಗಿಲ್‌ರವರು ...ವಹಿಸಿದ್ದಾರೆ. ಅವರು ಈಗಾಗಲೇ ಸಿದ್ಧಪಡಿಸಿರುವ ...ಪ್ರಕಾರ ಈ ಪ್ರದೇಶಗಳಲ್ಲಿ ಯಾವುದೇ ಅಭಿವೃದ್ಧಿ ...ಟಿಕೆಗಳನ್ನು ಮಾಡುವಂತಿಲ್ಲ, ಮಾತ್ರವಲ್ಲ ...ಂತಹ ಪ್ರದೇಶದಲ್ಲಿ ಕಾಫಿ ಕೃಷಿಗೂ ಅಡ್ಡಿಯಾಗುವ ...ದೆ. ಏಕೆಂದರೆ ಅರಣ್ಯೇತರ ಚಟುವಟಿಕೆ ಈ ...ಲ್ಲಿ ಆಗಬಾರದು ಎಂದು ಅವರ ವರದಿಯಲ್ಲಿ ...ರ್ವೋಚ್ಚ ನ್ಯಾಯಾಲಯವು ಕಾಫಿಯನ್ನು ಕೃಷಿ ...ಯಲ್ಲ ಎಂದು ಹೇಳಿದೆ.

...ಹ ಹಲವಾರು ವೈರುಧ್ಯಗಳು ಇರುವುದರಿಂದ ...ರಂಪರಿಕ ಪಟ್ಟಿಗೆ ಈ ಪ್ರದೇಶ ...ಗೊಳಿಸುವುದಕ್ಕೆ ವಿರೋಧವಿದೆ. ಜನರ ...ಕ್ಕೆ ಮನ್ನಣೆಯೋ ಅಥವಾ ಬೆರಳೆಣಿಕೆಯಷ್ಟು ...ದಿಗಳ ಮಾತಿಗೆ ಮನ್ನಣೆಯೋ ಎಂಬುದು ... ಈ ಭಾಗದಲ್ಲಿರುವವರು ಯಾರೂ ಕೂಡ ...ಅಭಿವೃದ್ಧಿ ಆಗಬಾರದು ಎಂದು ಹೇಳುತ್ತಿಲ್ಲ. ...ಸಿಕೊಳ್ಳಲು ನಮಗೆ ತಿಳಿದಿದೆ. ಬಾಹ್ಯ ...ಪ ಎಷ್ಟುಬೇಕೋ ಅಷ್ಟು ಇದರ ಸಾರ.

● ಬಿ.ಎಸ್.ಮನುಶೆಟ್ಟಿ

ಮರೆಯಾದ ಮಕ್ಕಳ ಕವಿ ಶಂ.ಗು.ಬಿರಾದಾರ

ಹಸಿರು ಪಕ್ಕದ ಚಂದದ ಗಿಳಿಗೆ ಹಣ್ಣನು ಕೊಟ್ಟು, ಹಾಲನು ಕುಡಿಸಿ, ಹಾರಲು ಕಲಿಸಲು ಕೇಳಿ ಮುಗಿಲಿಗೆ ಹಾರಿಬಿಟ್ಟರೆ ಶಂ.ಗು.?



ಮರಳಿ ಬಾರದ ಲೋಕಕ್ಕೆ ಪಯಣ ಬೆಳೆಸಿದ ಬಿಜಾಪುರದ ಈ ಕವಿ ಬೆಂಗಳೂರಿನಲ್ಲಿ ಹುಟ್ಟಿದ್ದರೆ ರಾಷ್ಟ್ರಕವಿಯೆಂದು ಖ್ಯಾತರಾಗುತ್ತಿದ್ದರೋ ಏನೋ? ಮಕ್ಕಳ ಸಾಹಿತ್ಯದಾಗಸದ ಈ ನಕ್ಷತ್ರ 6/7/2012ರಂದು ಕಳಚಿ ಬಿದ್ದಿದೆ. ರಾಜಧಾನಿಯಿಂದ ದೂರವಿರುವದರಿಂದಲೋ, ರಾಜಕಾರಣಿಗಳಿಂದ ಸುದೂರ ಅಂತರ ಕಾಯ್ದುಕೊಂಡಿದ್ದರಿಂದಲೋ ಈ ಶುಭ್ರಮನದ ಕವಿಗೆ ಸಿಗಬೇಕಾದಷ್ಟು ಮನ್ನಣೆ, ಮಾನ್ಯತೆ, ಗೌರವ ಸಿಗಲಿಲ್ಲವೆಂಬ ಕೊರಗು ಕಾಡುತ್ತದೆ.

ಬರದ ನಾಡಲ್ಲಿ ಸಾಹಿತ್ಯದ ಹುಲುಸು ಫಸಲು ತೆಗೆದ ಇವರ ಸಾಧನೆ ಗೌರಿಶಿಖರ ಮೀರಿಸುವಂಥದ್ದು. ಮಕ್ಕಳಿಗೆ ಉಣಬಡಿಸಿದ್ದೆಲ್ಲಾ ಉತ್ಕೃಷ್ಟ ಮಾದರಿಯ ಸಕ್ಕರೆ ಸಾಹಿತ್ಯ! 'ನಾವು ಎಳೆಯರು, ನಾವು ಗೆಳೆಯರು, ಹೃದಯ ಹೂವಿನ ಹಂದರ, ನಾಳೆ ನಾವೇ ನಾಡ ಹಿರಿಯರು ನಮ್ಮ ಕನಸದು ಸುಂದರ' ಆರು ದಶಕಗಳಿಂದ ಅದೆಷ್ಟು ಜನರ ನಾಲಿಗೆಯ ಮೇಲೆ ನಲಿದಾಡಿಲ್ಲ, ಅದೆಷ್ಟು ಮುಗ್ಧರು ಹಾಡಿ ಕುಣಿದಿಲ್ಲ?

ತೆಲುಗಿಗೂ ಅನುವಾದಗೊಂಡು ಅಲ್ಲಿ ಮಕ್ಕಳ ರಾಷ್ಟ್ರಗೀತೆಯಾಗಿ ಮಾನ್ಯತೆ ಪಡೆದಿದೆಯೆಂದರೆ ಶಂ.ಗು. ಬಿರಾದಾರರ ಕರ್ತೃತ್ವ ಶಕ್ತಿಯ ಪರಿಚಯ ಯಾರಿಗಾದರೂ ಆದೀತು. ಅಲ್ಲಿಯ ರಾಷ್ಟ್ರಕವಿ ದಾಶರಥಿ ಅದನ್ನು ಅನುವಾದಿಸಿದ್ದಾರೆ. 'ಪಿಲ್ಲಲಾರಾ ಪಾಪಲ್ಲಾರ..ಭಾವೀಭಾರತ ಪೌರಲ್ಲಾರ..' ಎಂದು ತೆಲಗು ಮಕ್ಕಳನ್ನೂ ರಂಜಿಸಿದೆ. ಆತ್ಮಗೌರವ ಪುಟಿದೆಬ್ಬಿಸುವದರೊಂದಿಗೆ ಕುಣಿದು ಕುಪ್ಪಳಿಸಲು ಹಚ್ಚಿದೆ. ಮಹಾರಾಷ್ಟ್ರದ ಪಠ್ಯಪುಸ್ತಕಗಳಲ್ಲಿಯೂ ಇವರ ಕತೆ, ಕವಿತೆ ಪ್ರಕಟಗೊಂಡು ಮಕ್ಕಳ ಮೇಧೋರಂಜನೆಗೆ ಕಾರಣವಾಗಿವೆ.

1926 ರ ಮೇ 17 ರಂದು ಬಿಜಾಪುರ ಜಿಲ್ಲೆಯ ಬಬಲೇಶ್ವರದಲ್ಲಿ ಜನಿಸಿದ್ದ ಶಂ.ಗು. 87 ವರ್ಷದ ತುಂಬು ಬಾಳನ್ನು ಬದುಕಿದರು. ಶಿಕ್ಷಕ ವೃತ್ತಿಗೆ ನ್ಯಾಯ ಒದಗಿಸುತ್ತಾ ಮಕ್ಕಳೊಂದಿಗೆ ಮಕ್ಕಳಾಗಿ, ಆದರ್ಶ ಶಿಕ್ಷಕರಾಗಿ ರಾಜ್ಯ ರಾಷ್ಟ್ರಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿಗಳನ್ನು ಪಡೆದಿದ್ದರು. 2001ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದುಕೊಂಡಿದ್ದರು. ತಮ್ಮ ಪ್ರಭಾವಳಿಯಲ್ಲಿ ಅನೇಕ ಪ್ರತಿಭಾವಂತರನ್ನು ಬೆಳಕಿಗೆ ತಂದ ಸತ್ಕೀರ್ತಿ ಅವರಿಗೆ ಸಲ್ಲುತ್ತದೆ.

1979ರಿಂದ 1982ರ ಅವಧಿಗೆ ಬಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾಗಿ, ಗೋಕಾಕ ಚಳವಳಿಯ ಕನ್ನಡ ಕ್ರಿಯಾ ಸಮಿತಿಯ ಉಪಾಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಪಠ್ಯಪುಸ್ತಕ ಸಮಿತಿ ಸದಸ್ಯರಾಗಿ, ಬಿಜಾಪುರ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಚಿಕ್ಕವರಿದ್ದಾಗಲೇ ಗೆಳೆಯರ ಬಳಗ ಕಟ್ಟಿ ನಾಟಕವಾಡಿಸಿ ಊರಜನರಲ್ಲಿ ಶಿಕ್ಷಣಜಾಗೃತಿಗೆ ಕಾರಣರಾಗಿದ್ದರು. ಕೈ ಬರಹದ ಪತ್ರಿಕೆ ಹೊರಡಿಸಿ ಅಕ್ಷರಪ್ರೇಮ ಮೆರೆದಿದ್ದರು. ಸೇವಾದಳ ಸಂಘಟನೆ ಮಾಡಿ ಗ್ರಾಮ ನೈರ್ಮಲ್ಯಕ್ಕೆ ನಾಂದಿ ಹಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ತಮ್ಮ 16ನೆಯ ವಯಸ್ಸಿನಲ್ಲಿಯೇ ಬ್ರಿಟಿಷರ ವಿರುದ್ಧ ರಣದುಂದುಭಿ ಬಾರಿಸಿ 'ಪೊಲೀಸರ ಪಾಶ' ಎಂಬ ನಾಟಕ ಬರೆದು, ಪ್ರದರ್ಶಿಸಿ ಪೊಲೀಸರಿಂದ ಬಂಧನಕ್ಕೊಳಗಾಗಿದ್ದರು.

ಶಂ.ಗು.ಬಿರಾದಾರ ಏನನ್ನೇ ಬರೆದರೂ ಅಚ್ಚುಕಟ್ಟಾಗಿ, ಶಿಸ್ತುಬದ್ಧವಾಗಿ ಬರೆಯುತ್ತಿದ್ದರು. ಲೇಖನ, ಕವನ, ಕತೆ, ಚುಟುಕು, ಕಾದಂಬರಿ ಇತ್ಯಾದಿ ವೈವಿಧ್ಯಮಯ ಬರವಣಿಗೆಯಲ್ಲಿ ಸೃಜನಶೀಲತೆ ಮೆರೆದುದರಲ್ಲದೇ ಚರಿತ್ರೆ ನಾಟಕ ಸಂಪಾದನೆಯಲ್ಲಿಯೂ ಮೇಲುಗೈ ಸಾಧಿಸಿ ತನ್ನತನದ ಛಾಪು ಬಿಟ್ಟವರು.

ಇಷ್ಟೆಲ್ಲ ಮಾಡಿಯೂ ಎಲೆಮರೆಯಕಾಯಿಯಂತೆಯೇ ಇದ್ದು ಎಂದಿಗೂ ಪ್ರಚಾರ ಬಯಸಿದವರಲ್ಲ. ಇವರನ್ನು ಬೆಳೆಸಿ, ಪ್ರೋತ್ಸಾಹಿಸಿ ಡಾಕ್ಟರೇಟ್ ನೀಡುವುದಾಗಲಿ, ದೇಶ, ವಿದೇಶಕ್ಕೆ ಪರಿಚಯಿಸುವ ಮಾತಂತಿರಲಿ ದಿವ್ಯ ನಿರ್ಲಕ್ಷ್ಯ ತೋರುವ ಧೋರಣೆಯಿಂದಾಗಿ ಈ ಬಾಲಸಾಹಿತ್ಯದಾಕಾಶದ ಚಂದಿರ ಮೋಡದ ಮರೆಯಲ್ಲಿಯೇ ತನ್ನ ಬೆಂಬೆಳಕು ಚೆಲ್ಲಿ ಮರೆಯಾಯಿತು ಎಂದರೆ ಅದು ಯಾವ ಕಾರಣಕ್ಕೂ ಅತಿಶಯೋಕ್ತಿಯಲ್ಲ.

16 ಸ್ವರಚಿತ ಕೃತಿ, 9 ಸಂಪಾದಿತ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕರ್ಪಿಸಿದ ಕವಿಗೆ ಅವರು 75 ಸಂವತ್ಸರ ಕಂಡ ಸಂದರ್ಭದಲ್ಲಿ ಕುಟುಂಬದವರು, ಅಭಿಮಾನಿ ಬಂಧುಗಳು, ಶಿಷ್ಯರು, ಸ್ನೇಹಿತರು ಸೇರಿ ಅರ್ಪಿಸಿದ ಅಭಿನಂದನಾ ಗ್ರಂಥ 'ಹೂವಿನ ಹಂದರ' ಅವರ ವ್ಯಕ್ತಿತ್ವದ ಅನೇಕ ಮುಖಗಳನ್ನು ಅನಾವರಣಗೊಳಿಸುತ್ತದೆ.

ಹೀಗೆ ಬಿಜಾಪುರದ ಶಂ.ಗು.ಬಿರಾದಾರ ಬಿರುದುದಾರರೂ ಆಗಿ, ಮುಗ್ಧ ಕವಿಗಳ ಸರದಾರರೂ ಆಗಿ ಬಹುಕಾಲ ಜನಮಾನಸದಲ್ಲಿ ನೆಲೆಸಬಲ್ಲ ಕವಿ ಆಗಿದ್ದಾರೆ. ಶುಭ್ರವಸ್ತ್ರಾನ್ವಿತ, ಎತ್ತರದ ನಿಲುವಿನ ಠೀವಿ, ಮೌಢ್ಯ ಹಿಂಗಳೆದು, ಡಂಭ ಅನಾದರಿಸಿದ ಅನುಭಾವಿ ಅವರು ಕಟ್ಟಿ ಬೆಳೆಸಿದ ಮಕ್ಕಳ ಸಾಹಿತ್ಯ ಸಂಗಮವೀಗ ಅನಾಥ.

ಈ ಹಿರಿಯಜೀವಿ ಇರಬೇಕಿತ್ತು ಇನ್ನಷ್ಟು ಕಾಲ. ದಾರಿತಪ್ಪುವವರನು ಹಿಂಡಲು ಕಿವಿ.. ಈ ಕವಿ

● ಡಾ.ಅಮೀರುದ್ದೀನ್ ಖಾಜಿ

ದೇಶಭಕ್ತ, ಧರ್ಮ-ಸಂಸ್ಕೃತಿ ರಕ್ಷಕರ ಸಾಹಸವನ್ನು ಟೀಕಿಸುವುದನ್ನು ನಿಲ್ಲಿ

ಒಂದು ಪತ್ರ

ಭಾರತೀಯ ಸುಸ್ಕೃತಿ ಮತ್ತು ಧರ್ಮ ರಕ್ಷಣೆಯ ಏಕೈಕ ಉದ್ದೇಶದಿಂದ ಹಿಂದೂ ಜಾಗರಣಾ ವೇದಿಕೆಯ ವೀರಯೋಧರು ಇತ್ತೀಚೆಗೆ ಮಂಗಳೂರಿನ ಹೋಂ ಸ್ಟೇಯ ಮೇಲೆ ನಡೆಸಿದ ದಾಳಿಯನ್ನು ನೀವು ಅಷ್ಟೊಂದು ಕಠೋರವಾಗಿ ಟೀಕಿಸಿದ್ದು ನನಗೆ ಸರಿಕಾಣಲಿಲ್ಲ. ಈ ಹಿನ್ನೆಲೆಯಲ್ಲಿ ಕೆಲವು ವಿಚಾರಗಳನ್ನು ನಾನು ಮಂಡಿಸ ಬಯಸುತ್ತೇನೆ.

ಮೊದಲಾಗಿ ಅವರನ್ನು ನೀವು ದಾಳಿಕೋರರು, ದುಷ್ಕರ್ಮಿಗಳು, ಕಿರಾತಕರು, ಗೂಂಡಾಗಳು, ಪುಂಡರು, ಕಿಡಿಗೇಡಿಗಳು ಎಂದೆಲ್ಲ ಕರೆಯುವುದನ್ನು ನಿಲ್ಲಿಸಬೇಕು. ಹಾಗೆ ಕರೆಯುವುದೆಂದರೆ ಅದು ದೇಶಕ್ಕೆ, ಧರ್ಮಕ್ಕೆ ಸಂಸ್ಕೃತಿಗೆ ನೀವು ಎಸಗುವ ಘೋರ ಅಪಚಾರ. ಯಾಕೆಂದರೆ, ಅವರೆಲ್ಲ ಮಹಾನ್ ದೇಶಭಕ್ತರೂ, ಧರ್ಮ ಸಂಸ್ಕೃತಿಯ ರಕ್ಷಣೆಗಾಗಿ ಜೀವದ ಹಂಗು ತೊರೆದು ಹೋರಾಡುವ ವೀರ ಸೇನಾನಿಗಳು ಆಗಿದ್ದಾರೆ.

ಸದರಿ ಹೋಂ ಸ್ಟೇಯಲ್ಲಿ ಹುಡುಗಿಯರು ಮಾತ್ರವಲ್ಲ, ಕೆಲವರು ಹುಡುಗರೂ ಇದ್ದು ಧರ್ಮ, ಸಂಸ್ಕೃತಿ ಮತ್ತು ನೈತಿಕತೆಯ ದೃಷ್ಟಿಯಿಂದ ಅತ್ಯಂತ ಅಪಾಯಕಾರಿಯಾದ ಚಿಕನ್, ಕೋಕಾಕೋಲಾ ಮಾತ್ರವಲ್ಲ, ಕೆಲವು ಬೀರು ಬಾಟಲುಗಳು ಕೂಡಾ ಅಲ್ಲಿದ್ದವು! ಅಲ್ಲಿದ್ದ ಹುಡುಗಿಯರಂತೂ ಸೀರೆ, ಕುಂಕುಮ ತೊಡುವುದನ್ನು ಬಿಟ್ಟು ಆಧುನಿಕ ಉಡುಗೆಯಲ್ಲಿದ್ದರು. ಅವರು ಅಲ್ಲಿ ಪೂಜೆ, ಭಜನೆ ಇತ್ಯಾದಿ ಧಾರ್ಮಿಕ ಕಾರ್ಯಕ್ರಮದಲ್ಲಿ ತೊಡಗದೆ, ಭಾರತೀಯ ಸಂಸ್ಕೃತಿಗೆ ಘೋರ ಹಾನಿಉಂಟುಮಾಡುವ ಬರ್ತ್ ಡೇ ಆಚರಣೆಯಲ್ಲಿ ತೊಡಗಿದ್ದರು. ಸಂಸ್ಕೃತಿಯ ಬಗ್ಗೆ ಕಾಳಜಿ ಇರುವ ಯಾವ ಹಿಂದುವೂ ಇದನ್ನು ಸಹಿಸುವುದು ಸಾಧ್ಯವಿಲ್ಲವೆಂದ ಮೇಲೆ ಹಿಂಜಾವೇ ಸುಮ್ಮನಿರುವುದು ಸಾಧ್ಯವೇ? ಹಾಗಾಗಿ ಅಲ್ಲಿಗೆ ಪ್ರವೇಶಿಸಿ ಆ ಮಕ್ಕಳಿಗೆ 'ನಯವಾಗಿ' ಸಂಸ್ಕೃತಿಯ ಪಾಠ ಹೇಳಲಾಯಿತು. ಹೀಗೆ ಪಾಠ ಹೇಳುವಾಗ ಅಟ್ಟಾಡಿಸುವ, ಕಪಾಳಕ್ಕೆ ಬಡಿಯುವ, ಎಳೆದಾಡುವ, ವಿವಸ್ತ್ರಗೊಳಿಸುವ ಮೊದಲಾದ ಈಗಾಗಲೇ ಬಳಕೆಯಲ್ಲಿರುವ ಧರ್ಮಸಮ್ಮತ ವಿಧಾನಗಳನ್ನಷ್ಟೇ ಬಳಸಲಾಯಿತು. ಕೆಲವೊಮ್ಮೆ ಅಪ್ಪಿತಪ್ಪಿ ಕೈಗಳು ಅಲ್ಲಿನ ಹುಡುಗಿಯರ ಎದೆಗಳಿಗೂ ತಾಕಿರಬಹುದಾದರೂ, ರಟ್ಟೆಗಳಿಗೂ ಎದೆಗೂ ಹೆಚ್ಚು ಅಂತರವಿಲ್ಲದಿರುವುದು ಇದಕ್ಕೆ ಕಾರಣವೇ ಹೊರತು, ಇದನ್ನು ಕಾಮದ ತೀಟೆ ತೀರಿಸಿಕೊಂಡದ್ದು ಎಂದು ಕರೆಯುವುದು ಸರಿಯಲ್ಲ. ಅಲ್ಲದೆ, ಹುಡುಗಿಯರನ್ನು ಮುಟ್ಟಬಾರದ ಸ್ಥಳದಲ್ಲೆಲ್ಲ ಮುಟ್ಟುವ ಸಂದರ್ಭ ಅನಿವಾರ್ಯವಾಗಿ ಎದುರಾದಾಗಲೂ ಈ ಸಾಂಸ್ಕೃತಿಕ ಕಟ್ಟಾಳುಗಳು 'ಭಾರತ್ ಮಾತಾ ಕಿ ಜೈ, ವಂದೇ ಮಾತರಂ' ಎಂದೆಲ್ಲ ಘೋಷಣೆ ಕೂಗುತ್ತಿದ್ದರು ಎನ್ನುವುದನ್ನು ಅವಶ್ಯವಾಗಿ ನೀವು ಗಮನಿಸಬೇಕು.

ಹಿಂದೂ ಧರ್ಮಕ್ಕೆ ಜಾತಿ ತಾರತಮ್ಯಗಳೇ ಮಹಾಶಾಪ, ಅವೇ ಧರ್ಮಕ್ಕೆ ಚ್ಯುತಿ ಉಂಟುಮಾಡುವವು ಎಂದು ಕೆಲವರು ಹೇಳುತ್ತಾರೆ. ಇದು ಶುದ್ಧ ತಪ್ಪು ಅಭಿಪ್ರಾಯ. ಆಧುನಿಕ ಉಡುಗೆತೊಡುಗೆಗಳನ್ನು ತೊಡುವುದು, ಪಾರ್ಟಿ ಮಾಡುವುದು, ಎಲ್ಲಕ್ಕಿಂತಲೂ ಹೆಚ್ಚಾಗಿ ಮನೆಯೊಳಗಿರಬೇಕಾದ ಹೆಣ್ಣುಮಕ್ಕಳು ಹೊರಗೆ ಬರುವುದು, ಗಂಡುಮಕ್ಕಳೊಂದಿಗೆ ಮುಕ್ತವಾಗಿ ಬೆರೆಯುವುದು, ಅವರನ್ನು ಮೀರಿಸುವಂತೆ ಓದಿನಲ್ಲಿ ಮುಂದೆ ಸಾಗುವುದು, ಅವರಿಗೆ ಸರಿಸಮನಾಗಿರಬೇಕು ಎಂದು ಬಯಸುವುದು ಇವೆಲ್ಲ ಧರ್ಮನಾಶ ಮಾಡುವ ಸಂಗತಿಗಳು. ಧರ್ಮಕ್ಕೆ ಚ್ಯುತಿ ಉಂಟಾಗುವ ಪ್ರಮೇಯ ಬಂದಾಗಲೆಲ್ಲ ನಾನು ಅವತರಿಸುತ್ತೇನೆ ಎಂದು ಶ್ರೀಕೃಷ್ಣ ಪರಮಾತ್ಮ ಆಶ್ವಾಸನೆ ಕೊಟ್ಟಿದ್ದರೂ, ಆತ ಬರುವವರೆಗೆ ಸುಮ್ಮನೆ ಕೂರಲಾಗುತ್ತದೆಯೇ? ಅಲ್ಲಿಯವರೆಗೆ ಆ ಹೊಣೆಯನ್ನು ಹಿಂಜಾವೇ, ಬಜರಂಗದಳ, ಶ್ರೀರಾಮಸೇನೆಗಳು ನಿರ್ವಹಿಸಲೇಬೇಡವೇ?

ಹೀಗೆ ಧರ್ಮ-ಸಂಸ್ಕೃತಿ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತು ಜೈಲಿಗೆ ಹೋಗುವವರೆಲ್ಲ ತಳಸಮುದಾಯಕ್ಕೆ ಸೇರಿದವರೇ ಹೊರತು, ಇವರ ಸೂತ್ರಧಾರರಾದ ಮೇಲ್ವರ್ಗದವರಲ್ಲ, ಈ ಮೇಲ್ವರ್ಗದವರು ಕಂಡವರ ಮಕ್ಕಳನ್ನು ಛೂಬಿಟ್ಟು ನೆಮ್ಮದಿಯಿಂದಿದ್ದಾರೆ ಎಂದೂ ಕೆಲವು ಧರ್ಮ ವಿರೋಧಿಗಳು ಆಕ್ಷೇಪಿಸುತ್ತಾರೆ. ಈ ಸೂತ್ರಧಾರ ಬ್ರಾಹ್ಮಣರಾದ ಭಟ್ಟ, ಕಾರಂತ, ಪುರಾಣಿಕ ಮೊದಲಾದವರ ಮಕ್ಕಳು ವೈದ್ಯಕೀಯ, ಇಂಜಿನಿಯರಿಂಗ್ ಮೊದಲಾದ ಉನ್ನತ ವ್ಯಾಸಂಗ ಮಾಡುತ್ತಾ, ಉದ್ಯೋಗದಲ್ಲಿಯೂ ಉನ್ನತ ಸ್ಥಾನಗಳಲ್ಲಿರುವಾಗ ಅವರು ಧರ್ಮ ರಕ್ಷಣೆಗಾಗಿ ಬೀದಿಗೆ ಬರಲು ಆಗುತ್ತದೆಯೇ? ಅದಕ್ಕೆಲ್ಲ ಪುರುಸೊತ್ತಿರುತ್ತದೆಯೇ? ಹಾಗಿರುವಾಗ ಬೀಡಿಕಟ್ಟುವ, ಗೇರುಬೀಜ ಕಾರ್ಖಾನೆಗೆ ಹೋಗುವ, ಕೂಲಿನಾಲಿ ಮಾಡುವ ತಾಯಂದಿರ ಮಕ್ಕಳು ಇದನ್ನೆಲ್ಲ ಮಾಡದೆ ಕೈಕಟ್ಟಿ ಕುಳಿತರೆ ಇನ್ನು ಧರ್ಮ, ಸಂಸ್ಕೃತಿ ಉಳಿಸುವವರು ಯಾರು? ಧರ್ಮ ಸಂಸ್ಕೃತಿ ನಾಶವಾದ ಮೇಲೆ ನಾವು ಬದುಕಿದ್ದು ಏನು ಪ್ರಯೋಜನ?

ಸದರಿ ದಾಳಿಕೋರರು ಜೈಲಿಗೆ ಹೋದರೆಂದು ಕೆಲವರು ಅಪಹಾಸ್ಯ ಮಾಡುತ್ತಾರೆ. ಅವರು ಜೈಲಿಗೆ ಹೋದರೇನಾಯಿತು? ಮಹಾತ್ಮ ಗಾಂಧಿ ಜೈಲಿಗೆ ಹೋಗಿರಲಿಲ್ಲವೇ? ಇಷ್ಟಕ್ಕೂ ಈ ಮಂದಿ ಜೈಲಿಗೆ ಹೋಗುತ್ತಿರುವುದು ಧರ್ಮ-ಸಂಸ್ಕೃತಿರಕ್ಷಣೆಯಂತಹ ಮಹಾ ಪುಣ್ಯಕಾರ್ಯಕ್ಕಾಗಿಯಲ್ಲವೇ?

ಹೆಣ್ಣುಮಕ್ಕಳು ಪಬ್‌ಗೆ, ಪಾರ್ಟಿಗ... ಹೋಗಬಾರದು? ಸಂವಿಧಾನಬದ್ಧ ಸರಕಾರಗಳೇ ... ನೀಡಿರುವುದರಿಂದ ಇವುಗಳಿಗೆಲ್ಲ ಹೋಗಲು ಪು... ರುವಷ್ಟೇ ಅಧಿಕಾರ ಮಹಿಳೆಯರಿಗೂ ಇಲ್ಲವೇ? ... ಎನ್ನುವುದು ಸಂವಿಧಾನವೇ ನಮಗೆ ನೀಡಿರುವ ಹ... ಎಂದೂ ಕೆಲವರು ಮೂರ್ಖ ಪ್ರಶ್ನೆಗಳನ್ನು ಕೇ... ಸಂವಿಧಾನ ಇಂತಹ ಹಕ್ಕನ್ನು ನೀಡಿರಬಹುದು ... ಸಂವಿಧಾನಕ್ಕಿಂತಲೂ ಧರ್ಮಶಾಸ್ತ್ರವೇ ಶ್ರೇಷ್ಠ... ಧರ್ಮಶಾಸ್ತ್ರಕ್ಕೆ ಅನುಸಾರವ... ನಡೆದು ಕೊಳ್ಳಬೇಕ... ಸಾಧುವಲ್ಲವೇ?

ಹೋಮ್ ಸ್ಟೇಯ... ಯುತ್ತಿದ್ದ ಪಾರ್ಟಿಯ ... ಜರುಗಿಸಿದ 'ಕ್ರಮವನ್ನು' ... ಸುವವರು ರಾಜ್ಯ ... ಆಯೋಗದ ಅಧ್ಯಕ್ಷರ ... ವಿನಾಕಾರಣ ಆಕ್ಷೇಪ ... ಸಂತ್ರಸ್ತ ಹುಡುಗನ ತ... ಚಾರಿತ್ರ್ಯದ ಬಗ್ಗೆ ಆಯೋ... ಅಧ್ಯಕ್ಷರು ಮಾತನಾ... ಸರಿಯೇ? ಎಂದೂ ಪ್ರಶ್ನಿ... ಆದರೆ ನಮ್ಮ ಅಧ... ಎಷ್ಟೊಂದು ಬುದ್ಧಿವ... ಸಂವೇದನಾಶೀಲರು ... ಸಮಸ್ಯೆಯ ಬಗ್ಗೆ ಎಷ್ಟೊಂ... ಜ್ಞಾನ ಅವರಿಗಿದೆ ಎನ್ನು... ಇಲ್ಲಿ ಅವಶ್ಯವಾಗಿ ಗಮನಿ... ಮಗುವನ್ನು ಹೆತ್ತುದು ... ಯಲ್ಲವೇ? ತಾಯಿ ... ರಿಂದಲ್ಲವೇ ಈ ಮಕ್ಕಳು ... ವಿರೋಧಿ ಚಟುವಟಿಕೆ'ಗಳಲ್ಲಿ ಭಾಗಿಯಾಗಿರು... ಹಾಗಾಗಿ ತಾಯಿಯನ್ನು 'ಸರಿಮಾಡುವುದೇ' ... ಸಮಸ್ಯೆಗಳಿಗೆ ಪರಿಹಾರ ನೀಡುವ ಅತ್ಯುತ್ತಮ ಉ... ಆದ್ದರಿಂದಲೇ, ಹೊಡೆದವರನ್ನು ಟೀಕಿಸುವ ಬ... ಹೊಡೆಸಿಕೊಂಡವರ ಕುಟುಂಬದ ಜಾತಕವನ್ನು ... ಹುಡುಕುತ್ತಿದ್ದಾರೆ. ಇಂತಹ ಅಧ್ಯಕ್ಷರನ್ನು ಪಡೆ... ಕನ್ನಡಿಗರಾದ ನಾವು ಭಾಗ್ಯವಂತರಲ್ಲವೇ?


ಈ ಎಲ್ಲ ಹಿನ್ನೆಲೆಯಲ್ಲಿ, ನಮ್ಮ ಹೆಮ್ಮೆಯ ದ... ಧರ್ಮ ಸಂಸ್ಕೃತಿ ರಕ್ಷಕ ಪಡೆಯ ಸಾಹಸದ ಕಾಯ... ಟೀಕಿಸುವುದನ್ನು ದಯವಿಟ್ಟು ನಿಲ್ಲಿಸಬೇಕಾಗಿ ಪ್ರಾ... ಬೋಲೋ ಭಾರತ್ ಮಾತಾ ಕೀ...

• ಶ್ರೀನಿವಾಸ ಕಾರ್ಕಳ, ಮಂಗ...



ದೇಶ ಭಕ್ತ, ಧರ್ಮರಕ್ಷಕರು!

ಮಂಗಳೂರಿನಲ್ಲಿ ಒಂದು ಘಟನೆ




"ಅಬ್ಬಾ! ಎಷ್ಟು ಭವ್ಯವಾದ ಬಂಗಲೆ"
"ನಾವು ಕಲ್ಪಿಸಲೂ ಸಾಧ್ಯವಿಲ್ಲ!"
(ಅವರಿಗೆ ಕಲ್ಪಿಸುವ ಶಕ್ತಿಯಿರಲಿಲ್ಲ)
"ಸುಗ್ಗಿಬಿಡೋಣ?"
....
"ನೂರ್‌ಗಾ"
* * * *
"ಆಹಾ! ಎಷ್ಟು ಬೆಳ್ಳನೆ ಹುಡ್ಗೀರು!"
"ನಾವು ಕನಸಲ್ಲೂ ಕಾಣಲಾರೆವು"
(ಅವರ ಕನಸಿಗೆ ಕಣ್ಣಿರಲಿಲ್ಲ)
"ಮುಟ್ಟಿಬಿಡೋಣ?"
...
"ಮುಟ್ಟುಗಾ"
* * * *
"ಅರೆ! ಮಜಾ ಉಡಾಯಿಸ್ತಿದಾನೆ ಯಾರೋ ಹುಡುಗ"
"ನಮಗೆ ದಕ್ಕದ್ದು ಇವನಿಗೂ ಸಿಗಬಾರದು"
(ಅವರಿಗೆ ದಕ್ಕಿಸಿಕೊಳ್ಳುವ ವಿದ್ಯೆ ತಿಳಿದಿರಲಿಲ್ಲ)
"ಹೊಡೆದುಬಿಡೋಣ?"
—
"ಪಾಡ್‌ಗಾ"
* * * *
ಅಂತಿಮವಾಗಿ ಅವರು
ಸುಗ್ಗಿಬಿಟ್ರು, ಮುಟ್ಟಿಬಿಟ್ರು, ಹೊಡೆದುಬಿಟ್ರು.

ಕೊನೆಗೆ ಬಂದ ಪೊಲೀಸರು
ಆ ಪಾತಕಿಗಳನ್ನು ಹಿಡಿದುಬಿಟ್ರು.
ಹೌದು, ನಿಜವಾಗಿಯೂ-
ಹಿಡಿದು.......
ಬಿಟ್ರು!!

▌ವಿಲ್ಸನ್, ಕಟೀಲ್

(ಈ ಕವಿತೆಯಲ್ಲಿ ಮೂರು ತುಳು ಪದಗಳಿವೆ. ನೂರ್‌ಗಾ ಅಂದರೆ ಸುಗ್ಗೋಣ, ಮುಟ್ಟುಗಾ ಅಂದರೆ ಮುಟ್ಟೋಣ ಮತ್ತು ಪಾಡ್‌ಗಾ ಅಂದರೆ ಹೊಡೆಯೋಣ ಅಂಥ ಅರ್ಥ.)

ಅಪರೂಪದ ಫೋಟೋ



1985ರಲ್ಲಿ ಟೆಕ್ಸಸ್ ಇನ್‌ಸ್ಟ್ರುಮೆಂಟ್ಸ್ ಎಂಬ ಐಟಿ ಕಂಪನಿ ತ... ಕಚೇರಿಯನ್ನು ಬೆಂಗಳೂರಲ್ಲಿ ಪ್ರಾರಂಭಿಸಿದಾಗ ಕಂಪ್ಯೂಟರ್‌ಗಳನ್... ಹೊತ್ತು ತಂದ ಎತ್ತಿನ ಗಾ...

…ಡಿಜಗೇ ಲಂಚ ಕೊಡ್ತರೆ ಅಂದ್ರೆ ಇವ್ರುರಿನ್ಯಂಥ ಕಳ್ಳರು!

…ರವಸೆಯಿಲ್ಲದ ಮೋಡ, ಶನಿವಾರ ಸಂತೆಯಲ್ಲಿ …ೋಡು ದನಗಳು ಕಸಾಯಿಖಾನೆ ದಾರಿ ಹಿಡಿದವು …ಭೀಕರ ಸುದ್ದಿಯಿಂದ ಗಂಭೀರವಾಗಿ ಕುಳಿತಿದ್ದ …ವನಿಗೆ ಯಾವ ಸುದ್ದಿಯೂ ಬೇಡವಾಗಿತ್ತು, ಆಗ …ಯಲ್ಲಿ ಬಂದ ಉಗ್ರಿ,

…ಳಮಾವ ಸುದ್ದಿ ಗೊತ್ತಾಯ್ತು?" ಎಂದ.

…ತ್ತಾಯ್ತು ಕಂಡ್ಯ. ಇದೇ ಈಗ ಪುಡಸಮ್ಮಿ …ಬುಟ್ಟು ಹೋದ. ಪಾಪ ಜನಗಳು ತಾನೆ ಏನು …. ಹಾಕಕ್ಕೆ ಹುಲ್ಲಿಲ್ಲ, ಕುಡಿಯಕ್ಕೆ ನೀರಿಲ್ಲ ಅಂದ್ರೆ …ಕ್ಕಾದತೇ, ಅದ್ಕೆ ಮಾರಿದ್ರುತ್ಲಗೆ" ಎಂದು ಶನಿವಾರ …ಲ್ಲಿ ಅಗ್ಗದ ಬೆಲೆಗೆ ಮಾರಾಟವಾದ ದನಗಳ ಬಗ್ಗೆ

…ಕ್ಕಿ ಯರಡು ತಿಂಗಳಿಂದ ದನ ಮಾರತ ಅವ್ರೆ …ವ. ಆದಲ್ಲ ನಾನು ಕೇಳಿದ್ದು, ರೆಡ್ಡಿಗಳು ಜಡಜಗಳಿಗೆ …ಟ್ಟು, ಸಿಗಾಯ್ಕಂಡಿದ್ದರಂತೆ."

…ಲ್ಲಿ ಸಿಗಾಯ್ಕಂಡ್ರೂ?"

…ದ್ಧವಲ್ಲಿ, ಒಂದಲ್ಲ ಯರಡಲ್ಲ ಇಪ್ಪತ್ತು ಕೋಟಿ …ಸಿಕ್ಕಿಬಿದ್ದವ್ರೆ."

…ಪ್ಪತ್ತು ಕೋಟಿ ಅಂದ್ರೆ ವಸಿ ದುಡ್ಡಾಯ್ತೇನ್ಲ? …ತರ ದುಡ್ಡು ಕೊಟ್ರೆ?"

…ಊ ಕಣವಮಾವ. ಕೊಟ್ಟೋರು …ತೋರ್ಕಲ್ಲಿ ಸಿಕ್ಕಿಬಿದ್ದವ್ರೆ."

…ಲ್ಲಾ, ಜಡಜಿಗೇ ಲಂಚ ಕೊಟ್ರು ಅಂದ್ರೆ …ಂಥಾ ಕಳ್ರೂ. ಆಯ್ತು ತಗಂಡೋರು … ಜಡಜಗಳ್ಳ. ಇನ್ನು ಮುಂದೆ ನಾವು …ಕೇಸನ್ನು ಕೋರ್ಟಿಗೆ ಹೋಗದ್ಯಂಗೇ …ಎಂದು ಕಾಳಮಾವ ಕಣ್ಣುಬಿಟ್ಟ.

…ಮೆಯ ನಾನು ಯೇಚನೆ ಮಾಡ್ತಯಿದ್ದದ್ದು, … ಲಂಚ ತಗಂಡ್ರು ಅಂದ್ರೆ ನಾವು …ಗೆ ಹೋಗದ್ಯಂಗೇ. ದುಡ್ಡಿದ್ದೋರು …ಳ್ತರಪ್ಪ" ಎಂದ ಸೀರ.

…ವ್ರುರು ದುಡ್ಡು ಕೊಟ್ಟಿರದು ರೆಡ್ಡಿ …ನಿಗೆ ಕಣಮಾವ."

…ಮೀನೇ ಆಗ್ಲಿ ಕಂಡ್ಯ. ಜಾಮೀನ ಮ್ಯಾಲೆ …ಬಂದಿರೊ ಎಡೂರಪ್ಪ ಹೋರಿ ನ್ಯಗದಂಗೆ ನ್ಯಗೀತಾ … ಅಂತದ್ರುಲ್ಲಿ ರೆಡ್ಡಿ ಜಾಮೀನ ಮ್ಯಾಲೆ ಬಂದ್ರೆ …ಕ್ಕಾದತೆ ಅಂತ."

…ದು ನಿಜಕಣ ಮಾವ. ಇತ್ತೀಚೆಗೆ ಜಾಮೀನು …ಗೆ ಕೇಸನೆ ಗೆದ್ದಂಗೆ ಕುಣದಾಡ್ತ ಅವ್ರೆ. ರೆಡ್ಡಿ …ಬಂದಿದ್ರು ಅಂಗೆ ಆಡನು."

…ದ್ಯಂಗೆ ಪತ್ತೆ ಮಾಡಿದ್ರೂ."

… ಗಣಿಕಳ್ರಿಗೆ ಕರ್ನಾಟಕ ಆಂಧ್ರ ಯರಡು ಒಂದೆಯ …ವ. ಕಳ್ಳ ಎಲ್ಲೇ ಹೋಗ್ಲಿ ಕಳ್ಳಲ್ಲವೆ. ಅಂಗಾಗಿ ರೆಡ್ಡಿ … ಆಂಧ್ರದಲ್ಲೂ ಜನಿದ್ರಂತೆ. ಈ ನನಮಕ್ಕಳೂ ತೆಲಗಲ್ಲೆ ಅಲವೆ ಮಾತಾಡದು. ಅಂಗಾಗಿ ಅದೊಂದು ಅನುಕೂಲಾಯ್ತು, ಇತ್ತೀಚೆಗೆ ಏನಾರ ಮಾಡಬಾರದ್ದ ಮಾಡಕ್ಕೆ ವಂಟಾಗ ಅದಕ್ಕೆ ಸಹಾಯ ಮಾಡೋ ಜನ ಸಿಕ್ಕೇ ಸಿಗತರೆ. ದುಡ್ಡಿದ್ರಾಯ್ತು."

"ಅದೇನೊ ನಿಜ ಬುಡು. ಹಣ ಇದ್ರೆ ಹ್ಯಣಾನೂ ಬಾಯಿಬುಡ್ತದೆ."

"ಆಗೊ ಅಂಗೆ. ಸಿಬಿಐ ಜಡಜೆನೆ ಬಾಯಿಬುಡಿಸ್ಯವ್ರೆ ರೆಡ್ಡಿಗಳು. ಪಾಪ ಆ ಜಡಜಿಗೂ ಎಡೂರಪ್ಪನಿಗಿರಂಗೆ ಮಗಿದ್ನಂತೆ. ಅವ್ರುನು ಅವುರಪ್ಪ ಲಂಚ ತಗಳದ್ರುಲ್ಲಿ ಭಾರಿ ಓಡಾಡಿದನಂತೆ."


"ಜಡಜಗಳಿಗೆ ಅಂಥಾ ಮಗಿದ್ರೆ ಕತಿಯೇನ್ಲ?"

"ನಿಮ್ಮ ದ್ಯಾವೇಗೌಡ್ರು ಮಗ ಬಾಲಕೃಷ್ಣೇ ಗೌಡನಂಥಾ ಮಗ ಇರಬೇಕಿತ್ತಲವೆ ದೊಡಪ್ಪ?" ಎಂದುಕೊಂಡು ವಾಟಿಸ್ಸೆ ಬಂದ.

"ಬಂದ ನೋಡು ಇವ್ರುನು ರೆಡ್ಡಿ ಕಡಿಯೋನೆಯಾ" ಎಂದು ಜುಮ್ಮಿ ನಕ್ಕಳು.

"ಯಾಕಕ್ಕ ಅಂಗಂತಿ?"

"ಮತ್ತೆ ಅವ್ರುನ ಬಾಸಣ ಕೇಳಿಕೊಂಡು ಬತ್ತಿನಿ ಅಂತ ವೋಗಿದ್ದೆ."



"ಹೋಗಿದ್ದೆ ಸರಿಕಣಕ್ಕ. ಮೈಸೂರಿನೋರು ಯಂಥಾ ಜನ ಅಂದ್ರೆ ಆ ರಾಮುಲು ಬತ್ತನೆ ಅಂದ ಜಾಗಕ್ಕೆ ಒಬ್ಬರೂ ಬರದು ಬ್ಯಾಡವೆ."

"ಅಂಗರೆ ಜನ ಬರಲಿಲ್ಲ ಅನ್ನು?"

"ಇಲ್ಲ ಕಣಕ್ಕ ಯಾಕೆ ಅಂದ್ರೆ ನಮ್ಮ ಮೈಸೂರು ಕೃಷ್ಣರಾಜೇಂದ್ರ ಒಡೆಯರು, ವಿಶ್ವೇಶ್ವರಯ್ಯ, ಮಿರ್ಜಾಯಿಸ್‌ಮಾಯಿಲ್, ಕುವೆಂಪು ಕಟ್ಟಿರೊ ಊರು. ಅಂತಾ ಊರಿಗೆ ಜೈಲಲ್ಲಿರೊ ರೆಡ್ಡಿ ಬುಡಿಸಿಗಳಕ್ಕೆ ಲಂಚ ಕೊಟ್ಟಿರೊ ರಾಮುಲು ಬತ್ತನೆ ಅಂದ್ರೆ ಯಾರೋಯ್ತರಕ್ಕ."

"ಮತ್ತೆ ಇವ್ರುನು ರೆಡ್ಡಿಗಳು ಲಂಚ ಕೊಟ್ರು ಅಂದನಲ್ಲಾ?"

"ಅದು ಸರಿ. ಒಂದು ಮಾಸ್ಟರು ಪ್ಲಾನು ಅಂತ ಇರತದೆ. ಅದ ತಯಾರಿಸಿ ಕೊಟ್ಟಿರೋನು ರಾಮುಲು. ಅಂದ್ರೆ ಬಿಎಸ್ಆರ್ ಪಾರ್ಟಿ ಪ್ರಸಿಡೆಂಟು."

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಮತ್ತೆ ಊರೂರು ಮ್ಯಾಲೆ ಭಾಷಣ ಮಾಡಿಕಂಡು ಹೋಯ್ತಾ ಅವ್ರುನೆ. ನಾಚಿಗಾಗದಿಲವೆ ಮುಂಡೆ ಮಗನಿಗೆ?"

"ಬುದ್ಧಿಜೀವಿಗಳು, ಸಾಯಿತಿಗಳು, ಪತ್ರಕರ್ತರು, ಲಾಯರ್‌ಗಳೇ ಅವ್ರುನತ್ರಕ್ಕೊಗಿ ಹಲ್ಲು ಕಿಸಿತವೆ ಅಂದ್ರೆ ಅವುರಿಗಿಂತ ರಾಮುಲುನೆ ವಾಸಿ ಅಲವೆ. ಅದ್ಕೆ ಅವ್ರುನಿಗೆ ಧೈರ್ಯ ಬಂದು ನಮ್ಮ ಜನಾರ್ದನ ರೆಡ್ಡಿ ಜೈಲಿಗಾಕಿಸಿದೋರು ಯಾರು ಅಂತ ಮುಂದೆ ಹೇಳ್ತಿನಿ. ಏನು ತಪ್ಪು ಮಾಡದ ನಮ್ಮ ಏಳಿಗೆ ಸಯಿಸಕ್ಯಾಗದೋರು ಮಾಡಿರೊ ಕುತಂತ್ರದಿಂದ ಅವ್ರುರು ಜೈಲಿಗೊದ್ರು ಅಂತ ಹೇಳ್ತಾ ಅವ್ರುನೆ."

"ಅದಪ್ಪ ಮಾತು. ಯಂತ ಅಮಾಯಕ ಜನಗಳು ಅಂತಿನಿ" ಎಂದು ಉಗ್ರಿ ನಕ್ಕ.

"ಕಳ್ರು ಮಾತಾಡದೆ ಅಂಗಲವೇನೊ. ಕಳ್ಳು ಕಿತ್ತು ಬರಂಗೆ ಮಾತಾಡ್ತರೆ. ಆ ಸೋಮಶೇಖರ ರೆಡ್ಡಿ ಅನ್ನೊನ್ನ ಯಾವಾಗ ಸಿಬಿಐನೋರು ತಗಂಡೋಗಿ ಏರೋಪ್ಲೇನ್ ಎತ್ತಿದ್ರೊ ಕೂಡ್ಲೆ ಯಲ್ಲಾನು ಹೇಳಿಬುಟ್ಟ ಅತ್ತಗೆ."

"ಅವ್ರುನಿಗಿಂತ ಮದ್ಲು ಸಿಕ್ಕದೋನು ಸುರೇಶ್ ಬಾಬು ಅನ್ನೊನು ಕಣೊ. ಆ ನನಮಗನಿಗೆ ವಿಧಾನಸೌಧ, ಬಳ್ಳಾರಿ ಬಸ್ಟಾಂಡು ಒಂದೇ ತರ ಕಾಣತಿತ್ತು, ವಿಧಾನಸಭೆಲಿ ಯಾರಿಗೆ ಅಂದ್ರವುರಿಗೆ ವಡಿಯಕ್ಕೊಗನು."

"ಅಂಥೋನೇನ್ಲ ಅವ್ರುನು?"

"ಅಂಥೋನ್ನ ಸಿಬಿಐ ಪೊಲೀಸ್‌ನೋರು ತಗಂಡೋಗಿ ನವ್ವರಿಯ ನೇದೇಟಿಗೆ, ನಮ್ಮ ಭಾವ ರಾಮುಲು ಹೇಳಿದ್ರು, ಅದ್ಕೆ ನಾನು ಕರುಣಾಕರ ರೆಡ್ಡಿ ಸೇರಿಕೊಂಡು, ಚಿನ್ನದ ಗಟ್ಟಿ ಕರಗಿಸಿ ಮಾರಿಬಂದ ಹಣದಲ್ಲಿ ಜಡಜಿಗೆ ಐದು ಕೋಟಿ, ಮೀಡಿಯೇಟ್ರುಗೆ ಐದು ಕೋಟಿ, ಕೋರ್ಟು ಖರ್ಚಿಗೆ ಐದು ಕೋಟಿ ಕೊಟ್ಟದ್ದಿವಿ ಅಂದುಬುಟ್ಟ. ಆಗ್ಲೆ ಸೋಮಶೇಖರ ರೆಡ್ಡಿ ಅರೆಸ್ಟಾಗಿ ಆಂಧ್ರಕೋಗಿದ್ದು" ಎಂದ ವಾಟಿಸ್ಸೆ.

"ನೀವೇಳೊ ಮಾತನೋಡಿದ್ರೆ ಎಡೂರಪ್ಪನಿಗೆ ಸಿಗೊ ಬೇಲ ಮ್ಯಾಲೂ ಡವುಟು ಬತ್ತದಪ್ಪ" ಎಂದ ಸೀರ.

"ಇದೇನು ಡವುಟಿಲ್ಲ ಚಿಗಪ್ಪ, ಎಡೂರಪ್ಪನ್ನ ಅರೆಸ್ಟು ಮಾಡಿ ಏನು ಮಾಡಂಗಿದ್ದಿರಿ, ಇಲ್ಲೆ ತಿರುಗಾಡ್ತನಲ್ಲ ಕರಸಿ ವಿಚಾರಣೆ ಮಾಡಿ ಅಂತ ಬುಟ್ಟುವ್ರೆ. ಆದಕಿಂತ ಕಾನೂನಿನ ಗೋಜಲು ನಮಿಗ್ಯಂಗೆ ಗೊತ್ತಾದವ್ರೂ."

"ಅಲ್ಲಾ ಕಣೊ ವಾಟಿಸ್ಸೆ ಬೇಕಾದೋರು ಚೀಫುಮಿನಿಸ್ಟ್ರು ಮಾಡಿಕಂಡು ತಾನೇ ವಿರೋಧ ಪಕ್ಷದ ನಾಯಕನಾಗಿ ಕುಂತಗಂಡನಲ್ಲ ಹೇಳು."

"ನಿಜ ಕಣೊ ಉಗ್ರಿ. ಅವ್ರುನಾಡದ ನೋಡಿದ್ರೆ ಇಡೀ ಕರ್ನಾಟಕದ ಜನಗಳಿಗೆ ಎಡೂರಪ್ಪ ಜೈಲಿಗೋಗಿದ್ದೆ ಮರತೋಯ್ತು."

"ರೆಡ್ಡಿಗಳ ಸವಾಸದಿಂದ ಜೈಲಿಗೋದ ಕಣೊ. ಆ ರೆಡ್ಡಿಗಳ ಜೊತೆ ರಾಜಕಾರಣ ಮಾಡಿದೋರಿಗೆ ಒಂದಲ್ಲಾ ಒಂದಿನ ಕಾದದೆ. ಆಂಧ್ರದ ಜಡಜಿಗಳು ಜೈಲುಪಾಲಾದ್ರು. ಇನ್ನು ರಾಮುಲು ಹೋಗಬವುದು. ಅಂತೂ ನಮ್ಮ ಕಾಳಮಾವ ಹೇಳಿದಂಗೆ ಕಳ್ಳನೆಡ್ತಿ ಯಾವತ್ತಿದ್ರು ಮುಂಡೆ ಅನ್ನಂಗಾಯ್ತು."

"ಎಜ್ಜಾಟ್ಲಿ ಕರಟ್. ಮುಂಡೆ ಆಗಕ್ಕೆ ಗಂಡ ಸಾಯಲೇಬೇಕು ಅಂತ ಏನೂ ಇಲ್ಲ, ಅವ್ರುನು ಜೈಲಲ್ಲಿದ್ರು ಮುಂಡೆ ತರನೆ ಇರಬೇಕು."

"ಎಡೂರಪ್ಪಂದೆ ಸರಿ. ಅವ್ರುನು ಜೈಲಿಗೋದ್ರೆ ಅಳಕ್ಕೆ ಹೆಡತಿನೆಯಿಲ್ಲ."

"ಎಡೂರಪ್ಪನಿಗೆ ಹೆಡತಿಯಿಲ್ಲ ಅಂತ ತಮಾಸಿ ಮಾಡಬ್ಯಾಡ ಕಣಕ್ಕ. ಆ ಕಾರಣಕ್ಕೆ ಅವ್ರುನು ನೆಮ್ಮದಿಯಾಗಿ ಏನು ಮಜವಾಗ್ಯವ್ರುನೆ ಗೊತ್ತ. ಯಲ್ಲಾ ಎಮ್ಮೆಲ್ಲೆಗಳು ವಿಧಾನಸೌಧಕ್ಕೆ ಹೋಗದಂಗೆ ಕ್ಲಬ್ಬು ರೆಸಾರ್ಟಲ್ಲಿ ಕುಂತಿದ್ರೆ ಇವ್ರುನು ಹಿಂದಿನ ಸಾಲಲ್ಲಿ ಕುತಗಂಡು ಶೆಟ್ಟರ್‌ಗಿಂತ ತಾನೆ ಮೊದ್ಲು ಮಾತಾಡ್ತನೆ. ಆಡಳಿತ ಪಕ್ಷದೊರ ಬ್ಯೆತನೆ. ಅಲ್ಲಿಂದ ಬಿಜೆಪಿ ಆಫೀಸಿಗೋಗಿ ಜನಗಳ ಕಷ್ಟಸುಖ ವಿಚಾರುಸ್ತಾನೆ. ಮಾಡಿರೊ ಕ್ಯಟ್ಟ ಕ್ಯಲಸ ಮರಿಯಂಗೆ ರಾಜಕಾರಣ ಮಾಡ್ತ ಅವ್ರುನೆ. ರಿಯಲಿ ದಿಸೀಸ್ ಮೆಂಟ್ಲು ಕೇಸ್."

"ಅವ್ರುನು ಒಂಥರ ದ್ಯಾವೇಗೌಡಿದ್ದಂಗೆ."


"ಅದು ಹಳೆ ಮಾತಲವೇನೊ. ದ್ಯಾವೇಗೌಡ್ರು ರಾಜಕಾರಣದ ಮುಂದುವರಿದ ಭಾಗನೆ ಎಡೂರಪ್ಪನ ರಾಜಕಾರಣ. ದ್ಯಾವೇಗೌಡ್ರು ನಯನಾಜೂಕಲ್ಲಿ ಮಾಡದ ಇವ್ರುನ ವಡ್ಡತನದಲ್ಲಿ ಮಾಡ್ತನೆ. ಕೇಳಿದ್ರೆ ನೀವು ಮಾಡಿಲ್ವ ಅಂತನೆ. ಎಡೂರಪ್ಪನ ಮಕ್ಕಳು ಮೂರು ವರ್ಷದಲ್ಲಿ ಮಾಡಿರೊ ಆಸ್ತಿಯ ದ್ಯಾವೇಗೌಡ್ರು ಮಗ ಬಾಲಕೃಷ್ಣ ಮೂರೇ ತಿಂಗಳಲ್ಲಿ ಮಾಡಿ ಬಿಸಾಕಿದ ಅಂದ್ರೆ ನೀವೇ ಥಿಂಕ್ ಮಾಡಿ" ಎಂದು ವಾಟಿಸ್ಸೆ ಹೊರಟ.


❖

…ಬಿಡುಗಡೆ'ಯ ಚಿಂತೆ ▶▶▶

…ಗತಿಹಳ್ಳಿ ಚಂದ್ರಶೇಖರ್ ಮಹಾ ಸಹನೆಯ, ಅತ್ಯಾಸೆಯ, ಪ್ರೀತಿಯ, ಸಮಯಸಾಧಕನಾದ… 'ಗುಮ್ಮನ …ಕ'. ಹಾಗೆಂದಾಗ ಎಲ್ಲರಿಗೆ ಆಶ್ಚರ್ಯವಾಯಿತು. ಅದು ಚಂದ್ರಶೇಖರನನ್ನು ಸರಿಯಾಗಿ ವರ್ಣಿಸುವಂತೆ …ತ್ತೆ, ಆದರೆ ಪೂರ್ತಿ ಅರ್ಥವಾಗುವುದಿಲ್ಲ. ಒಬ್ಬ ಬ್ರೇಮಿನ್, 'ನೀವು ಬರೆದಿರುವ ಗುಮಾನಿ ಗುಸುಕ …ಸ್ರದು ಚಂದ್ರಶೇಖರ್‌ಗೆ ಸರಿಯಾಗಿ ಅನ್ವಯಿಸುತ್ತೆ' ಎಂದು ಬರೆದ; ಆತನಿಗೆ ಚಂದ್ರಶೇಖರ್‌ನನ್ನು ಸರಿಯಾಗಿ …ವುದು ಬೇಕಾಗಿತ್ತೇ ಹೊರತು ಅದರ ಅರ್ಥ ಬೇಕಿರಲಿಲ್ಲ. ಅನಗತ್ಯವಾಗಿ ಗುಟ್ಟು ಮಾಡುವವನು, ಮಹಾ …ದ ಗೆಳೆಯನಂತೆ ಪಿಸುಪಿಸು ಮಾತಾಡಿದರೂ ಒಳಗೆ ಬೇರೆಯೇ ಅಭಿಪ್ರಾಯ ಇಟ್ಟುಕೊಂಡಿರುವವನು, …ಕ್ಕೆ ಯೋಗ್ಯನಂತೆ ಕಂಡರೂ ಸ್ವಲ್ಪ ಅಪಾಯಕಾರಿಯಾದವನು–ಹೀಗೆ ಗುಮ್ಮನ ಗುಸುಕನ ಬಗ್ಗೆ …ಸೋ ಹೇಳಬಹುದು. ಆದರೆ ನನ್ನ –ಚಂದ್ರಶೇಖರ್ ಬಾಂಧವ್ಯದಲ್ಲಿ ಅಂಥ ಅನುಮಾನಗಳೇನಿಲ್ಲ. … ಒಂದು ರೀತಿಯಲ್ಲಿ ನನ್ನ ತಮ್ಮನ ತರಹ, ಇನ್ನೊಂದು ರೀತಿಯಲ್ಲಿ ವಿಚಿತ್ರ ರೀತಿಯ ಮನುಷ್ಯ. … 15ರಂದು ಈತನ 'ಅಮೆರಿಕಾ ಅಮೆರಿಕಾ' ಎಂಬ ಪ್ರವಾಸಕಥನವನ್ನು ಬಿಡುಗಡೆ ಮಾಡುತ್ತಾ … ಹೇಳುವುದೆಂದು ತಲೆಕೆರೆದುಕೊಂಡೆ. ನನ್ನ ಮೈಯಲ್ಲಿ ಸರಿಯಿಲ್ಲದೆ 'ಈಗ ಹೊಸದೊಂದು … ಓದಿ ಬಿಡುಗಡೆ ಮಾಡುವಷ್ಟು ತ್ರಾಣ ನನ್ನಲಿಲ್ಲ, ಆದ್ದರಿಂದ ಬರೋಲ್ಲ' ಎಂದು ಎಷ್ಟು …ದರೂ ಕೇಳದೆ 'ಅವತ್ತು ನನ್ನ ಹುಟ್ಟುಹಬ್ಬ, ನನ್ನ ಮದುವೆಯ ವಾರ್ಷಿಕ, ಅಭಿವ್ಯಕ್ತಿ ಸಂಸ್ಥೆಯ …ಕ….. ಆದ್ದರಿಂದ ನೀವು ಬಂದು ಹತ್ತು ನಿಮಿಷ ಸುಮ್ಮನೇ ಕೂತಿರಿ ಸಾಕು' ಎಂದು ಹೇಳಿ …ದ. ನಾನು ಆ ಪುಸ್ತಕದಲ್ಲಿ ಓದಿದ್ದು ಎರಡೇ ಅಧ್ಯಾಯಗಳು; ಚಂದ್ರಶೇಖರನ ಮಗಳು ಅಮೆರಿಕಾದಲ್ಲಿ …ಗೆ ಹೋಗಿದ್ದು, ಚಂದ್ರಶೇಖರ ಹಾಲಿವುಡ್ ಚಿತ್ರನಗರ ನೋಡಿದ್ದು, ಅಮೆರಿಕಾದ ಶಾಲೆಗೆ ವಿವಿಧ …ರು ಜನ ತಮ್ಮ ಮಕ್ಕಳನ್ನು ಕಳಿಸಿ, ಆಗಾಗ ಶಾಲೆಗೆ ಭೇಟಿ ಕೊಡುತ್ತಾರಂತೆ; ಹಾಲಿವುಡ್‌ನಲ್ಲಿ ಹತ್ತಾರು …ಡಿಯೋಗಳು ಇವೆಯಂತೆ. ಹಾಲಿವುಡ್‌ನಲ್ಲಿ 'ಒಳ್ಳೆಯ ಚಿತ್ರಕತೆಯನ್ನು ಶ್ರೇಷ್ಠ ಚಿತ್ರಕತೆಯಾಗಿ ಮಾಡುವುದು …? ಮುಂತಾದವರ ಬಗ್ಗೆ ಮಾಹಿತಿ ಒದಗಿಸುತ್ತಾರಂತೆ. ಸಿನಿಮಾಗಳಿಗಾಗಿ ಕತೆ, ಹಾಡು, ಸಂಗೀತ, special …? ಮುಂತಾದವರ ಬಗ್ಗೆ … ಬರೆದಿದ್ದಾನೆ. ಅದನ್ನೆಲ್ಲ ಓದಿ ನನಗೆ ರೇಗಿ …, ಜುರಾಸಿಕ್ ಪಾರ್ಕ್‌ನ ಪ್ರಾಣಿಗಳು….. ಇತ್ಯಾದಿಯ ಬಗ್ಗೆ ಬರೆದಿದ್ದಾನೆ. … ಹಾಲಿವುಡ್‌ನಲ್ಲಿ ಅನೇಕ ಸಿನಿಮಾ ಸ್ಟುಡಿಯೋಗಳಿರುವುದನ್ನು ಕಂಡುಕೊಳ್ಳಲು ಈತ ಇಷ್ಟು … ಹೋಗಬೇಕಾಗಿರಲಿಲ್ಲ, ಚಂದ್ರಶೇಖರ್ ಅನೇಕ ಸಲ ಒಳ್ಳೆಯ ಕತೆ ಬರೆದಿದ್ದಾನೆ, ಮತ್ತು ಅನೇಕ ಸಲ … ಆಗಿ ಬರೆದಿದ್ದಾನೆ; ಪ್ರೀತಿಸಿದ ಹುಡುಗಿಯ ಜಾತಿ, ಆಕೆಯ ತಂದೆಯ ವೃತ್ತಿ ಇತ್ಯಾದಿಯ ಬಗ್ಗೆ …ವಾಗಿ ಬರೆದಿದ್ದಾನೆ. ಒಮ್ಮೆ ಈತ ತನ್ನ ಕಥಾಸಂಕಲನವೊಂದಕ್ಕೆ ಮುನ್ನುಡಿ ಬರೆಯಲು ನನ್ನನ್ನು ಕೇಳಿದ್ದ. ಆ ಕತೆಗಳನ್ನು ಓದಿ 'ತುಂಬ self centered ಆಗ್ಗದ ಗಿಲೀಟು ತುಂಬಿದೆ. ನನ್ನಿಂದ ಮುನ್ನುಡಿ ಬರೆಯಲು ಆಗುವುದಿಲ್ಲ' ಎಂದು ತಿಳಿಸಿದ್ದೆ. ಹಾಗೆಯೇ ಆತ ಅನಿರೀಕ್ಷಿತವಾಗಿ ಉತ್ತಮ ಕತೆ ಬರೆದಾಗ ಮೆಚ್ಚಿ ಬರೆದಿದ್ದೆ. ಈಗ ಈ ಪುಸ್ತಕ ಬಿಡುಗಡೆ ಮಾಡುವಾಗ ಚಂದ್ರಶೇಖರ್ ಬಗ್ಗೆ ಬಹುದಿನದಿಂದ ನನ್ನಲ್ಲಿ ಕೊರೆಯುತ್ತಿದ್ದ ಒಂದು ಸಂಗತಿ ಹೇಳಿದೆ: 'ಅಲ್ಲಯ್ಯ ಚಂದ್ರಶೇಖರ್, ಹಾಲಿವುಡ್‌ನಲ್ಲಿ ಸ್ಟುಡಿಯೋಗಳಿವೆ, ಅಮೆರಿಕಾ ಶಾಲೆ ಚೆನ್ನಾಗಿವೆ ಎಂದು ನಿನ್ನಂಥ ಜಾಣನಾದ ಹುಡುಗ ಹೇಳಬೇಕಿಲ್ಲ. ನಾನೆಂದೂ ಅಮೆರಿಕಾಕ್ಕೆ ಹೋಗದಿದ್ದರೂ ಅದು ನನಗೆ ಗೊತ್ತು. ಆದರೆ ನೀನು ನಿನ್ನನ್ನು ಗ್ರಹಿಸುವುದನ್ನು ಕಲಿಯಲು ಅಮೆರಿಕಾದಲ್ಲಿ ಏನಾದರೂ ನೆರವಾಗಿದ್ದರೆ ಹೇಳಬೇಕಿತ್ತು. ಅಮೆರಿಕಾದ ಸ್ಟುಡಿಯೋದಲ್ಲಿ ಆರ್ಸನ್ ವೆಲ್ಸ್ ಎಂಬ ನಿರ್ದೇಶಕ ತನ್ನನ್ನು ಮತ್ತು ಅಮೆರಿಕಾವನ್ನು ಎದುರಿಸಿದ; ಅಮೆರಿಕಾದಂಥ ಒಂದು ರಾಕ್ಷಸ ಸಮಾಜವನ್ನು 'ಸಿಟಿಜನ್ ಕೇನ್' ಎಂಬ ಚಿತ್ರದಲ್ಲಿ ತನಿಖೆ ಮಾಡಿ ಜಗತ್ತಿನ ಶ್ರೇಷ್ಠ ಚಿತ್ರವನ್ನಾಗಿಸಿದ. ಸಿರಿಯ ಗರ ಹೊಡೆದ ಅಮೆರಿಕಾ, ಶಕ್ತಿಯಿಂದ ಮತ್ತವಾದ ಅಮೆರಿಕಾ, ಮಾನವಸೇವೆಯ ಹೆಸರಿನಲ್ಲಿ ಆತ್ಮವಂಚನೆ ಮಾಡಿಕೊಳ್ಳುವ ಅಮೆರಿಕಾ ಆ ನಿರ್ದೇಶಕನ ಕೈಯಲ್ಲಿ ಅದ್ಭುತ ಚಲನಚಿತ್ರವಾಯಿತು. ನೀನು ಒಳ್ಳೆಯವನು, ಕೆಟ್ಟವನು ಎನ್ನುವುದು ನಿನ್ನ ಕಲೆಯ ದೃಷ್ಟಿಯಿಂದ ಮುಖ್ಯವಲ್ಲ; ನೀನು ನಿನ್ನ ಒಳ್ಳೆಯ, ಕೆಟ್ಟ ಪ್ರೀತಿಯ, ವಿಶ್ವಾಸದ, ವಂಚನೆಯ, ದುಗುಡದ ವ್ಯಕ್ತಿತ್ವವನ್ನು ಹೇಗೆ ವಸ್ತುನಿಷ್ಠವಾಗಿ ನೋಡಿ ಕಲೆಯಾಗಿಸುತ್ತೀ ಎನ್ನುವುದು ಮುಖ್ಯ. ಅಮೆರಿಕಾ ಸ್ಟುಡಿಯೋದಲ್ಲಿ ಉತ್ತಮ ಚಿತ್ರಕತೆಯನ್ನು ಅತ್ಯುತ್ತಮ ಚಿತ್ರಕತೆಯನ್ನಾಗಿ ಮಾಡುವುದನ್ನು ನಿನಗೆ ಕಲಿಸಿ ಪ್ರತಿಭೆಯ ಗೋಪ್ಯಗಳನ್ನು ಹೇಳಲಾಗುವುದಿಲ್ಲ. ಈ ಸಮಸ್ಯೆಯ ಎದುರು ಅಮೆರಿಕಾದಂಥ ದೈತ್ಯ ದೇಶ ಕೂಡ ಅಸಹಾಯಕ. ಹುಟ್ಟಣ್ಣ ಕಣಗಾಲ್‌ಗೂ ರುತ್ವಿಕ್ ಘಟಕ್‌ಗೂ ಇರುವ ವ್ಯತ್ಯಾಸ, ರುತ್ವಿಕ್ ಘಟಕ್‌ಗೂ ಆರ್ಸನ್ ವೆಲ್ಸ್‌ಗೂ ಇರುವ ವ್ಯತ್ಯಾಸ…. ನಿನ್ನನ್ನು ಧ್ಯಾನಕ್ಕೆ ಹಚ್ಚುವಂತಾಗಬೇಕು. ಅದು ಸಂವೇದನೆಯನ್ನು ರೂಢಿಸಿಕೊಳ್ಳುವ ಸಮಸ್ಯೆ. ಆಗ ನೀನು ಒಂದು ಲಘು ಕಾಮಿಡಿಯನ್ನು ಕತೆಯಾಗಿಸಿದರೂ ಚಿತ್ರವಾಗಿಸಿದರೂ ಅದರಲ್ಲಿ ಜೀವನದ ಒಳನೋಟವಿರುತ್ತದೆ. ಚಾರ್ಲಿ ಚಾಪ್ಲಿನ್ ಕಾಮಿಡಿಗಳ ಗಾಂಭೀರ್ಯ ಇರುತ್ತದೆ….ಇದು ನಿನಗೂ ನನಗೂ ಸಿಗುವಂತಾಗಲಿ."

ಹೀಗೆ ನಾನು ಗಂಭೀರವಾಗಿ ಹೇಳುತ್ತಿದ್ದಾಗ ಬ್ರೇಮಿನ್‌ಗಳು ಅನ್ಯೋನ್ಯ ಸ್ನೇಹಿತರ ಬಗ್ಗೆ 'ಗಳಸ್ಯ ಕಂಠಸ್ಯ' ಎನ್ನುವುದು ನೆನಪಾಗುತ್ತಿದೆ. ಅದೇಕೋ ನಗೆ ಬರುತ್ತಿದೆ. ಮನಸೆಂಬ ಮರ್ಕಟ ಹೇಗೆ ಕೆಲಸ ಮಾಡುತ್ತದೆ ನೋಡಿ. ಅಂದಹಾಗೆ ಈ 'ಗಳಸ್ಯ'ದ ಅರ್ಥವೇನು?






– ಆಗಸ್ಟ್ 27, 1997

ದೇವರಿಗೇ ನೋಟಿಸು!

ಭೀಕರ ಬರಗಾಲ ಬಂದಿತ್ತು, ಹೊಟ್ಟೆಗೆ ಹಿಟ್ಟು ಇರಲಿ ಕುಡಿಯಲು ನೀರೂ ಇಲ್ಲದೆ ಜನ ಜಾನುವಾರು ಸಾಯುತ್ತಾ ಬಿದ್ದಿದ್ದವು. ಇದ ಕಂಡು ಜನಪರ ಸರ್ಕಾರದ ಕರುಳು ಕಿತ್ತುಬಂತು. ಇಂತಹ ಪರಿಸ್ಥಿತಿ ಕೊನೆಗೊಳ್ಳಬೇಕು ಎಂದು ಅದು ಮುಜರಾಯಿ ದೇವಸ್ಥಾನಗಳಲ್ಲಿ ಜಪತಪ, ಹೋಮಹವನ ಮಾಡಿ ಎಂದು ಸುತ್ತೋಲೆ ಹೊರಡಿಸಿತ್ತಲ್ಲಾ, ಅದಕ್ಕೆ ಹಣಾನೇ ಬಿಡುಗಡೆ ಮಾಡಿಲ್ಲವಂತೆ. ಭಕ್ತರ ಕಾಣಿಕೆ ಹಣದಲ್ಲಿಯೇ ಹೇಗಾದರೂ ನಿಭಾಯಿಸಿ ಅಂತ ಸೂಚಿಸಿತ್ತಂತೆ. ಇದರಲ್ಲಿ ಏನೂ ತಪ್ಪಿಲ್ಲ ಅಲ್ವಾ. ಹಾಗಿದ್ದರೂ ಅದು ಯಾವುದೋ ನಾಸ್ತಿಕ ಮುಂದೇದಕ್ಕೆ ಈ ಜನಪರ ದೈವ ಕೈಂಕರ್ಯವೂ ಉರಿ ಹತ್ತಿಸಿತಂತೆ. ಮಂತ್ರಕ್ಕೆ ಮಾವಿನಕಾಯಿ ಉದುರೊಲ್ಲ, ಪೂಜೆಗೆ ಮಳೆ ಸುರಿಯಲ್ಲ ಅನ್ನೋದು ಅದರ ತಿಳಿವಳಿಕೆಯಂತೆ. ಸಕಾಲದಲ್ಲಿ ಮಳೆ ಬರುವುದಿಲ್ಲ ಎಂದು ತಿಳಿದಿದ್ದರೂ ಅದನ್ನು ನಿಗ್ರಹಿಸಲು ಯಾವುದೇ ಕಾರ್ಯಕ್ರಮ ಹಾಕಿಕೊಳ್ಳದೆ ಹೀಗೆ ಆಡಾವುದಿ ಹಣ ಪೋಲು ಮಾಡುವುದು ಅಪರಾಧ ಅನ್ನುವುದು ಅದರ ಅಭಿಪ್ರಾಯವಂತೆ. ಮಾನಮರ್ಯಾದೆ ಇರುವ ಸರ್ಕಾರ ಆಗಿದ್ದರೆ ಪೂಜೆ ಮಾಡಿ ಮಳೆ ಸುರಿಸುತ್ತೀನಿ ಎಂದು ಮೂಗು ಹಿಡಿದುಕೊಂಡು ಕೂರಬಾರದಾಗಿತ್ತು, ಇದು ಕರ್ತವ್ಯಲೋಪ ಎಂದು ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕಿತ್ತಂತೆ!

ಅಲ್ಲಾ ಅದು ಯಾವುದೋ ತಲೆ ಕೆಟ್ಟಿದ್ದು ಪೂಜೆ ಮಾಡಿದರೆ ಮಳೆ ಬೀಳಲ್ಲ ಅನ್ನುತ್ತದೆ ಅಂದರೆ ಸಾರ್ವಜನಿಕರೆಲ್ಲ ಹಾಗೇ ಭಾವಿಸುತ್ತಾರೆ ಎಂದು ಅರ್ಥಾನಾ. ಕೋರ್ಟಿಗಾದರೂ ಬುದ್ಧಿ ಬೇಡವೆ? ಹಿಂದೆಮುಂದೆ ಯೋಚಿಸದೆ ಮುಖ್ಯಮಂತ್ರಿ, ಮುಜರಾಯಿ ಮಂತ್ರಿಗಳಿಗೆ ನೋಟಿಸು ಕೊಟ್ಟುಬಿಡೋದೆ! ಪೂಜೆ ಮಾಡಿಸಿಕೊಂಡೂ ಮಳೆ ಸುರಿಸಿಲ್ಲವಾದ್ದರಿಂದ ಇಂತಿಷ್ಟು ದಂಡ ಹಾಕಿದೆ ಎಂದು ದೇವರಿಗೆ ಬೆದರಿಸಿಲ್ಲ ಸದ್ಯ!

ದೇವರು ಮನುಷ್ಯರ ಪ್ರತಿರೂಪ ತಾನೆ. ಅವರಲ್ಲಿ ಇರುವ ಹಾಗೆ ದೇವರಲ್ಲೂ 'ವರ್ಗ' ಇರುವಂತಿದೆ. ಒಂದು ದೇವರು ಕಾಸುಕರೀಮಣಿ ಇಲ್ಲದ ಹಾಗೆ ಮದುವೆ ಮಾಡಿಕೊಂಡರೆ, ಇನ್ನು ಕೆಲವು ದೇವರುಗಳು ಸಾಲ ಮಾಡಿಯಾದರೂ ತುಪ್ಪ ತಿನ್ನಬೇಕು ಅನ್ನುವ ಜಾತಿಯವು. ತಿರುಪತಿ ತಿಮ್ಮಪ್ಪ ಇದಾನಲ್ಲ ಅವನು ಭಾರೀ ದೇವರು ಅಲ್ವಾ. ಹೆಸರಿಗೆ 'ಶ್ರೀಮಂತ' ಆದರೂ ಅವನೂ ಎರಡನೇ ಗುಂಪಿಗೆ ಸೇರಿದವನಂತೆ. ಹಾಸಿಗೆ ಇದ್ದಷ್ಟು ಕಾಲ ಯಾವತ್ತೂ ಚಾಚದೋನೇ ಅಲ್ಲವಂತೆ. ಮದುವೆ ವಯಸ್ಸು ಬಂತಲ್ಲಾ ಆಗ ಪದ್ಮಾವತೀನ ಮದುವೆ ಆದನಂತೆ. ಅದು ಹೇಗೆ ಅಂತೀರಿ. ವೈಭವೋಪೇತವಾಗೇ ಆದನಂತೆ. ಅಂತಹ ಮದುವೆ ಆಗುವುದಕ್ಕೆ ಹಣ ಬೇಕಲ್ಲ, ಅಷ್ಟೊಂದು ಹಣ ಅವನ ಹತ್ತಿರ ಇರಲಿಲ್ಲವಂತೆ. ಅದಕ್ಕೆ ಕುಬೇರನ ಹತ್ತಿರ ಸಾಲ ಮಾಡಿದನಂತೆ. ಇಲ್ಲಿ ಇರುವ ಹಾಗೆ ಅಲ್ಲಿಯೂ 'ಸಾಲಮನ್ನಾ' ಯೋಜನೆ ಬರುತ್ತೆ ಅಂದುಕೊಂಡಿದ್ದನೋ ಏನೋ. ಅದು ಬರಲೇ ಇಲ್ಲವಂತೆ. ಮದುವೆ ಆಗಿ ಎಷ್ಟೋ ವರ್ಷ ಆದರೂ ಸಾಲ ಅಂಬೋದು ತೀರುತ್ತಲೇ ಇಲ್ಲವಂತೆ. ಅದಕ್ಕೆ ಅವನು ಭಕ್ತರ ಬಳಿ "ತಾತಾ" ಅನ್ನುತ್ತಾನೆಯೇ ಹೊರತು "ಕ್ಯಾಕ್ಯಾ" ಅನ್ನುವುದೇ ಇಲ್ಲವಂತೆ. ಯಾರಿಗೋ ಒಬ್ಬನಿಗೆ ಪಾಪ ಸಾಲದ ಸುಳಿಗೆ ಸಿಕ್ಕಿ ಈ ತಿರುಪತಿ ತಿಮ್ಮಪ್ಪ ಒದ್ದಾಡ್ತಾ ಇದಾನಲ್ಲ, ಇವನ ಸಾಲ ಹಾಗಾದರೆ ಎಷ್ಟಿರಬಹುದು ಅನ್ನುವ ಕುತೂಹಲ ಕೆರಳಿತಂತೆ. ಆದೇನಾಗಿತ್ತು ಅಂದರೆ ತಮ್ಮ ದೇವರು ಸಾಲ ಮಾಡಿದ್ದಾನೆ ಎನ್ನುವುದು ಭಕ್ತರಿಗೆಲ್ಲ ತಿಳಿದಿತ್ತು, ಆದರೆ ಎಷ್ಟು ಸಾಲ ಮಾಡಿದ್ದ? ಅದು ಬಡ್ಡಿರಹಿತ ಸಾಲವೊ? ಬಡ್ಡಿಸಾಲ



ಆದರೆ ಬಡ್ಡಿ ಎಷ್ಟು? ಇದುವರೆವಿಗೆ ಎಷ್ಟು ಸಾಲ ಮರುಪಾವತಿ ಆಗಿದೆ? ಉಳಿದಿರುವ ಸಾಲವೆಷ್ಟು? ಎಂಬುದು ಯಾರಿಗೂ ತಿಳಿಯದ ಸಂಗತಿಯಾಗಿತ್ತು. ಸಂಬಂಧಿಸಿದವರನ್ನು ಕೇಳಿದರೆ 'ನಾಕು ತೆಲೀದು ಪೋರ' ಅನ್ನುತ್ತಿದ್ದರು. ಅದು ಹಿಂದಿನ ಮಾತು. ಈಗ ಹಾಗಿಲ್ಲ, ಮಾಹಿತಿ ಹಕ್ಕು ಕಾಯ್ದೆ ಅನ್ವಯ ತಿಳಿಯುವ ಎಲ್ಲಾ ಅವಕಾಶವಿತ್ತಲ್ಲಾ, ಇವಕ್ಕೆ ಉತ್ತರ ಕೊಡಿ ಅಂತ ಸಂಬಂಧಿಸಿದ ಇಲಾಖೆಗಳಿಗೆ ಕೇಳಿದ್ದಾನಂತೆ!

ಆ ತಿಮ್ಮಪ್ಪನಿಗೇ ಯಾವೋನೋ ತಲೆತಿರುಕ ಇಲ್ಲಿ ಹೀಗೆ ಅಮರಿಕೊಂಡನಾ. ಉತ್ತರ ಪ್ರದೇಶದ ಕತೆ ನೋಡಿ. ಅಲ್ಲೇನಾಗಿತ್ತು ಅಂದರೆ ಮೋಡ ಕಟ್ಟುತ್ತಿತ್ತು, ಅದ ನೋಡಿ ಜನರು ಖುಷಿಯಾಗಿರುವಾಗ ಮಳೆ ಇನ್ನೆಲ್ಲೋ ಸುರಿಯುತ್ತಿತ್ತು! ದೇವರ ಇಂತಹ ಚೆಲ್ಲಾಟದಿಂದ ಅಲ್ಲಿನ ಅಧಿಕಾರಿಯೊಬ್ಬರಿಗೆ ಸಿಟ್ಟು ನೆತ್ತಿಗೇರಿತಂತೆ. ದೇವಲೋಕದಲ್ಲಿ ಅಧಿಕಾರ ವಿಕೇಂದ್ರೀಕರಣ ಆಗಿತ್ತಂತೆ.. ಒಂದೊಂದು ಜವಾಬ್ದಾರಿಯನ್ನು ಒಬ್ಬೊಬ್ಬರಿಗೆ ವಹಿಸಿದ್ದರಂತೆ. ಮಳೆ ಜವಾಬ್ದಾರಿ ವರುಣನಿಗೆ ಸೇರಿತ್ತಂತೆ. ಇದನ್ನು ಆ ಅಧಿಕಾರಿ ತಿಳಿದುಕೊಂಡಿದ್ದರಂತೆ. ಇಲ್ಲಿ ಮೋಡ ಕಟ್ಟಿಸಿ ಮತ್ತೆಲ್ಲೋ ಮಳೆ ಸುರಿಸುವ ಅಪರಾಧಕ್ಕಾಗಿ ಯಾವ ದೇವರಿಗೆ ನೋಟಿಸು ನೀಡಬೇಕು ಅನ್ನುವ ಅನುಮಾನ ಬರಲಿಲ್ಲವಂತೆ. ಸೀದಾ ವರುಣನಿಗೆ ನೋಟಿಸು ನೀಡಿದರಂತೆ!

ಅಧಿಕಾರಿ ನೋಟಿಸೇನೋ ನೀಡಿದರು. ಆದರೆ ಅದು ಜಾರಿಯಾಗಬೇಕಲ್ಲ? ನೋಟಿಸು ಜಾರಿ ಮಾಡುವ ಜವಾಬ್ದಾರಿ ಗುಮಾಸ್ತನದ್ದು. ಅವನ ಹತ್ತಿರ ಅದು ಹೋಯಿತಂತೆ. ಅವನಿಗೆ ಅದನ್ನು ಹೇಗೆ ಜಾರಿ ಮಾಡುವುದು ಅನ್ನುವ ತಲೆನೋವು ಬಂತಂತೆ. ಅದಕ್ಕೆ ಅವನೇನು ಮಾಡಿದನಂತೆ! 'ನೋಟಿಸುದಾರ ವಿಳಾಸದಲ್ಲಿ ಇಲ್ಲ' ಅಂತ ಷರಾ ಬರೆದನಂತೆ! ಜಾಣ ಅವನು!

ಇವೆಲ್ಲ ಸಾಮಾನ್ಯ ಸಂಗತಿ ಅಂತೆ!

ದಿನಾ ಸಾಯುವವರಿಗೆ ಅಳುವವರು ಯಾರು ಎಂಬ ಗಾದೆಮಾತು ಇದೆ ನಿಜ. ಎಷ್ಟೇ ಆಗಲಿ ಅನುಭವದಿಂದ ಬಂದಿರುವ ಮಾತಿದು. ಸತ್ಯಾಸತ್ಯತೆ ಅರಿಯಬೇಕಾದರೆ ಯಾವುದಾದರೂ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿ. ಅದರಲ್ಲೂ ಹೆರಿಗೆ ವಾರ್ಡ್ ನೋಡಿ. ಇದರ ಸಾಕ್ಷಾತ್ಕಾರ ಆಗುತ್ತೆ.

ಗರ್ಭಿಣಿಯರಿಗೆ ಹೆರಿಗೆ ಸಮಯ ಬಂದರೆ ಸಾಕು. 'ಅಯ್ಯೋ ಅಮ್ಮಾ' ಅಂತೆಲ್ಲ ಊರುಕೇರಿ ಒಂದು ಮಾಡುವಂತೆ ಅರಚುತ್ತಾ ಕಿರುಚುತ್ತಾ ಇರುತ್ತಾರೆ. ತುಂಬಿದ ಗರ್ಭಿಣಿ ನೋವು ತಾಳಲಾರದೆ ಹಾಗೆ ಚೀರಾಡ್ತಿದಾರೆ ಅಂತ ನಾವುನೀವು ಅವರ ಬಗ್ಗೆ ಅನುಕಂಪ ತೋರಿಸಬಹುದು. ಯಾಕೆ ಅಂದರೆ ಇಂತಹವು ನಮಗೆ ಅಪರೂಪ ದೃಶ್ಯಗಳು ಆಗಿರುತ್ತವೆ. ಹಾಗೆ ಮಾಡುವುದು ಸಹಜ. ಆದರೆ ವಾರ್ಡ್ ನರ್ಸ್‌ಗಳಿರುತ್ತಾರಲ್ಲ ಅವರಿಗೆ ಇದು ಪ್ರತಿನಿಮಿಷದ ಗೋಳು. ಹೆರಿಗೆ ನೋವು ಗರ್ಭಿಣಿಗೆ ಬರದೆ ಮರಕ್ಕೆ ಬರುತ್ತಾ, ಹಾಗೆ ಬಂದಾಗ ಅದನ್ನು ಹೇಗೋ ಸಹಿಸಿಕೊಳ್ಳದೆ ನಮ್ಮ ಪ್ರಾಣ ಹಿಂಡುತ್ತಾರಲ್ಲ ಅನ್ನಿಸುತ್ತೆ ಅವರಿಗೆ. ಗರ್ಭಿಣಿಯೇ ಆಗದಿದ್ದರೆ ಈ ನೋವೇ ಬರುತ್ತಿರಲಿಲ್ಲವಲ್ಲಾ, ಇದಕ್ಕೆ ಆಕೆಯೇ ಹೊಣೆ ಅಂತಾನೂ ಅನ್ನಿಸಬಹುದು. ಪ್ರತಿನಿಮಿಷ ಇಂತಹ ಗೋಳಮ್ಮದಿರ ನೋಡಿನೋಡಿ ಯಾರಿಗಾದರೂ ಹೀಗೆ ಅನ್ನಿಸುವುದು ಸಹಜ. ಇದನ್ನು ಎಲ್ಲ ನರ್ಸಮ್ಮರಿರೂ ಗರ್ಭಿಣಿಯರಿಗೆ ಹೇಳದಿದ್ದರೂ ಕೆಲವರಾದರೂ 'ಸುಮ್ನೆ ಬಿದ್ಕಳಮ್ಮಾ. ಯಾರಿಗೂ ಬರದ ನೋವು ನಿನಗೆ ಬಂದಿಲ್ಲಕನ. ಈಗ ಹಿಂಗೆ ನೋವು ತಡೀಲಾರೆ ಅಂತ ಕಿರುಚಾಡೋಳು ಗಂಡನ ಪಕ್ಕ ಮಲಗುವಾಗಲೇ ಯೋಚ್ನೆ ಮಾಡ್ಬೇಕಿತ್ತು, ಆಗ ನೊಚ್ಚಗಿತ್ತೇನೊ' ಅಂತ ಸಿಡುಕುವುದು ಸಹಜವೇ ಅಲ್ಲವಾ?

ಜಲಂಧರ್‌ನ ಸರ್ಕಾರಿ ಆಸ್ಪತ್ರೆಯಲ್ಲೂ ಇಂತಹದೇ ರಾಮಾಯಣ ಅಂತೆ. ಯಾವೋ ಕೂಲಿಪಾಲಿ ಮಾಡಿ ಹೊಟ್ಟೆ ಹೊರೆಯೋವು ತಮ್ಮ ವಂಶ ನನಗೇ ಕೊನೆಯಾಗಬಾರದು ಅಂತ ಮದುವೆ ಆಗ್ತವೆ. ಅಂತೋನು ಒಬ್ಬನ ಹೆಂಡತಿ ಹೊಟ್ಟೆ ತಗ್ಗ ಎತ್ತಿಸಿಕೊಂಡು ಹೆರಿಗೆ ವಾರ್ಡ್‌ಗೆ ಬಂದಿದ್ದಳಂತೆ. ಅವಳೇನು ಮಹಾರಾಣೀನಾ ಕೆಂಪುಹಾಸಿನ ಸ್ವಾಗತ ಕೋರುವುದಕ್ಕೆ, ಬಿದ್ಕೊಳೋಕೆ ಒಂದು ಜಾಗ ಅಂತ ತೋರಿಸಿದ್ರಂತೆ. ಹೆರಿಗೆ ಸಮಯ ಬಂತಂತೆ. ಮಗು ಹೆರಬೇಕಾದೋಳು ನೋವು ತಡೆಯಲಾರದೆ ಅರುಚಾಟ ಕಿರುಚಾಟ ಮಾಡುತ್ತಿದ್ದಳಂತೆ. ನರ್ಸಮ್ಮರಿಗೆ ಇದು ಮಾಮೂಲಿ ಆಗಿತ್ತಲ್ಲವಾ. ಅವಳ ಪಾಡಿಗೆ ಅವಳು ಅರುಚ್ತಾನೆ ಇದ್ದಳಂತೆ. ಇವರ ಪಾಡಿಗೆ ಇವರು ಕಷ್ಟಸುಖ ಮಾತಾಡ್ತಾ ಕುಂತಿದ್ದರಂತೆ. ಹೊಟ್ಟೆಯಲ್ಲಿರುವ ಮಗು

ಎಚ್.ಎಲ್. ಕೇಶವಮೂರ್ತಿ



ಅಣಕ

ನರ್ಸಮ್ಮದಿರು ಬಂದು ಶುಶ್ರೂಷೆ ಮಾಡಲಿ ಅಂತ ... ಬೆಡ್ ಖಾಲಿಯಾಗಲಿ ಅಂತಾನೋ ಕಾಯಲೇ ಇಲ ... ಹೊರಕ್ಕೆ ಬಂದೇಬಿಡ್ತಂತೆ!

ಮೊದಲೇ ದರಿದ್ರ ತಂದೆತಾಯಿ ಆರಿಸಿಕೊಂಡಿದ್ದ ... ಅದು. ದುರ್ಭಿಕ್ಷದಲ್ಲಿ ಅಧಿಕ ಮಾಸ ಅನ್ನುವ ... ಹುಟ್ಟುವಾಗಲೇ ಕಾಯಿಲೆ ಜೊತೇನೆ ಹುಟ್ಟಿತ್ತಂತೆ. ಜಾಂಡೀಸ್ ಆಗಿತ್ತಂತೆ. ರೋಗದ ಪುಟ್ಟಿ ಸತ್ತರೆ ಸ... ಅಂತ ನರ್ಸಮ್ಮದಿರು ಉದಾಸೀನ ... ಮಾಡಿರಲಿಲ್ಲವಂತೆ... ಡ್ರಿಪ್ಸ್ ಹಾಕಿ ಇನ್‌ಕ್ಯುಬೇಟರ್ ... ಹಾಕಿದರಂತೆ. ದಯಾಮಯರು ಅವರು!

ಆ ಆಸ್ಪತ್ರೆಯಲ್ಲಿ ಒಂದು ಕಾನೂನು ಇದೆ ... ಅದು ಅನಧಿಕೃತಾನೇ ಇರಬಹುದು. ಆದರೂ ಕಾ... ಅಂತ ಇದೆ. ಅದನ್ನ ಕಟ್ಟುನಿಟ್ಟಾಗಿ ನರ್ಸಮ್ಮ... ಪರಿಪಾಲಿಸುತ್ತಿದ್ದಾರಂತೆ. ಅದೇನು ಅಂದರೆ ಇನ್‌ಕ್ಯುಬೇ... ಚಾರ್ಜು ಅಂತ ಇನ್ನೂರು ರೂಪಾಯಿಗಳನ್ನು ... ಬಳಸೋರು ಕೊಡಬೇಕಿತ್ತಂತೆ. ಆದರಂತೆ ನರ್ಸಮ್ಮ... 'ಕೊಡಿ ಇನ್ನೂರ' ಅಂದ್ರಂತೆ. ಅವು 'ನಮ್ಮ ತಲೆ ಒಡೆ... ನಯಾಪೈಸಾ ಸಿಗಾಕಿಲ್ಲ' ಅಂದ್ರಂತೆ. ನರ್ಸಮ್ಮದಿರು ... ಮಾಡಬೇಕು? ಕಾನೂನು ಪರಿಪಾಲಿಸಬೇಕಿತ್ತಲ್ಲಾ. ಮಗ... ಇನ್‌ಕ್ಯುಬೇಟರ್‌ನಿಂದ ಹೊರಕ್ಕೆ ತೆಗೆದುಹಾಕಿದ... ಹೀಗಾಯಿತೋ ಇಲ್ಲವೋ ಮಗು ಅದರ ಪಾಡಿಗೆ ... ಗೋವಿಂದನ ಪಾದ ಸೇರಿ ಎಲ್ಲ ಕಷ್ಟಗಳಿಂದ ... ಪಡೆಯಿತಂತೆ!

ಬಹಳ ಜನ ಇದನ್ನೇ ಮಹಾಪರಾಧ ಅನ್ನುವ ... ಬೊಂಬ್ಡ ಬಜಾಯಿಸುತ್ತಾ ಇದಾರೆ. ಇನ್‌ಕ್ಯುಬೇ... ಬಳಸಲು ಇನ್ನೂರು ರೂಪಾಯಿ ಶುಲ್ಕ ನೀಡಬೇಕು ... ಕಾನೂನು ಇದೆಯೆ? ಇದ್ದರೆ ತೋರಿಸಿ ಅಂತ ಕೂ... ಅವೆ. ಅಲ್ಲಾ ಎಲ್ಲವನ್ನೂ ಕಾನೂನು ರೀತಿ... ಮಾಡುವುದಕ್ಕೆ ಆಗಲ್ಲ ಕಣ್ರೆ ಅಂದರೆ ಬಡವರ ಶೋ... ಮಾಡ್ತಾ ಅವೆ ಅಂತ ಕಿರುಚಾಡ್ತವೆ. ಅಲ್ಲ ಹೀಗಾಡು... ತಲೆ ಒಳಗೆ ಮಿದುಳು ಇದೆಯಾ ಅಂತೀನಿ. ಸ... ಆಸ್ಪತ್ರೆಗಳು ಅಂದ್ರೆ ಏನು ಅನ್ಕೊಂಡಿದಾರೆ ಇ... ಬಡವರಿಗೇ ಮೀಸಲಾದ ಆಸ್ಪತ್ರೆಗಳು ಕಣ್ರಿ ... ಅಂದಮೇಲೆ ಶೋಷಣೆ ಅಂತ ಮಾಡಿದ್ರೆ ಅ... ಮಾಡಬೇಕು ತಾನೆ? ಅಲ್ಲಿಗೆ ಮುಖಾನೆ ಹ... ಇರುವವರನ್ನು ಹೇಗೆ ಮಾಡೋಕ್ಕೆ ಆಗುತ್ತೆ? ... ಮುಖ್ಯಮಂತ್ರಿಗಳು ಇದನ್ನೆಲ್ಲ ತಿಳ್ಕಂಡವ್ರೆ. ಆದಕ್ಕೇ ನ... 'ಇವೆಲ್ಲ ಸಾಮಾನ್ಯ ಸಂಗತಿ' ಅಂದವ್ರೆ!

ಮುಖ್ಯಮಂತ್ರಿ ಅಂದರೆ ಇಂತಹವರಿರಬೇಕು!

ದಾಳಿಕೋರರಿಗಿಂತಲೂ ದಾಳಿಯ ಸಮರ್ಥಕರು ಹೆಚ್ಚು ಅನಾಗರಿಕರು


ಹೊಸ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಸಂಪುಟದಲ್ಲಿ ಹೊಸತಾಗಿ ದಕ ಜಿಲ್ಲೆಯ ಉಸ್ತುವಾರಿಯನ್ನು ವಹಿಸಿಕೊಂಡಿರುವ, ದಾಂಧಲೆ-ಪ್ರಚೋದನೆಯ ಹಿನ್ನೆಲೆಯ ಸಿ.ಟಿ.ರವಿಗೆ ಹೊಸ ರೀತಿಯ ಅಭಿನಂದನೆಯ ಸಮಾರಂಭವೋ ಅನ್ನುವಂತೆ ಹಿಂದೂತ್ವವಾದಿಗಳು ನಡೆಸಿದ ಹೋಮ್ ಸ್ಟೇ ಮೇಲಿನ ಅನಾಗರಿಕ ದಾಳಿಯನ್ನು ಕೆಲವು ಪಕ್ಕಾ ಹಿಂದೂತ್ವವಾದಿಗಳೇ ಖಂಡಿಸುತ್ತಿದ್ದಾರೆ. ಆದರೆ ಹರಕುಬಾಯಿಯ ಪ್ರಮೀಳಾ ನೇಸರ್ಗಿ ಹಾಗು ಆಕೆಯ ಅಣ್ಣನಂತಿರುವ ಈಶ್ವರಪ್ಪ ಇದನ್ನು ಸಮರ್ಥಿಸಿ ದಾಳಿಗೊಳಗಾದ ಹೆಣ್ಣುಮಕ್ಕಳನ್ನೇ ದೂರುತ್ತಿರುವುದು ನಾಚಿಕೆಗೇಡಿನ ಸಂಗತಿ. ದಾಳಿಯ ಸೂತ್ರಧಾರರಲ್ಲೊಬ್ಬನಾದ ಜಗದೀಶ ಕಾರಂತನೆಂಬ ಸಂಸ್ಕೃತಿಯ ಗುತ್ತಿಗೆದಾರನಂತೂ ಈ ಹೆಣ್ಣು ಮಕ್ಕಳನ್ನು ವೇಶ್ಯೆಯರೆಂದೇ ಕರೆದು ಅವಮಾನಿಸುವ ಮಟ್ಟಿಗೆ ತನ್ನ ಹೀನತನವನ್ನು ತೋರಿದ್ದಾನೆ.

ಇತ್ತೀಚೆಗೆ ನಡೆದ ಅಸ್ಸಾಂ ಪ್ರಕರಣದಲ್ಲಿ ಎಲ್ಲರೂ ಮಾಧ್ಯಮದ ವಿರುದ್ಧ ತಿರುಗಿ ಬಿದ್ದಿದ್ದರು. ಜನರಲ್ಲಿದ್ದ ಈ ಸಿಟ್ಟಿನ ಎಳೆಯನ್ನು ಹಿಡಿದು ಕೆಲ ಸಮರ್ಥಕರು ಹಾಗೂ ಪೊಲೀಸ್ ಅಧಿಕಾರಿಗಳು ದಾಳಿಕೋರರ ಬದಲು ಮಾಧ್ಯಮದವರನ್ನು ಜರೆಯುತ್ತಾ ಪರೋಕ್ಷವಾಗಿ ಅವರನ್ನೇ ಹೊಣೆಗಾರರೆಂದು ಬಿಂಬಿಸಿ ದಾಳಿಯ ದುಷ್ಟರನ್ನು ರಕ್ಷಿಸಲು ಹೊರಟಿವೆ.

ದಾಳಿಯನ್ನು ವರದಿ ಮಾಡಿದ ಈ ನವೀನ್ ಸೂರಿಂಜೆ ಪ್ರಸ್ತುತ ಕರಾವಳಿ ವಾತಾವರಣಕ್ಕೆ ಲಾಯಕ್ಕಾದ ವ್ಯಕ್ತಿ ಅಲ್ಲವೇ ಅಲ್ಲ, ಹಲ್ಲೆ ಮಾಡಿ ಪೊಲೀಸರೊಂದಿಗೆ ಹರಟೆ ಕೊಚ್ಚುವ, ಪೊಲೀಸರೆದುರೇ ಅಮಾಯಕರನ್ನು ಬಡಿಯುವ



ಧಾರ್ಷ್ಟ್ಯತೆ ಬೆಳೆಸಿಕೊಂಡ ರಾಜಕೀಯ ಕೃಪಾಪೋಷಿತ ಗೂಂಡಾಗಳೇ ತುಂಬಿರುವ ಕರಾವಳಿಯಲ್ಲಿ ನವೀನ್‌ರದ್ದು ನಿಜಕ್ಕೂ ಅಧಿಕ ಪ್ರಸಂಗಿತನದ ಕೆಲಸ. ಆದರೂ ಎಂದಿನಂತೆ ಯಾರಿಗೂ ತಿಳಿಯದೇ ಮುಚ್ಚಿಹೋಗಬೇಕಿದ್ದ ಸಂಗತಿಯನ್ನು ಜಗಜ್ಜಾಹೀರುಮಾಡಿ ಸಂಸ್ಕೃತಿ ರಕ್ಷಕರ ಮುಖವಾಡ ಕಳಚಿದ ನವೀನರ ಈ ಅಧಿಕ ಪ್ರಸಂಗಿತನಕ್ಕೆ ಭೇಷ್ ಎನ್ನಲೇ ಬೇಕು.




ಹಿಂದೂ ಸಂಸ್ಕೃತಿಗೆ ಕಳಂಕ ತರುವ ಪಬ್ ಮೇಲೆ ದಾಳಿಯಾಯಿತು, ಬರ್ತ್‌ಡೇ ಪಾರ್ಟಿ ಮೇಲೆ ದಾಳಿಯಾಯಿತು, ಸರಿ. ಈಶ್ವರಪ್ಪ ಹಾಗು ಆತನ ತಂಗಿ ನೇಸರ್ಗಿಯವರು ಹೇಳುವಂತೆ ಅಡ್ಡ ಹಾದಿ ಹಿಡಿದವರನ್ನು ಯಾವುದೋ ಮೂರನೇ ವ್ಯಕ್ತಿ ತದಕುವುದು ತಪ್ಪೇನಲ್ಲ, ಹಾಗಾದರೆ ಮಂಗಳೂರನ್ನೇ ಪುಣ್ಯ ಭೂಮಿಯನ್ನಾಗಿಸಿಕೊಂಡ ಬ್ಲೂಫಿಲಂ ವೀಕ್ಷಕ ಪಾಲೇಮಾರ್ ಆಗಲೀ, ಉಡುಪಿಯಲ್ಲಿ ಕೃಷ್ಣನ ನಂತರ ವರ್ಲ್ಡ್ ಫೇಮಸ್ ಆಗಿರುವ ರಘುಪತಿ ಭಟ್ಟನಾಗಲಿ, ರೇಣುಕಾಚಾರ್ಯನಾಗಲಿ, ಹಾಲಪ್ಪಾದಿಗಳಾಗಲೀ ಈ ಸಂಸ್ಕೃತಿ ರಕ್ಷಕರಿಗೆ ನೆನಪೇ ಆಗಲಿಲ್ಲ ಎಂಬುದು ಎಂಥಾ ಚೋದ್ಯವಲ್ಲವೇ?

- ಓದುಗ, ಪುತ್ತೂರು


ಕರಾವಳಿಯಲ್ಲಿ ಬಿಜೆಪಿ ವಿರೋಧಿಗಳೂ ಇದ್ದಾರೆ, ಆದರವರು ಅಲ್ಪಸಂಖ್ಯಾತರು

ಭಾರತೀಯ ಜನತಾ ಪಕ್ಷದ ಮೂಲಶಕ್ತಿಯೆಂದರೆ ಅದು ಕೋಮು ವಿದ್ವೇಷ. ರಾಷ್ಟ್ರೀಯ ಮಟ್ಟದ ಹಿರಿಯ ಪಕ್ಷವಾಗಿದ್ದರೂ ಅಧಿಕಾರಕ್ಕಾಗಿ ಏದುಸಿರು ಬಿಡುತ್ತಿದ್ದ ಈ ಪಕ್ಷಕ್ಕೆ ಜೀವ ನೀಡಿದ್ದು ಅಡ್ವಾಣಿಯ ಕುಪ್ರಸಿದ್ಧ ಇಟ್ಟಿಗೆ ರಥಯಾತ್ರೆ ಹಾಗು ಬಾಬ್ರಿ ಮಸೀದಿ ಧ್ವಂಸ ಮತ್ತು ಅದರ ಬಳಿಕ ಹುಟ್ಟಿದ ಕೋಮು ವಿದ್ವೇಷದ ಘಟನೆಗಳೇ ತಾನೇ. ವಿಭಿನ್ನ ಪಾರ್ಟಿಯೆಂದು ಕೊಚ್ಚಿಕೊಳ್ಳುವ ಈ ಪಕ್ಷ ಕರ್ನಾಟಕದಲ್ಲೂ ಕೋಮುಗಲಭೆಗಳನ್ನು ಹಚ್ಚಿ... ಮತದಾರರನ್ನು ಗುಡ್ಡೆಹಾಕಿ ಅಧಿಕಾರ ಪಡೆದಿತ್ತು.



ಕರಾವಳಿಯಲ್ಲಿನ ಪಬ್ ದಾಳಿ ಪ್ರಕರಣವಾ... ಹೋಮ್ ಸ್ಟೇ ದಾಳಿ ಪ್ರಕರಣಗಳಲ್ಲಾಗಲೀ ಜನ ... ಕೂಗಾಡಿದರೂ ಇಂತವುಗಳಿಂದಲೇ ಮೇಲೆ ಬಂದ ಬಿ... ಇದೊಂದು ವರದಾನವಾಗಬಹುದೇ ವಿನಃ ಹಾನಿ... ಲಾರದು. ಇದಕ್ಕೆ ಉದಾಹರಣೆಯಾಗಿ ಕ್ರಿಮಿನಲ್ ಹಿ... ಯುಳ್ಳ ಸುನಿಲ್‌ಕುಮಾರ್ ಸಜ್ಜನ ಜಯಪ್ರಕಾಶ್ ಹೆಗ್ಡೆಯ ... ವಿರುದ್ಧ ಚುನಾವಣೆಗೆ ನಿಂತಾಗ ಆತನ ಕುರಿತು ಪ್ರ... ಹೊರಟದ್ದು ಪತ್ನಿ ಹಂತಕನೆಂದೇ ಕುಖ್ಯಾತಿ ಪಡೆದಿ... ಶಾಸಕ ರಘುಪತಿ ಭಟ್ಟ ಎಂಬ ಶಾಸಕ (ಜತೆಗೆ ಪಕ್ಷದ ... ಬ್ರಹ್ಮಾಂಡ ಭ್ರಷ್ಟಾಚಾರದ ಹಗರಣಗಳು ಬೇರೆ). ಇವರ ... ಜುಗಲ್ಬಂದಿ ವಾಸ್ತವವಾಗಿ ಋಣಾತ್ಮಕ ಫಲಿತಾಂಶ ... ನೀಡಬೇಕಿತ್ತು, ಆದರೆ ಗೆಲ್ಲದಿದ್ದರೂ ಅವರು ಭಾ... ಓಟುಗಳನ್ನೇ ಪಡೆದಿದ್ದರು.

ಹೋಮ್ ಸ್ಟೇ ಪ್ರಕರಣದಲ್ಲೇ ನೋಡಿದರೂ ಬಹು... ಈ ದುರುಳರೆಲ್ಲರೂ 25 ರಿಂದ 28ರ ಆಸುಪಾಸಿನ... ಆಗಿದ್ದರು. ರಾಜೀವ್ ಗಾಂಧಿ ಕಾಲದಲ್ಲಿ ಮಾಡ... ಮತದಾನದ ವಯಸ್ಸಿನ ಇಳಿಕೆ (21 ರಿಂದ 18) ... ಪರಿಣಾಮವೂ ಬಿಜೆಪಿಗೆ ವರದಾನವಾಗಿದೆ. ಮ... ಬಿಸಿರಕ್ತದ ವಯಸ್ಸಿನ ಯುವಕರನ್ನು ಕೋಮು ವಿಷ ಬಿ... ಬೆರಳೆಣಿಕೆಯ ಕೆಲ ಕ್ರಿಮಿಗಳು ಸುಲಭದಲ್ಲಿ ... ತಪ್ಪಿಸುತ್ತಾರೆ. ವಾಸ್ತವ ಜಗತ್ತಿನ (ಒಬ್ಬರಿಗೊಬ್ಬರು ಸಮಾಜ... ಸಹಕಾರಿಯಾಗಿ ಬದುಕುವ ಅಗತ್ಯತೆಯ) ಅರಿ... ಕೊರತೆಯಿರುವ ಇವರು ಇಂತವುಗಳಿಗೆ ಸುಲಭದಲ್ಲಿ ... ಬೀಳುತ್ತಾರೆ. ಕಾಲೇಜು ವಿದ್ಯಾರ್ಥಿಗಳೂ ಇದಕ್ಕೆ ಹೊರ... ನಳಿನ್ ಕುಮಾರ್‌ನಂತವರು ಪೂಜಾರಿಯಂತವರ ಎ...



ಸುದೀಪ್‌ಗೆ ಹಲ್ಲುನೋವು, ನಿರ್ಮಾಪಕನಿಗೆ ತಲೆನೋವು?

'ಈಗ' ಚಿತ್ರದ ಅಪೂರ್ವ ಯಶಸ್ಸಿನಿಂದಾಗಿ ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ಸುದೀಪ್ ಈಗ ಏನು ಮಾಡಿದರೂ ಸುದ್ದಿಯಾಗುತ್ತಿದೆ. ಅಂತಹ ಒಂದು ಸುದ್ದಿ ಈಗ ಸುದೀಪ್ ಕ್ಯಾಂಪ್‌ನಿಂದ ಹೊರಬಿದ್ದಿದೆ. ಅದೇನೆಂದರೆ ಕಳೆದ ಹಲವಾರು ವಾರಗಳಿಂದ ಹಲ್ಲುನೋವಿನಿಂದ ಬಳಲುತ್ತಿದ್ದ ಸುದೀಪ್ ಕೊನೆಗೂ ಒಂದು ಸಣ್ಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಆ ಕಾರಣದಿಂದಾಗಿ ಅವರು ನಟಿಸುತ್ತಿರುವ 'ಬಚ್ಚನ್' ಚಿತ್ರದ ಶೂಟಿಂಗ್ ಒಂದೆರಡು ವಾರ ರದ್ದಾಗಿದೆಯಂತೆ. ಅದೇರೀತಿ ನಾಯಕನಟ ಉಪೇಂದ್ರ ಕೂಡ ಯಾವುದೋ ಒಂದು ಸಣ್ಣ ಚಿಕಿತ್ಸೆಗೆ ಒಳಗಾಗಿರುವುದರಿಂದ ಅವರು 'ಗಾಡ್ ಫಾದರ್' ಚಿತ್ರದ ಪ್ರಚಾರ ಕಾರ್ಯದಲ್ಲಿ ಹೆಚ್ಚು ಭಾಗವಹಿಸಲಿಲ್ಲವಂತೆ. ಈ ಹಿಂದೆ ಬಾಲಿವುಡ್ ಚಿತ್ರರಂಗದಲ್ಲಿ ನಾಯಕನಟನ ಆರೋಗ್ಯ ಕೈಕೊಟ್ಟಿತೆಂದರೆ ಅವರ ಚಿತ್ರದ ನಿರ್ಮಾಪಕ ದೇವಸ್ಥಾನಕ್ಕೆ ಹೋಗಿ ಅವರ ಆರೋಗ್ಯ ಬೇಗ ಸುಧಾರಿಸಲಿ ಎಂದು ವಿಶೇಷ ಪೂಜೆ ಮಾಡಿಸುತ್ತಿದ್ದರಂತೆ. ಇದರರ್ಥ ಅವರಿಗೆ ಆ ನಟನ ಮೇಲೆ ವಿಶೇಷವಾದ ಪ್ರೀತಿ, ಅಭಿಮಾನ ವಿತ್ತೆಂದಲ್ಲ, ತಮ್ಮ ಸಿನಿಮಾಕ್ಕೆ ಕೋಟ್ಯಾಂತರ ರೂಪಾಯಿ ಬಂಡವಾಳ ಹೂಡುವ ನಿರ್ಮಾಪಕರಿಗೆ ನಟನ ಆರೋಗ್ಯ ಕೈಕೊಟ್ಟರೆ ಟೆನ್‌ಷನ್ ಆರಂಭವಾಗುತ್ತದೆ. ಈ ಚಿತ್ರ ಮತ್ತೆ ಆರಂಭವಾಗುವ ತನಕ ಬಂಡವಾಳದ ಮೇಲೆ ಬಡ್ಡಿ ಕಟ್ಟಬೇಕು ಎಂಬುದೇ ಅವರ ಟೆನ್ಷನ್‌ಗೆ ಮೂಲಕಾರಣ. ಆದರೆ ಕನ್ನಡ ಚಿತ್ರರಂಗದಲ್ಲಿ ಅಷ್ಟು ದೊಡ್ಡ ಮೊತ್ತ ತೆಗೆದುಕೊಳ್ಳುವ ನಾಯಕನಟನೂ ಇಲ್ಲ, ಇಂತಹ ಭಾರೀ ಬಜೆಟ್‌ನ ಚಿತ್ರಗಳೂ ಇಲ್ಲಿ ನಿರ್ಮಾಣ ವಾಗುತ್ತಿಲ್ಲವಾದ ಕಾರಣ ಇಲ್ಲಿಯ ನಿರ್ಮಾಪಕರು ದೇವಸ್ಥಾನಕ್ಕೆ ಸದ್ಯ ಹೋಗಿಲ್ಲವಂತೆ. ಆದರೂ ಈ ಇಬ್ಬರು ನಾಯಕ ನಟರ ಆರೋಗ್ಯ ಬೇಗ ಸುಧಾರಿಸಲಿ ಎಂಬುದೇ ನಮ್ಮ ಸದಾಶಯ.

...ಕುಡದೆಸೆ ಇಲ್ಲದ ತಾರಾ

...ಟಿ ತಾರಾಗೆ ಏನಾಗಿದೆ ಎಂದು ಅರ್ಥವಾಗುತ್ತಿಲ್ಲ. ...ತ್ತೀಚೆಗೆ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆಯಾದ ನಂತರ ತಾರಾ ...ಸ್ಟ್ ಚಟುವಟಿಕೆಯಿಂದ ಓಡಾಡುತ್ತಿರುವುದು ನಿಜ. ಆದರೆ ಈ ...ದಿಂದಾಗಿ ಸಿನಿಮಾ ರಂಗಕ್ಕೆ ನಯಾಪೈಸೆ ಲಾಭ ಆಗುತ್ತಿಲ್ಲ ...ದು ಕೂಡ ಅಷ್ಟೇ ನಿಜ.



...ದಾಹರಣೆಗೆ, ಈ ವಾರ ತಾರಾ ...ಪೊಂಡಿದ್ದ ಎರಡು ಕಾರ್ಯಕ್ರಮಗಳು ...ವು ನೋಡಿ.

...ಮೊದಲಿಗೆ ಒಂದು ಚೈನಾದ ...ವನ್ನು ತಾರಾ ಬಾದಾಮಿ ಹೌಸ್‌ನಲ್ಲಿ ...ನನ ಮತ್ತು ಕ್ರೀಡಾ ಸಚಿವ ಅಪ್ಪಚ್ಚು ... ಅವರಿಂದ ಉದ್ಘಾಟಿಸಿದರು. ಒಬ್ಬ ...ಕಲ ಹುಡುಗಿ ನಿಜಜೀವನದಲ್ಲೂ ... ಕ್ರೀಡಾಪಟುವಾಗಿದ್ದು ಆ ಚಿತ್ರದ ...ಮ್ಮ, ಅದಕ್ಕಿಂತ ಮುಖ್ಯವಾಗಿ ಆ ಅಂಗವಿಕಲ ಹುಡುಗಿಯ ...ದದಲ್ಲಿನ ಪಾತ್ರವನ್ನು ನಿರ್ವಹಿಸಿದ್ದಳೆಂಬುದು ಇನ್ನೊಂದು ವಿಶೇಷ. ...ವಾಗಿ, ಚಿತ್ರ ಅಂಗವಿಕಲರಿಗೆ ಸ್ಫೂರ್ತಿ ನೀಡುವಂತಹದ್ದು. ಆದರೆ ...ಮಾತ್ರ ಅದನ್ನು ಕ್ರೀಡಾ ಸಚಿವ ಅಪ್ಪಚ್ಚು ರಂಜನ್ ಅವರಿಗೆ ...ಸಿದರು!

... ಚಿತ್ರದ ಉದ್ಘಾಟನೆಗೆ ಮಾನ್ಯ ಮಂತ್ರಿಗಳು ಒಂದು ಗಂಟೆಗೂ ...ತಡವಾಗಿ ಬಂದರೆಂಬುದು ನಿಮಗೆ ಗೊತ್ತಿರಲಿ. ಇಂತಹ ಚಿತ್ರವನ್ನು ... ರಂಗದ ನಿರ್ದೇಶಕರಿಗೋ ಅಥವಾ ಅಂಗವಿಕಲ ...ರ್ಗಗಳಿಗೋ ತೋರಿಸಿದಲ್ಲಿ ಒಂದು ಅರ್ಥವಿರುತ್ತಿತ್ತು. ಆದರೆ ... ಅಂತಹ ಸೂಕ್ಷ್ಮ ಇದ್ದಂತೆ ಕಾಣಿಸಲಿಲ್ಲ.

...ದಾದನಂತರ ಫ್ರೆಂಡ್‌ಶಿಪ್ ಡೇ ದಿನದಂದು ಮಾಜಿ ...ಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಮತ್ತು ಸದಾನಂದ ಗೌಡರು ... ರೇಣುಕಾಂಬಾ ಥಿಯೇಟರ್‌ನಲ್ಲಿ ಬರಗೂರು ರಾಮಚಂದ್ರಪ್ಪ ...ಶನದ 'ಭಾಗೀರಥಿ' ಚಿತ್ರವನ್ನು ವೀಕ್ಷಿಸಿದರು. ಇವರಿಬ್ಬರ ಜೊತೆ ಹಾಲಿ ಉಪಮುಖ್ಯಮಂತ್ರಿ ಆರ್.ಅಶೋಕ್ ಕೂಡ ಉಪಸ್ಥಿತರಿದ್ದರು. ಆದರೆ ಚಿತ್ರದ ನಿರ್ದೇಶಕ ಬರಗೂರು ರಾಮಚಂದ್ರಪ್ಪರವರ ಮತ್ತು ಆ ಸಿನಿಮಾದಲ್ಲಿ ಮುಖ್ಯ ಪಾತ್ರ ನಿರ್ವಹಿಸಿರುವ ಭಾವನಾ ಗೈರುಹಾಜರಾಗಿದ್ದರು. ನಿರ್ಮಾಪಕ ಶ್ರೀನಿವಾಸ್ ಮಾತ್ರ ಅತ್ತಿಂದಿತ್ತ ಓಡಾಡುತ್ತಿದ್ದರು. ಹೀಗಾಗಿ ಮಾಜಿ ಮು.ಮಂ ಮತ್ತು ಹಾಲಿ ಉ.ಮು.ಮಂತ್ರಿಗಳನ್ನು ಸ್ವಾಗತಿಸುವ, ವಿಚಾರಿಸಿಕೊಳ್ಳುವ ಜವಾಬ್ದಾರಿಯನ್ನು ತಾರಾ ಅವರೇ ವಹಿಸಿಕೊಂಡಿದ್ದರು. ಅಂದಹಾಗೆ ತಾರಾ ಬಿಜೆಪಿಯ ಸಕ್ರೀಯ ಕಾರ್ಯಕರ್ತೆ ಆಗಿರುವುದರಿಂದಲೇ ಆಕೆಗೆ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆ ಸ್ಥಾನವನ್ನು ನೀಡಲಾಗಿದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

'ಭಾಗೀರಥಿ' ಒಂದು ಅದ್ಭುತ ಚಿತ್ರವಂತೂ ಅಲ್ಲ, ಅದರಲ್ಲಿ ಮನರಂಜನೆಯೂ ಇಲ್ಲ, ಕಲಾತ್ಮಕತೆಯೂ ಇಲ್ಲ, ಅದರ ಬದಲಿಗೆ ಮೂಢನಂಬಿಕೆಯನ್ನು ಪ್ರಚೋದಿಸುವ ಕಥಾವಸ್ತುವಿದೆ. ಬರಗೂರು ಚಿತ್ರವಾಗಿರುವುದರಿಂದ ಇದೇನೂ ತಾಂತ್ರಿಕವಾಗಿ ಅತ್ಯದ್ಭುತವಾಗಿ ಮೂಡಿಬರಲು ಸಾಧ್ಯವೇ ಇಲ್ಲ. ಹೋಗಲಿ, ಈ ಚಿತ್ರವನ್ನು ಕನ್ನಡದ ಜನತೆ ನೋಡಿ ಮೆಚ್ಚಿದ್ದಾರೆ ಎಂಬೋಣವೆಂದರೆ ಇದು ಬೆಂಗಳೂರಿನಲ್ಲಿ ಬಿಡುಗಡೆಯಾಗಿದ್ದು ಕೈಲಾಸ್ ಎಂಬ ಮಿನಿ ಥಿಯೇಟರ್‌ನಲ್ಲಿ, ಇಷ್ಟಿದ್ದರೂ ಈ ಚಿತ್ರವನ್ನು ನೋಡುವ ಸಮಯ ಮತ್ತು ವ್ಯವಧಾನ ಈ ಮಾಜಿ ಮು.ಮಂ ಮತ್ತು ಉ.ಮು.ಮಂತ್ರಿಗಳಿಗೆ ಸಿಕ್ಕಿದ್ದೇ ಆಶ್ಚರ್ಯ.

ಅದೇನೇ ಇರಲಿ, ತಾರಾ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆಯಾದ ನಂತರ ಸಿನಿಮಾಗಳನ್ನು ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ, ಶಾಸಕರಿಗೆ ತೋರಿಸುವುದೇ ತನ್ನ ಕೆಲಸ ಎಂದು ಭಾವಿಸಿರುವಂತಿದೆ. ಇಂತಹ ಚಟುವಟಿಕೆಗಳ ಬದಲಾಗಿ ಸಿನಿಮಾರಂಗದ ಅಭಿವೃದ್ಧಿಯನ್ನು ಕುರಿತು ತಾರಾ ಹೆಚ್ಚು ಚಿಂತಿಸಬೇಕು ಎಂದು ಆಕೆಗೆ ಯಾರಾದರೂ ತುರ್ತಾಗಿ ಹೇಳಬೇಕಾಗಿದೆ. ●



ಮೈಮಾಟ ತೋರುವ ಸ್ಪರ್ಧೆ

ಪೂಜಾ ಗಾಂಧಿ ಮತ್ತು ರಾಗಿಣಿ ಎಂಬ ಇಬ್ಬರು ಸುಂದರಿಯರ ನಡುವೆ ಮೈಮಾಟ ತೋರಿಸುವುದರಲ್ಲಿ ಸ್ಪರ್ಧೆ ಏರ್ಪಟ್ಟಿರುವಂತೆ ಕಾಣಿಸುತ್ತಿದೆ. ಆದರೆ ಪೂಜಾ ಗಾಂಧಿ 'ದಂಡುಪಾಳ್ಯ' ಚಿತ್ರದಲ್ಲಿ ಮತ್ತು ರಾಗಿಣಿ 'ಕಳ್ಳ ಮಳ್ಳ ಸುಳ್ಳ' ಚಿತ್ರದಲ್ಲಿ ಐಟಂ ಸಾಂಗ್‌ಗಳಲ್ಲಿ ಅರೆಬರೆ ಮೈ ಪ್ರದರ್ಶನ ಮಾಡಿ ನರ್ತಿಸಿದ ನಂತರ ಪಶ್ಚಾತ್ತಾಪದ ದಾಟಿಯಲ್ಲಿ "ಇನ್ನು ಮುಂದೆ ಐಟಂ ಸಾಂಗ್‌ಗಳಲ್ಲಿ ನಟಿಸುವುದಿಲ್ಲ" ಎಂದು ಹೇಳಿಕೆ ನೀಡಿದ್ದರು. ●

...ಹೀಗೆ. ಹೋಮ್ ಸ್ಟೇ ಪ್ರಕರಣದ ರೂವಾರಿ ...ಸ್ ಕುಮಾರ್ ಎಂಬ ಪಾಲಿಕೆ ಸದಸ್ಯ ಇದನ್ನು ...ಾಜಕೀಯ ಜೀವನದ ಚಿಮ್ಮು ಹಲಗೆಯನ್ನಾಗಿಸಿ...ವ (ಅದಿ ಉಡುಪಿಯ ದನ ವ್ಯಾಪಾರಿಯನ್ನು ...ಳಿಸಿದ ಪ್ರಕರಣದ ರೂವಾರಿ ಯಶವಂತ್ ಸುವರ್ಣ ...ಳಗಾಗುವ ಬದಲು ರಾಜಕೀಯವಾಗಿ ಮೇಲೆ ...ತಿ) ಹುನ್ನಾರದ ಸಂಭ್ರಮದಲ್ಲಿರುವುದು ಇದನ್ನೇ ...ತ್ತದೆ.

- ಶಿ ಪುತ್ತೂರು. ದ.ಕ.

...ನವೀನ್ ಸೂರಿಂಜೆ ಸರಿಯದ ಕೆಲಸವನ್ನೇ ಮಾಡಿದರು

...ವೀನ್ ಸೂರಿಂಜೆ ಒಬ್ಬ ಪತ್ರಕರ್ತನಾಗಿ ಸರಿಯಾದ ...ನ್ನೇ ಮಾಡಿದ್ದಾರೆ. ಸುದ್ದಿಯ ಜಾಡನ್ನು ಹಿಡಿದು ...ಿ ಅವರು ಯಾವ ಕಾರಣಕ್ಕೂ ಪೊಲೀಸ್ ...ರಿಗಳಿಗೆ ಫೋನಾಯಿಸಿ ಅಂತಾರಾಷ್ಟ್ರೀಯವಾಗಿ ಗಮನ ... ಕೋಮುವಾದಿಗಳ ಭಯಾನಕ ಕೃತ್ಯವನ್ನು ...ಚಿತವಾಗಿ ತಿಳಿಸಬೇಕಾದ ಅಗತ್ಯವಿರಲಿಲ್ಲ, ಏಕೆಂದರೆ ...ಗುಪ್ತಚರ ಇಲಾಖೆಯ ಕರ್ತವ್ಯವಾಗಿತ್ತೇ ಹೊರತು ...ರ್ತವ್ಯವಲ್ಲ, ಆದರೂ ಅವರು ಅದನ್ನು ಮಾಡಿದ್ದಾರೆ. ... ಮತ್ತು ಅವರ ಮಿತ್ರರ ಕರೆಯನ್ನು ಸ್ವೀಕರಿಸದ ...ಗರು ದಾಳಿಕೋರರ ಕಾರ್ಯಾಚರಣೆ ಮುಗಿದನಂತರ ...ಸದ್ದು ಮಾತ್ರವಲ್ಲದೆ, ಅವರ ಕಣ್ಮುಂದಲ್ಲೇ ಹುಡುಗ ...ಗಿಯರ ಮೇಲೆ ದಾಳಿ ನಡೆಸಿ ಸುರಕ್ಷಿತವಾಗಿ ಪರಾರಿ...ದ್ದು ಹಾಗೂ ಆರೋಪಿಗಳನ್ನು ಸ್ಥಳದಲ್ಲೇ ಬಂಧಿಸುವ ... ಅವಕಾಶಗಳಿದ್ದರೂ ಅದನ್ನು ಮಾಡದೆ ಕೈಚೆಲ್ಲಿದ್ದು ...ನಲ್ಲಿ ಕೇಸರೀಕರಣ ಮತ್ತು ಪೊಲೀಸರ ನಡುವಿನ ...ತ್ರಿಗೆ ಜ್ವಲಂತ ನಿದರ್ಶನವಾಗಿದೆ.

...ವಾಸಲಿನಲ್ಲಿ ಒಂದೆಡೆ ಮೈತುಂಬಾ ಬಟ್ಟೆ ತೊಡದ್ದು ...ಸ ಸಂಸ್ಕೃತಿಯನ್ನು ವಿರೋಧಿಸುವ ಹಿಂದೂ ಕೋಮುವಾದಿಗಳು ಮತ್ತೊಂದೆಡೆ ಆಧುನಿಕ ಶೈಲಿಯ ಉಡುಪು ಧರಿಸುವುದನ್ನು ವಿರೋಧಿಸುತ್ತಿದ್ದಾರೆ. ಹಾಗಾದರೆ ಇವರು ಪ್ರತಿಪಾದಿಸುವ ಡ್ರೆಸ್‌ಕೋಡ್ ಯಾವುದು?

ನವೀನ್ ಸೂರಿಂಜೆಯವರು ತಾವು ಆಕ್ಷೇಪಾರ್ಹ ಘಟನೆಯನ್ನು ಚಿತ್ರೀಕರಿಸಿ ಪ್ರಸಾರ ಮಾಡಿದ್ದೇನೆಯೇ ಹೊರತು ಆಕ್ಷೇಪಾರ್ಹ ದೃಶ್ಯವಲ್ಲ ಎಂದಿದ್ದಾರೆ. ಆದರೆ ಕೋಮುವಾದಿಗಳು ಕರಾವಳಿಯ ಮಹಿಳೆಯರ ಮೇಲೆ ನಡೆಸುತ್ತಿರುವ ಅಮಾನವೀಯ ದೌರ್ಜನ್ಯದ ಚಿತ್ರಣವನ್ನು ಬೆಳಕಿಗೆ ತರದೆ ಕತ್ತಲೆಯಲ್ಲಿ ಮರೆಯಾಗಿ ಹೋಗಲು ಬಿಟ್ಟರೆ ಅದು ಅವರ ಕಿರಾತಕ ಕೃತ್ಯವನ್ನು ಬೆಂಬಲಿಸಿ





ದಂತಾಗುತ್ತದೆ. ಮಾರ್ನಿಂಗ್ ಮಿಸ್ಟ್ ಎಂಬ ಹೋಂ ಸ್ಟೇ ಮೇಲೆ ನಡೆಸಿದ ದಾಳಿಯ ಸ್ವಲ್ಪ ಭಾಗ ಹೊರಜಗತ್ತಿಗೆ ಗೊತ್ತಾದ್ದರಿಂದಲೇ ಪ್ರತಿಭಟನೆ ಸಾಧ್ಯವಾಗಿದೆ. ಇಂತಹ ಪ್ರತಿಭಟನೆಗಳಿಂದಾಗಿ ಕೋಮುವಾದಿಗಳನ್ನು ಒಂದು ಹಂತದ ಮಟ್ಟಿಗಾದರೂ ಮಣಿಸಲು ಸಾಧ್ಯವಿದೆ. ಇದು ಹೊರಜಗತ್ತಿಗೆ ತಿಳಿಯದೇ ಹೋಗಿದ್ದರೆ ಅದರ ಗಂಭೀರತೆ ಅರಿವಾಗುತ್ತಲೇ ಇರಲಿಲ್ಲ.

- ಅಬ್ದುಲ್ ಜಬ್ಬಾರ್, ಕಾಟಿಪಳ್ಳ (ದ.ಕ)

ಹಿಂದೂತ್ವ ಅನ್ನೋದು ಹುಚ್ಚರ ಹಿಂಡು. ಅದಕ್ಕಾಗಿ ಬಿಜೆಪಿ ಸರ್ಕಾರ ಅವರು ಮಾಡೋ ಕೆಲಸಕ್ಕೆ ಒಳಗೊಳಗೇ ಶಹಭಾಷ್‌ಗಿರಿ ಕೊಡುತ್ತಿರುತ್ತದೆ. ಅಮಾಯಕರು ಅನುಭವಿಸಬೇಕು ಅಷ್ಟೇ.

- ಓದುಗ, ಎಸ್‌ಎಂಎಸ್ ಮೂಲಕ

ಆಗಸ್ಟ್ 5ರ ಸಂಚಿಕೆಯಲ್ಲಿ ಲಿಂಗಣ್ಣ ಸತ್ಯಂಪೇಟೆ ಅವರ ನಿಗೂಢ ಸಾವನ್ನು ಕುರಿತ ವರದಿ ನೋಡಿದೆ. ನಕಲಿ ಸ್ವಾಮಿಗಳ ನಿಜ ಬಣ್ಣ ಬಯಲು ಮಾಡುವ ಕೆಲಸವನ್ನು ಮಾಡಿ ಜನರಲ್ಲಿ ಧಾರ್ಮಿಕ ಜಾಗೃತೆ ಮೂಡಿಸಿದ್ದರು ಲಿಂಗಣ್ಣ. ಅವರ ಸಾವಿನ ಹಿಂದೆ ಬಲವಾದ ಕೈಗಳು ಕೆಲಸ ಮಾಡಿವೆ. ಬಿಜೆಪಿ ಸರ್ಕಾರ ಕೊಲೆಗಾರರನ್ನು ಪತ್ತೆ ಮಾಡಲಿ.

- ಬಿ.ಬಿ.ರಾಜ, ಹಂಪಸಾಗರ, ಎಚ್.ಬಿ.ಹಳ್ಳಿ

ಆಗಸ್ಟ 8ರ ಸಂಚಿಕೆಯ 'ಕಂಡಹಾಗೆ' ಅಂಕಣದಲ್ಲಿ ಅಸ್ಪೃಶ್ಯತೆ ಬಗ್ಗೆ ಬರೆದದ್ದನ್ನು ಓದಿ ಕಣ್ಣು ತೇವವಾಯಿತು. ನಮ್ಮ ದೇಶದಲ್ಲಿನ್ನೂ ಅಸ್ಪೃಶ್ಯತೆ ಇರುವುದು ನಿಜವಾದರೂ ನಾಯಿಯ ವಿರುದ್ಧವೂ ಬಹಿಷ್ಕಾರ ಹಾಕುವ ಮಟ್ಟಿಗೆ ಅದು ಪೆಡಂಭೂತವಾಗಿ ಬೆಳೆದು ನಿಂತಿದೆಯೆಂದರೆ ಈ ನಾಡಿನ ದಲಿತರ ಪಾಡೇನು? ಯಾವ ಮುಖ್ಯವಾಹಿನಿಯ ಪತ್ರಿಕೆಯವರೂ (ಕನ್ನಡದಲ್ಲಿ) ಪ್ರಸ್ತಾಪಿಸದ ವಿಚಾರವನ್ನು ನೀವು ಹೈಲೈಟ್ ಮಾಡಿ ಬರೆದು ಜನರನ್ನು ಎಚ್ಚರಿಸಿದ್ದೀರಿ. ನಿಮ್ಮ ಕಾಳಜಿಗೆ ನನ್ನ ಅಭಿನಂದನೆಗಳು.

ಇನ್ನು ಅದೇ ಅಂಕಣದಲ್ಲಿ 'ರಾಜ್ಯಕ್ಕೆ ಬರ ಬಡಿದರೆ, ಸರ್ಕಾರಕ್ಕೆ ಗರ ಬಡಿದಿದೆ' ಸ್ವಘೋಷಿತ ನಾಸ್ತಿಕ ಮುಖ್ಯಮಂತ್ರಿಯ ಬಗ್ಗೆ ನೀವು ಬರೆದದ್ದು ನೂರಕ್ಕೆ ನೂರು ಸತ್ಯ! ಭಾಜಪದಿಂದ ಯಾರೇ ಮುಖ್ಯಮಂತ್ರಿ ಆದರೂ ಸಂಘಪರಿವಾರದ ಹಿಡನ್ ಅಜೆಂಡಾಗಳ ಅನುಷ್ಠಾನಕ್ಕೇನು ತೊಂದರೆಯಾಗುವುದಿಲ್ಲ, ಒಂದು ಸದೃಢ ವಿರೋಧ ಪಕ್ಷ ಮಾಡಬೇಕಾದ ಕೆಲಸವನ್ನು ಪತ್ರಿಕೆ ಮಾಡುತ್ತಿದೆ.

- ಕು.ಸ.ಮಧುಸೂದನ್, ರಂಗೇನಹಳ್ಳಿ ತರೀಕೆರೆ ತಾಲೂಕು

ಆಗಸ್ಟ್ 8ರ ಸಂಪಾದಕೀಯ ಓದಿದೆ. ಕಳೆದ ನಾಲ್ಕು ವರ್ಷಗಳಿಂದ ನೀವು ಬಿಜೆಪಿಗಳ ದಗಲಬಾಜಿ ಮಕ್ಕಳ ಬಗ್ಗೆ ಬರೆಯುತ್ತಲೇ ಇದ್ದೀರಿ. ನಿಮಗೆ ನೂರು ಥ್ಯಾಂಕ್ಸ್. ಅದರ ಜೊತೆಗೆ ನಿಮ್ಮಂಥವರ ಸಂತತಿ ಹೆಚ್ಚಾಗಬೇಕು. ಆದರೆ ಅದು ಆಗುತ್ತಿಲ್ಲ. ಈ ಮಾತನ್ನು ನಾನು ನಿಮ್ಮ ಅಭಿಮಾನಿಯಾಗಿ ಬರೆಯುತ್ತಿಲ್ಲ, ಅದು ವಾಸ್ತವ. ಪ್ರತಿ ವಾರ ನೀವು ಚಪ್ಪಲಿ ತಗೊಂಡು ಹೊಡೆದರೂ ಬಿಜೆಪಿಗಳಿಗೆ ಬುದ್ಧಿ ಬರುವುದಿಲ್ಲ, ನಾಚಿಕೆ ಇಲ್ಲದವರು. ಇವರನ್ನು ಇನ್ನು ಯಾವುದರಲ್ಲಿ ಹೊಡೆಯಬೇಕೋ ಗೊತ್ತಿಲ್ಲ.

- ನಿಲೇಶ್, ಆಲಮಟ್ಟಿ ಡ್ಯಾಮ್, ಬಿಜಾಪುರ

ಪತ್ರಿಕೆಯ ಆಗಸ್ಟ್ 15ರ ಸಂಚಿಕೆಯ ಸಂಪಾದಕೀಯ 'ಅಮಾಯಕರ ಮೇಲೆ ದಾಳಿ ಮತ್ತು ಮಾಧ್ಯಮ' ಬರಹ ಮನಮೆಚ್ಚುವಂತೆ ಮೂಡಿದೆ. ನಿಮ್ಮ ಬರವಣಿಗೆ ಮತ್ತಷ್ಟು ಬೆಳಗಲಿ.

- ಚಂದ್ರಶೇಖರ ಇತಾಳ್, ಈ ಮೇಲ್ ಮೂಲಕ

ಶಿವಸುಂದರ್ ಅವರ 'ಚಾರ್ವಾಕ' ಅಂಕಣ ವೈಚಾರಿಕತೆಯ ಆಗರ!! ಅವರು ನೋಡುವ ದೃಷ್ಟಿಕೋನ ನೇರ, ದಿಟ್ಟ. ಅವರ ಸೀಳುನೋಟವಂತೂ ಕ್ಷ ಕಿರಣಕ್ಕಿಂತಲೂ ಸ್ಪಷ್ಟ !! ವಾರವಾರವೂ ವಿಚಾರಗಳನ್ನು ಬುತ್ತಿ ನೀಡುವ ಅವರ ಹೊಟ್ಟೆ ತಂಪಾಗಿರಲಿ.

- ಡಾ. ಅಮೀರುದ್ದೀನ್ ಖಾಜಿ, ಬಿಜಾಪುರ

ಆರ್‌ಟಿಇ ಕುರಿತು ಶಿವಸುಂದರ್ ಅವರು ಬರೆದ 'ಸತ್ಯಮೇವ ಜಯತೆಗೆ ಸುರಿಸಿದ ಕಣ್ಣೀರು ಆರ್‌ಟಿಇ ವಿದ್ಯಾರ್ಥಿಗಳ ಕೂದಲನ್ನು ಕಾಪಾಡಬಹುದೇ?' ಲೇಖನ ತುಂಬಾ ಚೆನ್ನಾಗಿತ್ತು, ಥ್ಯಾಂಕ್ಸ್.

- ಯೋಗೀಶ್ ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು [illegible] ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 22-08-2012

ಮರಿ ಸಾ.ರಾ. ಚಿತ್ರರಂಗಕ್ಕೆ ಎಂಟ್ರಿ


ಅನೂಪ್

ಇತ್ತೀಚೆಗೆ ಜಯಮಾಲಾ ಅವರ ಪುತ್ರಿ ಸೌಂದರ್ಯ 'ಗಾಡ್‌ಫಾದರ್' ಚಿತ್ರದ ಮುಖಾಂತರ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು.

ಇದೀಗ ಬಂದಿರುವ ಸುದ್ದಿಯ ಪ್ರಕಾರ ಸದ್ಯದಲ್ಲೇ ನಿರ್ಮಾಪಕ ಸಾ.ರಾ.ಗೋವಿಂದು ಅವರ ಮಗ ಅನೂಪ್ ಕೂಡ ನಾಯಕನಟನಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಲಿದ್ದಾರೆ. ಅಂದರೆ ಈತನಕ ಛೇಂಬರ್‌ನಲ್ಲಿ ಪದಾಧಿಕಾರಿಗಳಾಗಿ ಮೆರೆದವರೆಲ್ಲ ನಿಧಾನವಾಗಿ ತಮ್ಮ ಮಕ್ಕಳನ್ನು ಬೆಳ್ಳಿಲೋಕಕ್ಕೆ ಪರಿಚಯಿಸುತ್ತಿದ್ದಾರೆ.

ಗೋವಿಂದು ಅವರ ಮಗ ಅನೂಪ್ ಇನ್ನೂ ದ್ವಿತೀಯ ಪಿಯುಸಿಯಲ್ಲಿ ಓದುತ್ತಿರುವ ಹುಡುಗ. ಈತನನ್ನು ನಾಯಕ ನಟನಾಗಿ ಪರಿಚಯಿಸುವ ಬಗ್ಗೆ ಅಶ್ವಿನಿ ನೆಟ್‌ವರ್ಕ್‌ನ ಕೃಷ್ಣಪ್ರಸಾದ್ ಮತ್ತು ನಿರ್ಮಾಪಕ ಶ್ರೀನಿವಾಸ್ ಅತ್ಯುತ್ಸಾಹ ತೋರಿಸುತ್ತಿದ್ದಾರೆ. ಇವರ ನಿರ್ಮಾಣ ಸಂಸ್ಥೆ ಆರಂಭಿಸಲಿರುವ 'ಡವ್' ಎಂಬ ಚಿತ್ರದಲ್ಲಿ ಅನೂಪ್ ನಾಯಕನಟನಾಗಿ ನಟಿಸುವುದು ಬಹುತೇಕ ಖಚಿತವಾಗಿದೆ. ಈ ಚಿತ್ರವನ್ನು 'ಅಲೆಮಾರಿ' ಚಿತ್ರದ ನಿರ್ದೇಶಕ ಸಂತು ನಿರ್ದೇಶಿಸಲಿದ್ದಾರೆ.

ಈ ಹಿಂದೆ ಕನ್ನಡ ಹೋರಾಟಗಾರರಾಗಿ, ನಿರ್ಮಾಪಕರಾಗಿ, ಹಂಚಿಕೆದಾರರಾಗಿ, ನಾಯಕ ನಟರಾಗಿ, ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ಪದಾಧಿಕಾರಿಯಾಗಿ... ಹೀಗೆ ಹಲವಾರು ಜವಾಬ್ದಾರಿಗಳನ್ನು ಹೊಂದಿದ್ದ ಗೋವಿಂದು ಇನ್ನು ಮುಂದೆ ನಾಯಕನಟನ ತಂದೆಯಾಗಿ ಚಿತ್ರರಂಗದಲ್ಲಿ ಮೆರೆಯಬಹುದು.

ಗೋವಿಂದು ರಾಜ್‌ಕುಮಾರ್ ಸಂಸ್ಥೆಯಾದ ವಜ್ರೇಶ್ವರಿಯಲ್ಲಿ ಪ್ರೊಡಕ್ಷನ್ ಬಾಯ್ ಆಗಿ ಕೆಲಸ ಮಾಡುವ ಹಂತದಿಂದ


ಅನೂಪ್ ತಂದೆ ಸಾ.ರಾ. ಗೋವಿಂದ್ ಜೊತೆ.....

ನಿರ್ಮಾಪಕರಾಗಿ, ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷರಾಗಿ, ಕೊನೆಗೆ ಛೇಂಬರ್ ಉಪಾಧ್ಯಕ್ಷರಾಗಿ ಬೆಳೆದುನಿಂತಿದ್ದೇ ಒಂದು ದಂತಕಥೆ.

ಗೋವಿಂದು 'ಏಳು ಸುತ್ತಿನ ಕೋಟೆ' ಎಂಬ ಚಿತ್ರವನ್ನು ನಿರ್ಮಿಸುವ ಮುಖಾಂತರ ನಿರ್ಮಾಪಕರಾದರು. ಅಲ್ಲಿಂದಾಚೆಗೆ ಅವರ ಸಂಸ್ಥೆ ಹಲವಾರು ಚಿತ್ರಗಳನ್ನು ನಿರ್ಮಿಸಿದ್ದರೂ ಬಾಕ್ಸ್ ಆಫೀಸ್‌ನಲ್ಲಿ ಗೆದ್ದದ್ದು ರವಿಚಂದ್ರನ್ ನಟಿಸಿದ್ದ 'ಕನಸುಗಾರ' ಚಿತ್ರ ಮಾತ್ರ. ಕಳೆದ ಕೆಲವು ವರ್ಷಗಳಿಂದ ಯಾಕೋ ನಿರ್ಮಾಪಕರಾಗಿ ಗೋವಿಂದು ಅಷ್ಟೇನೂ ಉತ್ಸಾಹ ತೋರಿಸುತ್ತಿಲ್ಲ ಅಥವಾ ಚಿತ್ರರಂಗದ ನಟರೇ ಅವರಿಗೆ ಕಾಲ್‌ಶೀಟ್ ನೀಡುತ್ತಿಲ್ಲವೋ ಗೊತ್ತಿಲ್ಲ, ಇಂತಹ ಸಂದರ್ಭದಲ್ಲಿ ಸ್ವತಃ ತಾವೇ ಮುಖಕ್ಕೆ ಬಣ್ಣ ಹಚ್ಚಿ ಗೋವಿಂದು ಒಮ್ಮೆ ನಾಯಕನಟನಾಗಿಯೂ ಕಾಣಿಸಿಕೊಂಡಿದ್ದುಂಟು. ಆದರೆ ಪ್ರೇಕ್ಷಕರು ಮತ್ತು ಅವರ ಅಭಿಮಾನಿಗಳು ಗೋವಿಂದು ಅವರ ಈ ಹೊಸ ಅವತಾರಕ್ಕೆ ಸಪ್ಪಗೆ ಪ್ರತಿಕ್ರಿಯಿಸಿದ್ದರಿಂದ ಆನಂತರ ಅವರ ಹೀರೋಗಿರಿಯನ್ನು ಮುಂದುವರೆಸಲಿಲ್ಲ.

ಅದೇನೇ ಇರಲಿ, ಅನೂಪ್ ಬಗ್ಗೆ ಹೇಳುವುದಾದರೆ ಈ ಹುಡುಗನಿಗೆ ಗೋವಿಂದು ಮಾತ್ರ ಅಲ್ಲ, ಅಮ್ಮ ಕೂಡ. ಏಕೆಂದರೆ ಈತ ತುಂಬ ಸಣ್ಣ... ಆತನ ತಾಯಿ ತೀರಿಕೊಂಡರು. ಆನಂತರ ಗೋವಿಂದು ತ... ಅತ್ಯಂತ ಪ್ರೀತಿ ಮತ್ತು ವಾತ್ಸಲ್ಯದಿಂದ ಬೆಳೆಸಿದರು. ಬೆ... ಗಂಟೆಗೆ ಎದ್ದು ಮಗನನ್ನು ಬೆಂಗಳೂರು ಯೂನಿವರ್ಸಿಟಿ ... ಈಜುಕೊಳಕ್ಕೆ ಕರೆದುಕೊಂಡು ಹೋಗಿ ಸ್ವಿಮ್ಮಿಂಗ್ ಮಾಡಿ... ಹಿಡಿದು ಆತನಿಗೆ ಯೂನಿಫಾರ್ಮ್ ಹಾಕಿ, ಟಿಫಿನ್‌ಬಾಕ್ಸ್‌ನಲ್ಲಿ... ತುಂಬಿಸಿ ಶಾಲೆಗೆ ಬಿಟ್ಟುಬರುವ ಜವಾಬ್ದಾರಿಯನ್ನು ... ಅವರೇ ವಹಿಸಿಕೊಂಡಿದ್ದರು.

ಈಗ ಗೋವಿಂದು ಅವರ ಮಗ ಹೀರೋ ಆ... ತಲುಪಿರುವುದನ್ನು ನೋಡಿ ಸಹಜವಾಗಿಯೇ ಅವರಿಗೆ ... ವಾಗಿರುತ್ತದೆ. ಈ ಹುಡುಗ ಚಿತ್ರದ ನಿರ್ದೇಶಕ ... ಮಾರ್ಗದರ್ಶನದಂತೆ ಈಗ ಜಿಮ್‌ಗೆ ಸೇರಿಕೊಂಡಿದ್ದಾನೆ. ... ನೃತ್ಯ, ಫೈಟಿಂಗ್, ಕುದುರೆ ಸವಾರಿ ಮೊದಲಾದ ಕಲೆಯ... ಮಾಡುತ್ತಿದ್ದಾನೆ. ಹೀರೋ ಆಗುವ ಮೊದಲು ಏನೇನ... ಮಾಡಿಕೊಳ್ಳಬೇಕೋ ಅದೆಲ್ಲವನ್ನೂ ಅನೂಪ್ ಚಾ... ನಿರ್ವಹಿಸುತ್ತಿದ್ದಾನೆ.

ಇದೇ ಆಗಸ್ಟ್ 15 ರಂದು ಸಾ.ರಾ.ಗೋವಿಂದು ಅ... ಹಬ್ಬದ ದಿನದಂದೇ ಅಧಿಕೃತವಾಗಿ ಅವರ ಮಗ ಅನೂಪ್ ... ನಾಗುವ ಸುದ್ದಿ ಪ್ರಕಟಗೊಳ್ಳಬಹುದೆಂಬ ಮಾತು ಕೇ... ಗೋವಿಂದು ಚಿತ್ರರಂಗದಲ್ಲಿ ತನ್ನದೇ ಆದ ಶೈಲಿಯಲ್ಲಿ ಒಂದು ... ರೂಪಾಂತರಗೊಂಡಿರುವುದರಿಂದ ಮುಂಬರುವ ದಿನಗ... ಶಕ್ತಿಯನ್ನು ಮಗನ ಭವಿಷ್ಯ ರೂಪಿಸಲು ಉಪಯೋಗಿಸಿಕೊಳ್... ಎಂಬುದೇ ನಮ್ಮ ಸದಾಶಯ.

ಕಬಡ್ಡಿಯಿಂದ ಸೂರ್ಯನತ್ತ

ತನ್ನ ಮೊದಲ ಚಿತ್ರದಲ್ಲೇ ರಾಜ್ಯ ಪ್ರಶಸ್ತಿಯನ್ನು ಪಡೆದ ನಿರ್ದೇಶಕ ನರೇಂದ್ರಬಾಬು ಐದು ವರ್ಷ ಅಜ್ಞಾತವಾಸದಲ್ಲಿ ಕಳೆದನಂತರ ಇದೀಗ ದೊಡ್ಡ ಸುದ್ದಿಯೊಂದಿಗೆ ಹೊರಬರುತ್ತಿದ್ದಾರೆ.

ನರೇಂದ್ರಬಾಬು ನಿರ್ದೇಶಿಸಿದ್ದ 'ಕಬಡ್ಡಿ' ಚಿತ್ರಕ್ಕೆ 2009ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ನೀಡುವ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಬಂದಿತ್ತು, ಅದಾದ ನಂತರ ನರೇಂದ್ರಬಾಬು ಕೈಯಲ್ಲಿ ಹಲವಾರು ಕಥೆಗಳಿದ್ದರೂ ಗಾಂಧಿನಗರದ ಜನ ಅವರಿಗೆ ಅವಕಾಶವನ್ನೇ ನೀಡಿರಲಿಲ್ಲ. ಹೀಗಾಗಿ ಒಂದೆರಡು ಚಿತ್ರಗಳಿಗೆ ಸಂಭಾಷಣೆ ಬರೆಯುವುದರಲ್ಲೇ ತೃಪ್ತಿಪಟ್ಟ ನರೇಂದ್ರಬಾಬು ಈಗ ಒಂದು ಅಪರೂಪದ ಕಥಾವಸ್ತುವನ್ನು ಕೈಗೆತ್ತಿಕೊಂಡಿದ್ದಾರೆ.

ನರೇಂದ್ರಬಾಬು ಹಿಂದಿಯ ಜನಪ್ರಿಯ ನಾಟಕವೊಂದನ್ನು ಈಗ ಸಿನಿಮಾ ಮಾಡಲು ಹೊರಟಿದ್ದಾರೆ. ಈ ನಾಟಕ ಈಗಾಗಲೇ ಒಂದು ಲಕ್ಷ ಪ್ರದರ್ಶನಗಳನ್ನು ಕಂಡು ದಾಖಲೆ ಮಾಡಿದೆಯಲ್ಲದೆ ಮುಂಬೈನಲ್ಲಿ ಈಗಲೂ ತುಂಬಿದ ಪ್ರದರ್ಶನಗಳನ್ನು ಕಾಣುತ್ತಿದೆ. 'ಸೂರ್ಯಕೆ ಅಂತಿಮ್ ಕಿರಣಸ್ ಸೆ ಪೆಹಲೆ ಕಿರಣ್ ತಕ್' ಎಂಬ ಈ ನಾಟಕವನ್ನು ಬರೆದವರು ಸುರೇಂದ್ರವರ್ಮ. ಅವರ ಬಳಿ ನಾಟಕದ ಹಕ್ಕನ್ನು ಖರೀದಿಸಲು ನರೇಂದ್ರಬಾಬು ಹೋದಾಗ "ಅತ್ಯಂತ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಸಾಹಿತಿಗಳಿರುವ ರಾಜ್ಯದಲ್ಲಿ ನನ್ನ ನಾಟಕ ಸಿನಿಮಾ ಆಗುವುದು ನನಗೆ ಅತ್ಯಂತ ಸಂತೋಷ ತಂದಿದೆ" ಎಂದು ಅವರು ಬಾಬುರವರನ್ನು ಸ್ವಾಗತಿಸಿದರಂತೆ. ಅಂದಹಾಗೆ, ಬಾಬು ಈ ಚಿತ್ರಕ್ಕೆ ಕನ್ನಡದಲ್ಲಿ 'ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ' ಎಂದು ಹೆಸರಿಟ್ಟಿದ್ದಾರೆ.

ನರೇಂದ್ರಬಾಬು ರವೀಂದ್ರ ಕಲಾಕ್ಷೇತ್ರದ ಮೆಟ್ಟಿಲ ಮೇಲೆ ಹಲವಾರು ಸಂಜೆಗಳನ್ನು ಕಳೆದಿರುವುದರಿಂದ ಈ ನಾಟಕವನ್ನು ಅದರ ಮೂಲಭಾವಕ್ಕೆ ತೊಂದರೆಯಾಗದಂತೆ ಸಿನಿಮಾಕ್ಕೆ ರೂಪಾಂತರಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಆದೇನೇ ಇರಲಿ, ಐದು ವರ್ಷಗಳ ಬಳಿಕ 'ಕಬಡ್ಡಿ' ಚಿತ್ರದ ತರಹ ಒಂದು ವಿಶೇಷವಾದ ಕಥಾವಸ್ತುವನ್ನು ಬಾಬು ಕೈಗೆತ್ತಿಕೊಂಡಿರುವುದೇ ಮೆಚ್ಚುಗೆಯ ಸಂಗತಿ.



'ಸಾಗರ್'
ರಾಧಿಕಾ ಪಂಡಿತ್
ಪ್ರಜ್ವಲ್ ದೇವರಾಜ್,
ಹರಿಪ್ರಿಯ, ಸಂಜನಾ

ರಾಧಿಕಾಳ ಸೂಕ್ಷ್ಮ...

ಫಾರ್ ಎ ಚೇಂಜ್ ಕನ್ನಡದ ನಟಿಯೊಬ್ಬಳು ತನ್ನೆಲ್ಲ ಅಹಂ, ವಯ್ಯಾರ, ಬಿಂಕಗಳನ್ನು ಬದಿಗಿಟ್ಟು ನಿರ್ಮಾಪಕರ ನೋವನ್ನು ಅರ್ಥಮಾಡಿಕೊಂಡು ಸ್ಪಂದಿಸಿದ ಅಪರೂಪದ ಘಟನೆ ಬೆಳಕಿಗೆ ಬಂದಿದೆ.

ಇತ್ತೀಚೆಗೆ 'ಅದ್ದೂರಿ' ಚಿತ್ರದ ಯಶಸ್ಸಿನ ಸಂತೋಷಕೂಟದಲ್ಲಿ ನಿರ್ದೇಶಕ ಅರ್ಜುನ್ ಈ ಚಿತ್ರವನ್ನು ತಯಾರಿಸಲು ತಾನು ನಾಲ್ಕು ವರ್ಷಗಳ ಕಾಲ ಎದುರಿಸಿದ ಎಡರುತೊಡರುಗಳನ್ನು ವಿವರಿಸುತ್ತಿದ್ದರು. ಅಂತಹ ಎಲ್ಲ ಕಷ್ಟಗಳ ನಡುವೆಯೂ ಚಿತ್ರದ ನಾಯಕಿ ರಾಧಿಕಾ ಪಂಡಿತ್ ನಿರ್ದೇಶಕ ಕರೆದಾಗಲೆಲ್ಲ ಹಗಲುರಾತ್ರಿಯೆನ್ನದೇ ಶೂಟಿಂಗ್‌ಗೆ ಬಂದದ್ದು, ಎಷ್ಟೋ ಬಾರಿ ಕೇವಲ ಒಂದು ಗಂಟೆಯ ಅವಧಿಗೂ ಬಂದು ನಟಿಸಿದ್ದನ್ನು ಅವರು ವಿವರಿಸಿದಾಗ ಅರ್ಜುನ್ ಅವರ ಕಂಠ ಗದ್ಗದಿತವಾಯಿತು, ಅವರ ಕಣ್ಣಂಚಿನಿಂದ ನೀರು ಹರಿದುಬಂದಿತು. ಅರ್ಜುನ ಮುಂದೆ ಮಾತನಾಡದೇ ಅರ್ಧಕ್ಕೆ ತಮ್ಮ ಮಾತನ್ನು ನಿಲ್ಲಿಸಿದರು.

ಅದೇ ರಾಧಿಕಾ ಪಂಡಿತ್ ಮೊನ್ನೆ ಮತ್ತೊಂದು ಸಿನಿಮಾದ ಪತ್ರಿಕಾಗೋಷ್ಠಿಗೆ ಹಾಜರಾದಾಗಲೂ ಆಕೆಯನ್ನು ಆ ಚಿತ್ರದ ನಿರ್ಮಾಪಕರು ಮತ್ತು ನಿರ್ದೇಶಕರು ಹಾಡಿ ಹೊಗಳಿದರು. ಅದು ಆಕೆ ನಟಿಸಿದ ಮೊದಲ ಚಿತ್ರ 'ಹದಿನೆಂಟನೇ ಕ್ರಾಸ್ ಅಡ್ಡ' ಕುರಿತ ಪತ್ರಿಕಾಗೋಷ್ಠಿ. ನಿಮಗೆ ಗೊತ್ತಿರುವಂತೆ ಈ ಚಿತ್ರ ಆರಂಭವಾಗಿದ್ದು ಆರು ವರ್ಷಗಳ ಹಿಂದೆ. ಅಂದು ಈ ಚಿತ್ರದಲ್ಲಿ ನಟಿಸಲು ರಾಧಿಕಾ ಕೆಲವು ಸಾವಿರ ಸಂಭಾವನೆ ಪಡೆದಿದ್ದರೆ ಅದೇ ಹೆಚ್ಚು. ಆದರೀಗ ರಾಧಿಕಾ ಬಿಡುವಿಲ್ಲದ ನಟಿ ಆಗಿದ್ದಾಳೆ. ಇತ್ತೀಚೆಗೆ ತಮಗೆ ಸಂಭಾವನೆ ಕೊಟ್ಟಿಲ್ಲವೆಂದು ರಮ್ಯ, ಐಂದ್ರಿತಾ ರೈ, ರಾಗಿಣಿ, ಸ್ಮಿತಾ, ಹರಿಪ್ರಿಯ ಮೊದಲಾದ ನಟಿಯರೆಲ್ಲ ಸುದ್ದಿ ಮಾಡಿದ್ದು ನಿಮಗೆ ಗೊತ್ತಿದೆ. ಇದೇ ಕಾರಣಕ್ಕೆ ರಮ್ಯ ಛೇಂಬರ್ ಮೆಟ್ಟಿಲೇರಿದ್ದು ಮಾತ್ರವಲ್ಲ ರಮ್ಯ ಟಿ.ವಿ. ಛಾನಲ್‌ಗಳಲ್ಲೂ ಕಾಣಿಸಿಕೊಂಡಿದ್ದರು. ಇಂತಹ ಟ್ರೆಂಡ್ ಕನ್ನಡ ಚಿತ್ರರಂಗದಲ್ಲಿ ಚಾಲ್ತಿಯಲ್ಲಿರುವಾಗ ರಾಧಿಕಾ ಪಂಡಿತ್ ಆರು ವರ್ಷಗಳ ಹಿಂದಿನ ಚಿತ್ರ ಬಿಡುಗಡೆಯಾದಾಗ ಅದರ ಪ್ರಚಾರಕ್ಕೆ ಮತ್ತು ಪತ್ರಿಕಾಗೋಷ್ಠಿಗೆ ಹಾಜರಾಗಿ ತನ್ನ ವೃತ್ತಿಪರತೆಯನ್ನು ಪ್ರದರ್ಶಿಸಿದ್ದನ್ನು ಗಾಂಧಿನಗರದ ಎಲ್ಲರೂ ಮೆಚ್ಚಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com